ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜೂನ್ 28 ಶುಕ್ರವಾರ 2024

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 73 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸ್ವಾಮೀಜಿ ಅವರ ಸ್ಥಾನ ಬಿಟ್ಟುಕೊಡಲಿ; ನಾನೇ ಸ್ವಾಮೀಜಿ ಆಗುತ್ತೇನೆ!

ಬೆಂಗಳೂರು, ಜೂ.27– ಸಿದ್ದರಾಮಯ್ಯನವರು ತಮ್ಮ ಮುಖ್ಯಮಂತ್ರಿ ಸ್ಥಾನವನ್ನು ಬಿಟ್ಟುಕೊಟ್ಟು ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ವಿಶ್ವ ಒಕ್ಕಲಿಗ ಮಹಾಸಂಸ್ಥಾನದ ಕೆ. ಚಂದ್ರಶೇಖರ ನಾಥ ಸ್ವಾಮೀಜಿ ನೀಡಿದ ಹೇಳಿಕೆ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.



ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಹಕಾರ ಸಚಿವ ಕೆ.ಎನ್.ರಾಜಣ್ಣ, ಸ್ವಾಮೀಜಿಗಳು ಯಾವ ಕಾರಣಕ್ಕಾಗಿ ಈ ರೀತಿ ಹೇಳಿದ್ದಾರೋ ಗೊತ್ತಿಲ್ಲ. ಇದರಲ್ಲಿ ಸದುದ್ದೇಶ ಇದೆಯೋ, ದುರುದ್ದೇಶ ಇದೆಯೋ ಎನ್ನುವುದನ್ನು ನೋಡಬೇಕಿದೆ. ಯಾರಾದರೂ ತಮಗಿರುವ ಸ್ಥಾನವನ್ನು ಬಿಟ್ಟುಕೊಡಲು ಸಿದ್ಧರಿರುತ್ತಾರಾ. ಸ್ವಾಮೀಜಿಯವರು ಈಗ ಅವರು ಇರುವ ಸ್ವಾಮೀಜಿ ಪಟ್ಟವನ್ನು ಬಿಟ್ಟುಕೊಡಲಿ, ನಾನು ಸ್ವಾಮೀಜಿ ಆಗುತ್ತೇನೆ, ಬಿಟ್ಟು ಕೊಡಲು ಅವರು ಸಿದ್ಧರಿದ್ದಾರಾ? ಎಂದು ಸಚಿವ ರಾಜಣ್ಣ ಪ್ರಶ್ನಿಸಿದ್ದಾರೆ. ● 2ನೇ ಪುಟಕ್ಕೆ

ಸಿದ್ದರಾಮಯ್ಯನವರೇ...
ಡಿ.ಕೆ.ಶಿವಕುಮಾರರನ್ನ ಮುಖ್ಯಮಂತ್ರಿ ಮಾಡಿ

ಕೆಂಪೇಗೌಡರ ಜಯಂತಿಯಲ್ಲಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಚಂದ್ರಶೇಖರ ಸ್ವಾಮೀಜಿ ಬೇಡಿಕೆ



ಬೆಂಗಳೂರಲ್ಲಿ ನಡೆದ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಚಂದ್ರಶೇಖರ ಸ್ವಾಮೀಜಿ ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡುವಂತೆ ಸಿದ್ದರಾಮಯ್ಯ ಅವರಲ್ಲಿ ಬೇಡಿಕೆ ಸಲ್ಲಿಸಿ, ಅಚ್ಚರಿ ಮೂಡಿಸಿದರು.

> **“ಸಿದ್ದರಾಮಯ್ಯ ಅಧಿಕಾರದಲ್ಲಿರುವುದರಿಂದ, ಅವರು ಮನಸ್ಸು ಮಾಡಿದರೆ ಸುಲಭದಲ್ಲಿ ಆಗುತ್ತೆ. ಹೋರಾಟ ಮಾಡಿ, ಕಚ್ಚಾಡಿಕೊಂಡು ಮಾಡೋದಕ್ಕಿಂತ ನನ್ನ ಸ್ನೇಹಿತ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಲಿ ಅಂತಾ ಮಾಡಬೇಕಾಗುತ್ತೆ. ಮುಖ್ಯಮಂತ್ರಿ ಆಯ್ಕೆ ಪಕ್ಷದ ನಿರ್ಣಯ ಎಂದು ಹೇಳುವುದು ನೆಪ ಮಾತ್ರ, ಡಿ.ಕೆ.ಶಿವಕುಮಾರ್ ಕಷ್ಟಪಟ್ಟಿದ್ದಾರೆ. ಪಕ್ಷ ಸಂಘಟನೆ ಮಾಡಿ 135 ಸ್ಥಾನ ಗೆದ್ದಿದ್ದಾರೆ. ಅವರು ಮುಖ್ಯಮಂತ್ರಿ ಆಗುವುದು ಒಳ್ಳೆಯದು. ಸಿದ್ದರಾಮಯ್ಯ ಈಗಾಗಲೇ 6 ವರ್ಷ ಅಧಿಕಾರ ಅನುಭವಿಸಿದ್ದಾರೆ. ಅವರು, ಡಿ.ಕೆ.ಶಿವಕುಮಾರ್ ಅವರಷ್ಟು ಕಷ್ಟಪಟ್ಟಿಲ್ಲ.** – ಚಂದ್ರಶೇಖರ ಸ್ವಾಮೀಜಿ

ಬೆಂಗಳೂರು, ಜೂ.27(ಕೆಎಂಶಿ)– ಸಿದ್ದರಾಮಯ್ಯ ಅವರು ಅಧಿಕಾರ ಬಿಟ್ಟುಕೊಟ್ಟು, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲು ಅವಕಾಶ ಮಾಡಿಕೊಡುವಂತೆ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಚಂದ್ರಶೇಖರ ಸ್ವಾಮೀಜಿ ಬೇಡಿಕೆ ಮಂಡಿಸಿದ್ದಾರೆ.

ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎದುರೇ ಈ ಮನವಿ ಮಾಡಿದ್ದಾರೆ. ಮೂವರು ಡಿಸಿಎಂ ಮಾಡಬೇಕು ಎಂದು ಸಿದ್ದರಾಮಯ್ಯ ಸಂಪುಟದ ಕೆಲ ಸದಸ್ಯರೇ ಬಹಿರಂಗವಾಗಿ ಬೇಡಿಕೆ ಮಂಡಿಸಿ, ವರಿಷ್ಠರ ಅಂಗಳಕ್ಕೂ ಹೊತ್ತೊಯ್ದಿರುವ ವೇಳೆ ಸ್ವಾಮೀಜಿಯವರ 'ಮುಖ್ಯಮಂತ್ರಿ' ಬೇಡಿಕೆ ಈಗ ರಾಜ್ಯ ಕಾಂಗ್ರೆಸ್‌ನಲ್ಲಿ ಮತ್ತೊಂದು ಕಾಳಗಕ್ಕೆ ನಾಂದಿ ಹಾಡಿದಂತಿದೆ. ನೀವು ಈಗಾಗಲೇ ಮುಖ್ಯಮಂತ್ರಿ ಸ್ಥಾನ ಅನುಭವಿಸಿದ್ದೀರಿ. ಇನ್ನುಳಿದ ಅವಧಿಯನ್ನು ಡಿ.ಕೆ. ಶಿವಕುಮಾರ್‌ಗೆ ಬಿಟ್ಟುಕೊಡಬೇಕು ಎಂದು ಮನವಿ ಮಾಡಿದರು. ನೀವು ಮನಸ್ಸು ಮಾಡಿದರೆ ಮಾತ್ರ ಶಿವಕುಮಾರ್ ಮುಖ್ಯಮಂತ್ರಿ ಆಗಲು ಸಾಧ್ಯ. ಇಲ್ಲದಿದ್ದರೆ ಆಗುವುದಿಲ್ಲ. ದಯವಿಟ್ಟು ನೀವು ಡಿ.ಕೆ. ಶಿವಕುಮಾರ್‌ರನ್ನು ಮುಖ್ಯಮಂತ್ರಿ ಮಾಡಿ. ಅವರು ಪಕ್ಷ ಮತ್ತು ಸರ್ಕಾರದಲ್ಲಿ ಶ್ರಮ ಪಟ್ಟಿದ್ದಾರೆ. ಅದಕ್ಕೆ ದೊಡ್ಡ ಗೌರವ ನಿಮ್ಮಿಂದಲೇ ದೊರೆಯಬೇಕು ಎಂದು ಬೇಡಿಕೆ ಸಲ್ಲಿಸಿದ್ದಾರೆ.

ಬೆಂಗಳೂರು ವಿಭಜಿಸಬೇಡಿ: ಬೆಂಗಳೂರನ್ನು ವಿಭಜಿಸುವ ಕೆಲಸ ಮಾಡಬೇಡಿ ಎಂದು ಸರ್ಕಾರವನ್ನು ಒತ್ತಾಯಿಸಿದ ಅವರು, ಹಿಂದೆ ಭಾಗ ಮಾಡುವ ಪ್ರಯತ್ನ ನಡೆದಾಗ ಅದಕ್ಕೆ ವಿರೋಧ ಮಾಡಿದ್ದಲ್ಲದೆ, ಹೋರಾಟ ಮಾಡಿ ತಡೆಯಲು ಸಾಧ್ಯವಾಯಿತು. ಈಗ ಮತ್ತೆ ಅದೇ ಕೂಗು ಎದ್ದಿದೆ. ನೀವು ಇಬ್ಭಾಗ ● 6ನೇ ಪುಟಕ್ಕೆ

ಮುಖ್ಯಮಂತ್ರಿ ಬದಲಾವಣೆ; ಉಪ ಮುಖ್ಯಮಂತ್ರಿಗೆ ಬಡ್ತಿ ವಿಚಾರ ಹಾದಿ–ಬೀದೀಲಿ ಮಾತಾಡಬೇಡಿ...!


- ಸಚಿವರು, ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಾರ್ನಿಂಗ್
- ಡಿಸಿಎಂ ಸ್ಥಾನ ಕೇಳುವವರು ಮಾಧ್ಯಮಗಳ ಮುಂದೆ ಹೇಳಿಕೆ ನೀಡದೇ ವರಿಷ್ಠರಿಂದ ಪರಿಹಾರ ತನ್ನಿ: ಡಿ.ಕೆ.ಶಿವಕುಮಾರ್

ಬೆಂಗಳೂರು, ಜೂ.27(ಕೆಎಂಶಿ)– ಸರ್ಕಾರ ಮತ್ತು ಪಕ್ಷದ ಆಂತರಿಕ ವಿಚಾರಗಳನ್ನು ಹಾದಿ–ಬೀದಿಯಲ್ಲಿ ಮಾತನಾಡುವುದನ್ನು ನಿಲ್ಲಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸಚಿವರು ಮತ್ತು ಶಾಸಕರಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಮುಖ್ಯಮಂತ್ರಿ ಅವರ ಬದಲಾವಣೆ ಆಗಲಿ, ಉಪ ಮುಖ್ಯಮಂತ್ರಿ ಅವರಿಗೆ ಬಡ್ತಿ ವಿಚಾರವೂ ಸೇರಿದಂತೆ ಅನಗತ್ಯ ಹೇಳಿಕೆ ನೀಡಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಡಿ ಎಂದಿದ್ದಾರೆ. ಇನ್ನೊಂದೆಡೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಹೆಚ್ಚುವರಿ ಉಪ ಮುಖ್ಯಮಂತ್ರಿ ಬಗ್ಗೆ ಮಾಧ್ಯಮಗಳ ಮುಂದೆ ಹೇಳಿಕೆ ನೀಡುವ ಬದಲು ದೆಹಲಿಗೆ ತೆರಳಿ ವರಿಷ್ಠರಿಂದ ಪರಿಹಾರ ತನ್ನಿ ಎಂದು ಅಪಸ್ವರ ಎತ್ತುತ್ತಿರುವ ಸಚಿವರುಗಳಿಗೆ ತಿರುಗೇಟು ನೀಡಿದ್ದಾರೆ. ಮುಂದುವರೆದು ಮಾತನಾಡಿದ ಮುಖ್ಯಮಂತ್ರಿ ಅವರು, ಪಕ್ಷ ಮತ್ತು ಸರ್ಕಾರದಲ್ಲಿ ಯಾವ ಸಮಯಕ್ಕೆ ಏನಾಗಬೇಕೋ ಅದನ್ನು ವರಿಷ್ಠರು ತೀರ್ಮಾನಿಸುತ್ತಾರೆ. ಅನಗತ್ಯ ಹೇಳಿಕೆ ನೀಡಿ ಗೊಂದಲ ಸೃಷ್ಟಿಸುವುದು ಬೇಡ ಎಂದಿದ್ದಾರೆ. ಸಹಕಾರ ಸಚಿವ ಕೆ.ಎನ್.ರಾಜಣ್ಣ ● 2ನೇ ಪುಟಕ್ಕೆ

ಇಷ್ಟೆಲ್ಲಾ ಅವಮಾನ ಆದ್ಮೇಲೆ ಸಿದ್ದರಾಮಯ್ಯ ಸಿಎಂ ಸ್ಥಾನದಲ್ಲಿ ಮುಂದುವರೆಯುವುದು ಬೇಡ

ಬೆಂಗಳೂರು, ಜೂ. 27– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಷ್ಟೊಂದು ಅವಮಾನ ಮಾಡಿಸಿಕೊಂಡು ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯುವುದು ಬೇಡ. ಕೂಡಲೇ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಎಂದು ವಿಪಕ್ಷ ನಾಯಕ ಆರ್. ಅಶೋಕ್ ಆಗ್ರಹಿಸಿದ್ದಾರೆ.



ಆರ್.ಅಶೋಕ್

ಬೆಂಗಳೂರಿನಲ್ಲಿ ಡಿ.ಕೆ ಶಿವಕುಮಾರ್ ಅವರಿಗೆ ಸಿಎಂ ಸ್ಥಾನ ಬಿಟ್ಟು ಕೊಡಿ ಎಂಬ ಚಂದ್ರಶೇಖರ ಸ್ವಾಮೀಜಿ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಅವರು, ಕರೆದು ಅದೇನು ಆಯ್ತು ಎನ್ನುವ ಗಾದೆ ರೀತಿ ಸ್ವಾಮೀಜಿ ಮಾತಾಗಿದೆ. ಸಿದ್ದರಾಮಯ್ಯ ಡಿಸಿಎಂ ತಂತ್ರಕ್ಕೆ ಇದು ಡಿಕೆ ಶಿವಕುಮಾರ್ ಪ್ರತಿತಂತ್ರ. ಶಿವಕುಮಾರ್ ಅವರಿಗೆ ತಮ್ಮನ ಸೋಲು ಸಹಿಸಲು ಆಗುತ್ತಿಲ್ಲ. ಡಿ.ಕೆ ಸುರೇಶ್ ಸೋಲಿಸಿದ್ದು ಯಾರು ಎಂದು ಅವರಿಗೆ ಗೊತ್ತಾಗಿದೆ. ಹೀಗಾಗಿ ಅದಕ್ಕೆ ಕೌಂಟರ್ ಆಗಿ ಸ್ವಾಮೀಜಿ ಹೇಳಿಕೆ ಬಂದಿದೆ ಎಂದು ಅಶೋಕ್ ಹೇಳಿದರು.

ಹೆಚ್ಚುವರಿ ಡಿಸಿಎಂ ಬಗ್ಗೆ ಸಿದ್ದರಾಮಯ್ಯ ಬಣದವರು ಮಾತಾಡಿದ್ದರು. ಅದಕ್ಕೆ ಇದು ಕೌಂಟರ್. ಸಿಎಂ ಧರ್ಮಾತ್ಮರಾಗಿದ್ದರೆ ಸಿಎಂ ಸ್ಥಾನ ಬಿಟ್ಟುಕೊಡಬೇಕು ಎಂದು ಸ್ವಾಮೀಜಿ ಹೇಳಿದ್ದಾರೆ. ಇದಕ್ಕೆ ಕಾಂಗ್ರೆಸ್‌ನವರು ಉತ್ತರ ಕೊಡಬೇಕು. ಸಿದ್ದರಾಮಯ್ಯಗೆ ಗೌರವ ಇದ್ದರೆ ರಾಜೀನಾಮೆ ಕೊಡುವುದು ಒಳ್ಳೆಯದು. ಇಷ್ಟು ಅವಮಾನ ಆದ ಮೇಲೆ ● 2ನೇ ಪುಟಕ್ಕೆ

ಪಾನಿಪುರಿ... ಕ್ಯಾನ್ಸರ್‌ಕಾರಿ!

- ರಾಜ್ಯ ಆಹಾರ ಇಲಾಖೆ ಎಚ್ಚರಿಕೆ
- ಕಾಟನ್ ಕ್ಯಾಂಡಿ, ಗೋಬಿ, ಕಬಾಬ್ ನಂತರ ಮತ್ತೊಂದು ಹಾನಿಕಾರಕ ಆಹಾರ ಆತಂಕ

ಬೆಂಗಳೂರು: ಪಾನಿಪುರಿ ಸೇವನೆ ಮಾಡುವುದು ಕ್ಯಾನ್ಸರ್ ಸೇರಿದಂತೆ ಗಂಭೀರ ಆರೋಗ್ಯ ಸಮಸ್ಯೆಗಳನ್ನು ಉಂಟು ಮಾಡುತ್ತಿದೆ ಎಂದು ರಾಜ್ಯ ಆಹಾರ ಇಲಾಖೆ ಎಚ್ಚರಿಸಿದೆ.



ಈ ಹಿಂದೆ ಕಾಟನ್ ಕ್ಯಾಂಡಿ, ಮಂಚೂರಿಯನ್ ಮತ್ತು ಇತ್ತೀಚೆಗೆ ಕಬಾಬ್‌ಗಳಲ್ಲಿ ಬಳಸಲಾಗುತ್ತಿದ್ದ ಕೃತಕ ಬಣ್ಣಗಳ ನಿಷೇಧದ ಬಳಿಕ ಇದೀಗ ರಾಜ್ಯ ಆರೋಗ್ಯ ಇಲಾಖೆ ಅಧಿಕಾರಿಗಳ ಕಣ್ಣು ಪಾನಿಪುರಿ ಮೇಲೆ ಬಿದ್ದಿದ್ದು, ಪಾನಿಪುರಿ ತಯಾರಿಕೆಯಲ್ಲಿ ಬಳಸುವ ನೀರಿನಲ್ಲಿ ಕ್ಯಾನ್ಸರ್ ಕಾರಕ ಬಣ್ಣಗಳನ್ನು ಬೆರೆಸಲಾಗುತ್ತಿದೆ ಎಂಬ ಶಂಕೆ ವ್ಯಕ್ತವಾಗಿದೆ. ● 2ನೇ ಪುಟಕ್ಕೆ

ಮೈಸೂರು ಹೊರವಲಯದಲ್ಲಿ ನೂತನ ಟೌನ್‌ಶಿಪ್

- ಈ ಯೋಜನೆ ಅನುಷ್ಠಾನ ಸಂಬಂಧ ಕೆಯುಐಡಿಎಫ್‌ಸಿ ನೋಡಲ್ ಏಜೆನ್ಸಿಯಾಗಿ ನೇಮಕ
- ರಾಜ್ಯದ ಎಂಟು ನಗರಪಾಲಿಕೆ, ನಗರ ಹೊರವಲಯದಲ್ಲಿ ಟೌನ್‌ಶಿಪ್ ನಿರ್ಮಾಣ

ಬೆಂಗಳೂರು: ಮೈಸೂರು ನಗರ ಸೇರಿದಂತೆ ರಾಜ್ಯದ ಎಂಟು ನಗರಪಾಲಿಕೆ ಮತ್ತು ನಗರ ಹೊರವಲಯಗಳಲ್ಲಿ ನೂತನ ಟೌನ್ ಶಿಪ್‌ಗಳನ್ನು ಮಾಡಲು ಸರ್ಕಾರ ಇಂದಿಲ್ಲಿ ಚಾಲನೆ ನೀಡಿದೆ.

ಟೌನ್‌ಶಿಪ್‌ಗಳ ಸ್ಥಾಪನೆ ಮತ್ತು ಮಾದರಿ ವಿನ್ಯಾಸ ಮಾಡಲು ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ (ಕೆಯುಐಡಿಎಫ್‌ಸಿ) ಸಂಸ್ಥೆಯನ್ನು ನೋಡಲ್ ಏಜೆನ್ಸಿಯನ್ನಾಗಿ ನೇಮಿಸಿ ಸರ್ಕಾರ ಇಂದಿಲ್ಲಿ ಆದೇಶ ಹೊರಡಿಸಿದೆ. ನಗರ ದಟ್ಟಣೆ ಹೆಚ್ಚಳವಾಗಿ ಅದರ ವಿನ್ಯಾಸ ಮತ್ತು ಸ್ವರೂಪ ಕಳೆದು ಕೊಳ್ಳುತ್ತಿರುವುದರಿಂದ ದೆಹಲಿ ಸಮೀಪ ನಿರ್ಮಾಣಗೊಂಡಿರುವ ನೊಯಿಡಾ ಮಾದರಿಯಲ್ಲಿ ಈ ಟೌನ್‌ಶಿಪ್‌ಗಳನ್ನು ನಿರ್ಮಿಸಲು ಸರ್ಕಾರ ಮುಂದಾಗಿದೆ.

ಮೈಸೂರು ಅಷ್ಟೇ ಅಲ್ಲದೆ, ಕಲಬುರಗಿ, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಕೆಜಿಎಫ್, ತುಮಕೂರು ಜಿಲ್ಲೆಯ ವಸಂತನರಸಾಪುರ ಹಾಗೂ ಬಳ್ಳಾರಿ ನಗರಗಳ ಹತ್ತಿರದಲ್ಲಿ ಈ ಟೌನ್ ಶಿಪ್‌ಗಳು ನಿರ್ಮಾಣವಾಗಲಿವೆ. ಹೊಸ ಟೌನ್‌ಶಿಪ್ ನಿರ್ಮಾಣಕ್ಕೆ ನೇಮಕಗೊಂಡಿರುವ ಸಂಸ್ಥೆಯು ಸಮಗ್ರ ಟೌನ್‌ಶಿಪ್‌ಗಳ ತಾಂತ್ರಿಕ ಅಂಶಗಳ ಪರಿಶೀಲನೆಯನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ಅವರಿಗೆ ವಹಿಸಿ ಸರ್ಕಾರ ತಾತ್ವಿಕ ಅನುಮೋದನೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 2024–25ನೇ ಸಾಲಿಗೆ ಮಂಡಿಸಿದ ಆಯವ್ಯಯದಲ್ಲಿ ಹೊಸ ಟೌನ್ ಶಿಪ್ ನಿರ್ಮಾಣ ಪ್ರಸ್ತಾವನೆಯನ್ನು ಮಂಡಿಸಿದ್ದರು. ನಗರ–ಪಟ್ಟಣಗಳ ಸಮೀಪ ಜಮೀನುಗಳಲ್ಲಿ ಸಮಗ್ರ ಟೌನ್‌ಶಿಪ್‌ಗಳನ್ನು ಸ್ಥಾಪಿಸಲು ಆಸಕ್ತಿ ಹೊಂದಿರುವ ಅಭಿವೃದ್ಧಿದಾರರನ್ನು ಆಹ್ವಾನಿಸಲು ತೀರ್ಮಾನಿಸಿದೆ. ನಗರ ನಿರ್ಮಾಣ ಯೋಜನೆಯಲ್ಲಿ ಆರ್ಥಿಕ, ಮೂಲ ಸೌಕರ್ಯಗಳ ಅಭಿವೃದ್ಧಿ ಹಾಗೂ ತಾಂತ್ರಿಕ ಯೋಜನೆ ಅಂಶಗಳು ಒಳಗೊಂಡಿರುತ್ತದೆ. ಇದರ ಎಲ್ಲಾ ಮೇಲುಸ್ತುವಾರಿಯನ್ನು ಕೆಯುಐಡಿಎಫ್‌ಸಿಗೆ ವಹಿಸಿದ್ದು, ಅದು ತ್ವರಿತಗತಿಯಲ್ಲಿ ಯೋಜನೆ ಕೈಗೆತ್ತಿಕೊಂಡು ಚಾಲನೆ ನೀಡಬೇಕಿದೆ.

ಬಿಲ್ಡರ್‌ಗಳಿಂದ ನಿಯಮ ಉಲ್ಲಂಘನೆ

ಮೈಸೂರಿನಲ್ಲಿ ಅಪಾರ್ಟ್‌ಮೆಂಟ್‌ಗಳ ಅಮಾಯಕ ನಿವಾಸಿಗಳಿಗೆ
ದುಪ್ಪಟ್ಟು ಆಸ್ತಿ ತೆರಿಗೆ ಬರೆ!

ಹಿರಿಯ ನಾಗರಿಕರು, ನಿವೃತ್ತರು, ಹೂಡಿಕೆ ಮಾಡಿದವರಿಗೆ ತೀವ್ರ ತೊಂದರೆ: ಶಾಸಕ ಟಿ.ಎಸ್.ಶ್ರೀವತ್ಸ

ಮೈಸೂರು, ಜೂ.27(ಆರ್‌ಕೆ)–ನಿಯಮ ಉಲ್ಲಂಘಿಸಿ ಬಿಲ್ಡರ್‌ಗಳು ನಿರ್ಮಿಸಿದ ಅಪಾರ್ಟ್‌ಮೆಂಟ್‌ಗಳಲ್ಲಿ ಫ್ಲಾಟ್ ಖರೀದಿಸುವವರು ದುಪ್ಪಟ್ಟು ತೆರಿಗೆ ಪಾವತಿಸುವ ಅನಿವಾರ್ಯತೆ ಎದುರಾಗುತ್ತಿದೆ ಎಂದು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಕಳವಳ ವ್ಯಕ್ತಪಡಿಸಿದ್ದಾರೆ. ಸರ್ಕಾರ ಮಧ್ಯ ಪ್ರವೇಶಿಸಿ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವ ಹಿರಿಯ ನಾಗರಿಕರು, ನಿವೃತ್ತರು, ಪ್ರಯಾಸಪಟ್ಟು ಹಣ ತೊಡಗಿಸಿ ಫ್ಲಾಟ್ ಖರೀದಿಸಿ ವಾಸ ಮಾಡುವವರು ಅನುಭವಿಸುತ್ತಿರುವ ದುಪ್ಪಟ್ಟು ಆಸ್ತಿ ತೆರಿಗೆ ಸಮಸ್ಯೆ ಬಗೆಹರಿಸಬೇಕೆಂದು ಅವರು ಒತ್ತಾಯಿಸಿದ್ದಾರೆ.



ಟಿ.ಎಸ್.ಶ್ರೀವತ್ಸ

ಫ್ಲೋರ್ ಏರಿಯಾ ರೇಷಿಯೋ (FAR) ಹಾಗೂ ನಗರ ಯೋಜನಾ ನಿಯಮಗಳನ್ನು ಗಾಳಿಗೆ ತೂರಿ ಕಟ್ಟಡ ನಿರ್ಮಿಸಿರುವ ಅಪಾರ್ಟ್‌ಮೆಂಟ್, ವಾಸದ ಮನೆ ಅಥವಾ ಇನ್ನಿತರ ಯಾವುದೇ ಕಟ್ಟಡಗಳಿಗೆ ಮೈಸೂರು ಮಹಾನಗರ ಪಾಲಿಕೆ ಅಥವಾ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಕಟ್ಟಡ ಪೂರ್ಣಗೊಂಡ ವರದಿ (CR) ನೀಡುವುದಿಲ್ಲ. ಸಿಆರ್ ಇಲ್ಲದ ಆಸ್ತಿಗಳಿಗೆ ನಿಗದಿಗಿಂತ ಎರಡರಷ್ಟು ಆಸ್ತಿ ತೆರಿಗೆಯನ್ನು ವಿಧಿಸಲಾಗುತ್ತದೆ ಎಂದು ಶಾಸಕರು ತಿಳಿಸಿದ್ದಾರೆ. ಅನುಮೋದನೆ ನೀಡಿದ ನಕ್ಷೆ (ಅಪ್ರೂವ್ಡ್ ಪ್ಲಾನ್)ಯಲ್ಲಿ ನಮೂದಾಗಿರುವಂತೆ ಕಟ್ಟಡ ನಿರ್ಮಿಸಿದ್ದರೆ ಅಥವಾ ಶೇ.5ರಷ್ಟು ಉಲ್ಲಂಘನೆಯಾದರೂ ಸಹ ತೆರಿಗೆ ಸಾಮಾನ್ಯವಾಗಿರುತ್ತದೆ. ಶೇ.5ಕ್ಕಿಂತ ಹೆಚ್ಚಿಗೆ ಪ್ರಮಾಣದ ಉಲ್ಲಂಘನೆಯಾಗಿದ್ದರೆ, ಅಂತಹ ಕಟ್ಟಡಗಳಿಗೆ ಸಿಆರ್ ಕೊಡುವುದಿಲ್ಲ. ಸಿಆರ್ ಇಲ್ಲದ ಆಸ್ತಿಗಳಿಗೆ ಪ್ರತೀ ವರ್ಷ ದುಪ್ಪಟ್ಟು ತೆರಿಗೆ ವಿಧಿಸಲಾಗುತ್ತದೆ ಎಂದು ಶ್ರೀವತ್ಸ ತಿಳಿಸಿದ್ದಾರೆ. ಮೈಸೂರು ನಗರದ ತಮ್ಮ ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯಲ್ಲಿರುವ ಬಹುತೇಕ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವವರು ಈ ಸಮಸ್ಯೆ ಎದುರಿಸುತ್ತಿದ್ದಾರೆ. ತಮ್ಮದಲ್ಲದ ತಪ್ಪಿಗೆ ಅನಗತ್ಯವಾಗಿ ಡಬಲ್ ಟ್ಯಾಕ್ಸ್ ಪಾವತಿಸುವಂತಾಗಿರುವುದು ವಿಪರ್ಯಾಸ ಎಂದು ಅವರು 'ಮೈಸೂರು ಮಿತ್ರ'ನಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ನಕ್ಷೆ ಉಲ್ಲಂಘಿಸಿ ನಿಯಮಾನುಸಾರ ಜಾಗ ಬಿಡದೇ ಅಪಾರ್ಟ್‌ಮೆಂಟ್ ಕಟ್ಟುವುದು, ಹೆಚ್ಚುವರಿ ಮಹಡಿ ನಿರ್ಮಾಣ, ಮೂಲ ಸೌಕರ್ಯ ಒದಗಿಸದಿರುವುದು ಈ ಸಮಸ್ಯೆಗೆ ಮೂಲ ಕಾರಣವಾಗಿದ್ದು, ಹಣದ ಆಸೆಗಾಗಿ ಬಿಲ್ಡರ್‌ಗಳು ಕಟ್ಟಡ ನಿರ್ಮಿಸಿ ಫ್ಲಾಟ್‌ಗಳನ್ನು ಮಾರಾಟ ಮಾಡಿ ಕೈತೊಳೆದುಕೊಳ್ಳುತ್ತಾರೆ. ಆದರೆ, ಖರೀದಿಸುವವರು ನಂತರ ಅನುಭವಿಸುವ ದುಪ್ಪಟ್ಟು ಆಸ್ತಿ ತೆರಿಗೆ ಸಮಸ್ಯೆ ನೀಗಿಸುವವರ್ಯಾರು? ಸರ್ಕಾರ ಮಧ್ಯಪ್ರವೇಶಿಸಿ ಈ ತೊಂದರೆಗೆ ಪರಿಹಾರ ಕಂಡು ಹಿಡಿಯಬೇಕೆಂದು ವಿಧಾನಸಭೆಯಲ್ಲೂ ವಿಷಯ ಪ್ರಸ್ತಾಪಿಸಿ ಒತ್ತಾಯಿಸಿದ್ದೇನೆ ಎಂದರು. ಸ್ವಯಂ ಘೋಷಿತ ಆಸ್ತಿ ತೆರಿಗೆ ● 6ನೇ ಪುಟಕ್ಕೆ

ಕಮೆನ್ಸ್‌ಮೆಂಟ್ ಸರ್ಟಿಫಿಕೇಟ್ ಪದ್ಧತಿ ಕಡ್ಡಾಯ ಜಾರಿಯಾಗಬೇಕು

ಮೈಸೂರು, ಜೂ.27(ಆರ್‌ಕೆ)–ಯಾವುದೇ ಕಟ್ಟಡ ನಿರ್ಮಿಸಲು ನಕ್ಷೆ ಅನುಮೋದನೆ(Plan Approval) ಜೊತೆಗೆ ಪ್ರಾರಂಭಿಕ ಪ್ರಮಾಣ ಪತ್ರ (Commencement Certificate) ಪಡೆಯುವುದನ್ನು ಕಡ್ಡಾಯಗೊಳಿಸಿದ್ದಲ್ಲಿ ನಿಯಮ ಉಲ್ಲಂಘನೆಯಾಗುವುದನ್ನು ತಡೆಗಟ್ಟಬಹುದು ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅಭಿಪ್ರಾಯಪಟ್ಟಿದ್ದಾರೆ. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಗುಜರಾತ್ ರಾಜ್ಯದಲ್ಲಿ ಕಮೆನ್ಸ್‌ಮೆಂಟ್ ಸರ್ಟಿಫಿಕೇಟ್ ಪಡೆಯುವ ಪದ್ಧತಿ ಜಾರಿಯಲ್ಲಿದೆ. ಸಂಬಂಧಪಟ್ಟ ಪ್ರಾಧಿಕಾರದಿಂದ ನಕ್ಷೆಗೆ ಅನುಮೋದನೆ ಪಡೆದ ನಿವೇಶನದ ಮಾಲೀಕರು, ಅಡಿಪಾಯ ಹಾಕಿದ ನಂತರ ಕಟ್ಟಡ ನಿರ್ಮಿಸುವ ಮೊದಲು ಕಮೆನ್ಸ್‌ಮೆಂಟ್ ಸರ್ಟಿಫಿಕೇಟ್ ಕೋರಿ ಅರ್ಜಿ ಸಲ್ಲಿಸಬೇಕು ಎಂದರು. ಅರ್ಜಿ ಬಂದ ನಂತರ ಸಂಬಂಧಪಟ್ಟ ಅಧಿಕಾರಿಗಳು, ಅನುಮೋದಿತ ನಕ್ಷೆಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ನಕ್ಷೆಯಂತೆ ತಳಪಾಯ ಹಾಕಿದ್ದರೆ ಮಾತ್ರ ಕಟ್ಟಡ ನಿರ್ಮಿಸಲು ಕಮೆನ್ಸ್‌ಮೆಂಟ್ ಸರ್ಟಿಫಿಕೇಟ್ ಅನ್ನು ನೀಡುತ್ತಾರೆ. ಆಗ ಮಾಲೀಕರು ಅನುಮೋದಿತ ನಕ್ಷೆಯಂತೆಯೇ ಕಟ್ಟಡ ನಿರ್ಮಿಸುವುದರಿಂದ ಉಲ್ಲಂಘನೆಯಾಗುವುದಿಲ್ಲ ಎಂದು ಅವರು ತಿಳಿಸಿದರು. ನಮ್ಮ ರಾಜ್ಯದಲ್ಲೂ ಆ ಪದ್ಧತಿಯನ್ನು ಜಾರಿಗೆ ತರಬೇಕು ಮತ್ತು ನಕ್ಷೆಗೆ ಅನುಮೋದನೆ ನೀಡಿದ ಬಳಿಕ ನಿರ್ಮಾಣ ಹಂತದಲ್ಲೇ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲಿಸಿದರೆ ನಕ್ಷೆ ಉಲ್ಲಂಘಿಸುವ ಪ್ರಶ್ನೆಯೇ ಬರುವುದಿಲ್ಲ ಎಂದು ಷರೀಫ್ ಅವರು ತಿಳಿಸಿದರು.



ಷರೀಫ್

ಅಧಿಕಾರಿಗಳ ನಿರ್ಲಕ್ಷ್ಯವೂ ಕಾರಣ


ಮೈಸೂರು, ಜೂ.27(ಆರ್‌ಕೆ)– ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿರುವುದರಲ್ಲಿ ಅಧಿಕಾರಿಗಳ ನಿರ್ಲಕ್ಷ್ಯವೂ ಕಾರಣವಾಗಿದೆ ಎಂದು ಕ್ರೆಡಾಯ್ ಅಧ್ಯಕ್ಷ ಡಿ.ಶ್ರೀಹರಿ ತಿಳಿಸಿದ್ದಾರೆ. ಮಾಲೀಕರು ಸಲ್ಲಿಸಿದ ನಕ್ಷೆಗೆ ಅನುಮೋದನೆ ನೀಡಿದ ನಂತರ ಮೈಸೂರು ಮಹಾನಗರ ಪಾಲಿಕೆ, ಮುಡಾ ಅಥವಾ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ಯೋಜನಾ ವಿಭಾಗದ ಅಧಿಕಾರಿಗಳು ಸುಮ್ಮನಾಗುತ್ತಿರುವುದರಿಂದ ನಕ್ಷೆ ಉಲ್ಲಂಘಿಸಿ ತಮಗೆ ಅನುಕೂಲವಾಗುವಂತೆ ಕಟ್ಟಡ ಗಳನ್ನು ನಿರ್ಮಿಸಲಾಗುತ್ತಿದೆ.



ಕಟ್ಟಡದ ನಿರ್ಮಾಣ ಹಂತದಲ್ಲಿ ಪೂರ್ಣಗೊಳ್ಳುವವರೆಗೆ ಕನಿಷ್ಠ 3 ಬಾರಿಯಾದರೂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರೆ, ಉಲ್ಲಂಘನೆಯಾಗುತ್ತಿರುವುದನ್ನು ಆ ಹಂತದಲ್ಲೇ ತಪ್ಪಿಸಬಹುದು. ಹಾಗೆಯೇ ನಕ್ಷೆಗೆ ಅನುಮೋದನೆ ನೀಡುವಾಗ ಅರ್ಜಿದಾರರಿಗೆ ನಿಯಮಗಳ ಬಗ್ಗೆ ವಿವರಿಸಿ, ಉಲ್ಲಂಘನೆಯಾದರೆ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಬೇಕು ಎಂದು ಅವರು ತಿಳಿಸಿದರು. ಪ್ಲಾನ್ ಲೈಸನ್ಸ್ ನೀಡುವಾಗ ಪರಿಶೀಲನಾ ಶುಲ್ಕವನ್ನು ಕಟ್ಟಿಸಿಕೊಳ್ಳುವ ಅಧಿಕಾರಿಗಳು ನಿರ್ಮಾಣ ಹಂತದಲ್ಲಿ ಬಂದು ಪರಿಶೀಲಿಸುವುದೇ ಇಲ್ಲ. ಅವರ ನಿರ್ಲಕ್ಷ್ಯದಿಂದಾಗಿ ಅಪಾರ್ಟ್‌ಮೆಂಟ್ ವಾಸಿಗಳು, ಮನೆ ಮಾಲೀಕರು ಸಿಆರ್ ಸಿಗದ ಕಾರಣ ಡಬಲ್ ಟ್ಯಾಕ್ಸ್ ಕಟ್ಟುವ ಅನಿವಾರ್ಯತೆ ಬರುತ್ತದೆ ಎಂದ ಶ್ರೀಹರಿ ಅವರು, ಕ್ರೆಡಾಯ್ ವ್ಯಾಪ್ತಿಯಲ್ಲಿ ಬರುವ ಬಿಲ್ಡರ್‌ಗಳ್ಯಾರೂ ನಿಯಮ ಉಲ್ಲಂಘಿಸುವುದಿಲ್ಲ ಎಂದರು.

ಮೈಸೂರು ಜಿಲ್ಲೆಯಲ್ಲಿ 4.82 ಲಕ್ಷಕ್ಕೂ ಹೆಚ್ಚು ಆರ್‌ಟಿಸಿಗಳಿಗೆ ಆಧಾರ್ ಲಿಂಕ್

ಜಮೀನು ಅಕ್ರಮ ಮಾರಾಟ ತಡೆ, ಸರ್ಕಾರಿ ಸೌಲಭ್ಯ ಪಡೆಯಲು ಇದು ಪಕ್ಕಾ ದಾಖಲಾತಿ



- ಮೈಸೂರಿನಲ್ಲಿ 16,69,813 ಆರ್‌ಟಿಸಿಗಳಿವೆ
- 4,82,449 ಆರ್‌ಟಿಸಿಗಳಿಗೆ ಆಧಾರ್ ಲಿಂಕ್
- 3 ಹಂತದ ಒಟಿಪಿಯಿಂದ ದಾಖಲಾತಿ ದೃಢೀಕರಣ
- ಆಧುನಿಕ ತಂತ್ರಜ್ಞಾನದ ಈ ವಿಧಾನ ಬಹುಪಯೋಗಿ

■ ಬಾಪುಲಿಂಗರಾಜ್ ಅರಸ್

ಮೈಸೂರು, ಜೂ.27–ಭೂಮಿ ಕಬಳಿಕೆ, ಅಕ್ರಮ ಮಾರಾಟ ತಡೆಯಲು ಹಾಗೂ ಸರ್ಕಾರದ ಸೌಲಭ್ಯವನ್ನು ಅರ್ಹ ರೈತರಿಗೆ ತಲುಪಿಸಲು ಆರ್‌ಟಿಸಿಗಳನ್ನು ಆಧಾರ್‌ಗೆ ಲಿಂಕ್ ಮಾಡುವ ಕಾರ್ಯ ಮೈಸೂರು ಜಿಲ್ಲಾದ್ಯಂತ ಭರದಿಂದ ಸಾಗಿದೆ. ಈ ತನಕ ಮೈಸೂರು ಜಿಲ್ಲೆಯಲ್ಲಿ 4.82 ಲಕ್ಷಕ್ಕೂ ಹೆಚ್ಚು ರೈತರ ಆರ್‌ಟಿಸಿಗಳನ್ನು ಆಧಾರ್‌ಗೆ ಲಿಂಕ್ ಮಾಡಲಾಗಿದೆ.

ಈ ಮೊದಲು ಅಕ್ರಮ ದಾಖಲಾತಿ ಸೃಷ್ಟಿಸಿ ಯಾರದ್ದೋ ಜಮೀನನ್ನು ಯಾರೋ ಮಾರಾಟ ಮಾಡುತ್ತಿದ್ದರು. ಹಾಗಾಗಿ ಭೂಮಿ ಮಾರಾಟದಲ್ಲಿ ಬಹಳಷ್ಟು ಅಕ್ರಮ ನಡೆಯುತ್ತಿತ್ತು ಈ ಕಾರಣದಿಂದ ಭೂಮಿಯ ಮೂಲ ಮಾಲೀಕರು ಆಸ್ತಿ ಕಳೆದುಕೊಂಡು ಬೀದಿಪಾಲಾಗುತ್ತಿದ್ದರು. ಇಂತಹ ಬಹಳಷ್ಟು ಭೂವಿವಾದಗಳು ನ್ಯಾಯಾಲಯದ ಮೆಟ್ಟಿಲು ಹತ್ತಿವೆ.

ಈ ಹಿನ್ನೆಲೆಯಲ್ಲಿ ಜಮೀನುಗಳ ಅಕ್ರಮ ತಡೆಯಲು ಸರ್ಕಾರ ಪ್ರತಿಯೊಂದು ಆರ್‌ಟಿಸಿಗಳಿಗೆ ಆಧಾರ್ ಲಿಂಕ್ ಮಾಡುವ ಕಾರ್ಯ ಆರಂಭಿಸಿದೆ. ರಾಜ್ಯಾದ್ಯಂತ 4 ಕೋಟಿಗೂ ಹೆಚ್ಚು ಆರ್‌ಟಿಸಿ ಮಾಲೀಕರಿದ್ದು, ಇವರ ಪೈಕಿ ಈಗಾಗಲೇ 1.75 ಕೋಟಿ ಆರ್‌ಟಿಸಿಗಳನ್ನು ಆಧಾರ್‌ಗೆ ಜೋಡಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ ಒಟ್ಟು 16,69,813 ಆರ್‌ಟಿಸಿಗಳಿವೆ. ಇದರಲ್ಲಿ 4,82,449 ಆರ್‌ಟಿಸಿಗಳಿಗೆ ಆಧಾರ್ ಲಿಂಕ್ ಮಾಡಲಾಗಿದೆ. ಉಳಿದವುಗಳ ಲಿಂಕ್ ಮಾಡುವ ಕಾರ್ಯ ಭರದಿಂದ ಸಾಗಿದೆ. ಇದರ ಜವಾಬ್ದಾರಿ ಹೊತ್ತಿರುವ ಗ್ರಾಮಲೆಕ್ಕಿಗರು ಪ್ರತಿ ದಿನ ಇದೇ ಕಾರ್ಯದಲ್ಲಿ ಮಗ್ನರಾಗಿದ್ದಾರೆ.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಾಗೂ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ನಿರ್ದೇಶನದ ಮೇರೆಗೆ ಈ ಕಾರ್ಯ ನಡೆಯುತ್ತಿದೆ. ವಾರದಲ್ಲಿ ಎಷ್ಟು ಆರ್‌ಟಿಸಿಗೆ ಆಧಾರ್ ಲಿಂಕ್ ಆಗಿದೆ ಎಂಬ ವರದಿಯನ್ನು ವಾರಕ್ಕೊಮ್ಮೆ ಪಡೆಯುತ್ತಿದ್ದಾರೆ. ಜೊತೆಗೆ ಒಂದು ತಿಂಗಳಲ್ಲಿ ಈ ಕಾರ್ಯ ಪೂರ್ಣಗೊಳಿಸಲು ತಾಕೀತು ಮಾಡಿದ್ದಾರೆ.

ಮೈಸೂರು ಜಿಲ್ಲೆಯ ಒಟ್ಟು 16,69,813 ಆರ್‌ಟಿಸಿಯಲ್ಲಿ ಕೆಲವು ಆರ್‌ಟಿಸಿಗಳಿಗೆ ಆಧಾರ್ ಲಿಂಕ್ ಮಾಡಲು ತಾಂತ್ರಿಕ ಅಡಚಣೆಗಳು ಎದುರಾಗಿವೆ. 5,0875 ಆರ್‌ಟಿಸಿಗಳ ಜಮೀನು ಭೂ ಪರಿವರ್ತನೆಯಾಗಿರುವ ಕಾರಣ ಇವುಗಳ ಆರ್‌ಟಿಸಿಗೆ ಆಧಾರ್ ಲಿಂಕ್ ಮಾಡಲು ಸಾಧ್ಯವಾಗಿಲ್ಲ. ಇನ್ನು 1,25,377 ಆರ್‌ಟಿಸಿಗಳು ತಂದೆ–ತಾಯಿ ಹೆಸರಿನಲ್ಲಿ ದಾಖಲಾಗಿದೆ. ಅವರ ಮಕ್ಕಳು ಇನ್ನೂ ಪೌತಿ ಖಾತೆ ಮಾಡಿಸಿಕೊಂಡಿಲ್ಲ. ಈ ಕಾರಣದಿಂದ ಪೌತಿ ಖಾತೆ ಮಾಡಿಸಿಕೊಂಡು ಆರ್‌ಟಿಸಿಗಳನ್ನು ಆಧಾರ್‌ಗೆ ಲಿಂಕ್ ಮಾಡಿಸಿಕೊಳ್ಳುವಂತೆ ಸಲಹೆ ನೀಡಲಾಗಿದೆ.

ಆರ್‌ಟಿಸಿಗಳನ್ನು ಆಧಾರ್‌ಗೆ ಲಿಂಕ್ ಮಾಡುವುದರಿಂದ ಜಮೀನುಗಳ ಅಕ್ರಮ ಮಾರಾಟ ತಡೆಯುವುದರ ಜೊತೆಗೆ ಸರ್ಕಾರದಿಂದ ದೊರೆಯುವ ಬೆಳೆ ಪರಿಹಾರ, ಮ್ಯುಟೇಷನ್ ಹಾಗೂ ಇನ್ಪುಟ್ ಸಬ್ಸಿಡಿ ಸೇರಿದಂತೆ ಇತರೆ ಸರ್ಕಾರಿ ಸೌಲಭ್ಯ ಪಡೆಯಲು ಅನುಕೂಲವಾಗುತ್ತದೆ.

ಆರ್‌ಟಿಸಿಗಳಿಗೆ ಆಧಾರ್ ಲಿಂಕ್ ಮಾಡುವುದರಿಂದ ರಾಜ್ಯದಲ್ಲಿ ಸಣ್ಣ ರೈತರ ಸಂಖ್ಯೆ ಎಷ್ಟಿದೆ ಎಂಬ ಕರಾರುವಕ್ಕಾದ ಮಾಹಿತಿ ದೊರೆಯಲಿದೆ. ಈಗ ಕೇಂದ್ರ ಸರ್ಕಾರದ ಲೆಕ್ಕಾಚಾರದ ಪ್ರಕಾರ ಕರ್ನಾಟಕದಲ್ಲಿ ಶೇಕಡ 44ರಷ್ಟು ಸಣ್ಣ ರೈತರಿದ್ದಾರೆ. ವಾಸ್ತವದಲ್ಲಿ ಶೇಕಡ 65ರಿಂದ 70ರಷ್ಟು ಸಣ್ಣ ರೈತರಿದ್ದಾರೆ. ಈಗ ಆರ್‌ಟಿಸಿಗಳಿಗೆ ಆಧಾರ್ ಲಿಂಕ್ ಮಾಡಿದರೆ ಸಣ್ಣ ರೈತರ ಸಂಖ್ಯೆ ಪಕ್ಕಾ ತಿಳಿಯಲಿದೆ. ಈ ಅಂಕಿ ಅಂಶಗಳ ದಾಖಲಾತಿಯನ್ನು ಕೇಂದ್ರ ಸರ್ಕಾರದ ಮುಂದಿಟ್ಟು ಇನ್ನು ಮುಂದೆ ಪರಿಹಾರ ಪಡೆಯಬಹುದು. ಈ ಹಿನ್ನೆಲೆಯಲ್ಲಿ ಆರ್‌ಟಿಸಿಗಳಿಗೆ ಆಧಾರ್ ಲಿಂಕ್ ಅನಿವಾರ್ಯವಾಗಿದೆ.

ಆರ್‌ಟಿಸಿಗಳಿಗೆ ಆಧಾರ್ ಲಿಂಕ್ ಮಾಡುವ ಜವಾಬ್ದಾರಿ ಹೊತ್ತ ಗ್ರಾಮಲೆಕ್ಕಿಗರು ಮೊದಲು ತಾವು ಕೆವೈಸಿ ದೃಢೀಕರಿಸಿಕೊಂಡಿದ್ದಾರೆ. ಈಗ ರೈತರನ್ನು ಭೇಟಿ ಮಾಡಿ ಆರ್‌ಟಿಸಿಗಳಿಗೆ ಆಧಾರ್ ಲಿಂಕ್ ಮಾಡುವ ಕಾರ್ಯ ಮಾಡುತ್ತಿದ್ದಾರೆ. ಆರ್‌ಟಿಸಿಗಳಿಗೆ ಆಧಾರ್ ಲಿಂಕ್ ಮಾಡುವ ವೇಳೆ ರೈತರ ಮೊಬೈಲ್‌ನಿಂದ ಮೂರು ಬಾರಿ ಓಟಿಪಿಗಳನ್ನು ದೃಢೀಕರಿಸುತ್ತಾರೆ. ಅಂತಿಮವಾಗಿ ರೈತರ ಭಾವಚಿತ್ರ ಅಪ್‌ಲೋಡ್ ಮಾಡಿ ಅವರ ಆರ್‌ಟಿಸಿಯನ್ನು ಆಧಾರ್‌ಗೆ ಲಿಂಕ್ ಮಾಡುತ್ತಾರೆ. ಈ ಮೊದಲು ಜಮೀನುಗಳನ್ನು ಅಕ್ರಮವಾಗಿ ಮಾರಾಟ ಮಾಡಲಾಗುತ್ತಿತ್ತು. ಆದರೆ ಇನ್ನು ಇದು ಸಾಧ್ಯವಿಲ್ಲದ ಮಾತು. ಜಮೀನು ಮಾರಾಟ ಮಾಡಲು ಆರ್‌ಟಿಸಿ ನಂಬರ್ ದಾಖಲಿಸುತ್ತಿದ್ದಂತೆ ಜಮೀನಿನ ಮೂಲ ಮಾಲೀಕರ ಭಾವಚಿತ್ರ, ಆಧಾರ್ ಸಂಖ್ಯೆ ಕಂಪ್ಯೂಟರ್ ಸ್ಕ್ರೀನ್ ಮುಂದೆ ಬರುತ್ತದೆ. ಜಮೀನು ಮಾರಾಟದ ವೇಳೆ ಎಲ್ಲಾ ದಾಖಲಾತಿ ಹೊಂದಿಕೊಂಡಾಗ ಮಾತ್ರ ನೋಂದಣಿ ಸಾಧ್ಯವಾಗುತ್ತದೆ. ಇದರಿಂದ ಇನ್ನು ಮುಂದೆ ಅಕ್ರಮ ಮಾರಾಟದಂತಹ ಕೃತ್ಯಗಳಿಗೆ ಕಡಿವಾಣ ಬೀಳುತ್ತದೆ.

ಆರ್‌ಟಿಸಿಗಳಿಗೆ ಆಧಾರ್ ಲಿಂಕ್ ಮಾಡುವುದರಿಂದ ಏನೇನು ಪ್ರಯೋಜನವಾಗುತ್ತದೆ ಎಂಬ ಬಗ್ಗೆ ರೈತರಿಗೆ ಅರಿವು ಮೂಡಿಸಲು ಈಗಾಗಲೇ ವಿಶೇಷ ಕಂದಾಯ ಆಂದೋಲನ ಆಯೋಜಿಸಲಾಗಿದೆ. ಆಸ್ತಿ ದಾಖಲಾತಿಯಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಳ್ಳುವುದರಿಂದ ರೈತರಿಗೂ ಅನುಕೂಲವಾಗುತ್ತದೆ. ಸರ್ಕಾರದ ಬಳಿ ಕೂಡ ಕರಾರುವಕ್ಕಾದ ದಾಖಲೆಗಳಿರುತ್ತದೆ.

ಹಳ್ಳಿ ಬಿಟ್ಟು ನಗರಕ್ಕೆ ಬಂದವರಿಗೊಂದು ಸಲಹೆ

ಗ್ರಾಮೀಣ ಪ್ರದೇಶದ ಬಹಳಷ್ಟು ರೈತರು ಹಳ್ಳಿ ಬಿಟ್ಟು ಬಂದು ನಗರದಲ್ಲಿ ವಾಸ ಮಾಡುತ್ತಿದ್ದಾರೆ. ಹೀಗೆ ನಗರದಲ್ಲಿರುವ ಬಹಳಷ್ಟು ಜಮೀನು ಮಾಲೀಕರಿಗೆ ತಮ್ಮ ಆರ್‌ಟಿಸಿಯನ್ನು ಆಧಾರ್‌ಗೆ ಲಿಂಕ್ ಮಾಡಿಸಿಕೊಳ್ಳಬೇಕು ಎಂಬ ಬಗ್ಗೆ ಮಾಹಿತಿ ಇಲ್ಲ. ಇನ್ನು ಮುಂದೆ ಆರ್‌ಟಿಸಿಗಳಿಗೆ ಆಧಾರ್ ಲಿಂಕ್ ಆಗಿದ್ದರೆ ಮಾತ್ರ ಸರ್ಕಾರದ ಸೌಲಭ್ಯ ದೊರೆಯಲಿದೆ ಎಂಬ ಮಾಹಿತಿಯೂ ಅವರಿಗಿಲ್ಲ. ಈ ಹಿನ್ನೆಲೆಯಲ್ಲಿ ನಗರದಲ್ಲಿರುವ ಜಮೀನು ಮಾಲೀಕರು ಕೂಡಲೇ ಗ್ರಾಮ ಲೆಕ್ಕಿಗರನ್ನು ಭೇಟಿ ಮಾಡಿ ತಮ್ಮ ಆರ್‌ಟಿಸಿಗಳನ್ನು ಆಧಾರ್‌ಗೆ ಲಿಂಕ್ ಮಾಡಿಸಿಕೊಳ್ಳಬೇಕು. ಹೀಗೆ ಆರ್‌ಟಿಸಿಗೆ ಆಧಾರ್ ಲಿಂಕ್ ಮಾಡಿಸಿಕೊಂಡರೆ ಅವರ ಜಮೀನುಗಳನ್ನು ಅಕ್ರಮವಾಗಿ ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ. ಇದರಿಂದ ಅವರು ನಿಶ್ಚಿಂತೆಯಿಂದ ಇರಬಹುದು.

2025ರ ಅಂತ್ಯಕ್ಕೆ ಎಲ್ಲಾ ಆಸ್ತಿಗಳ ಡಿಜಿಟಲೀಕರಣ

“ಕರ್ನಾಟಕದ ಎಲ್ಲಾ ಆಸ್ತಿಗಳ ದಾಖಲಾತಿಗಳನ್ನು 2025ರ ಅಂತ್ಯಕ್ಕೆ ಡಿಜಿಟಲೀಕರಣ ಮಾಡಲಾಗುವುದು. ಈಗಾಗಲೇ ಇ-ಕಚೇರಿ ಅನುಷ್ಠಾನದಲ್ಲಿ ಶೇಕಡ 80ರಷ್ಟು ಪ್ರಗತಿ ಸಾಧಿಸಲಾಗಿದೆ. ಕಳೆದ ಫೆಬ್ರವರಿಯಲ್ಲಿ ರಾಜ್ಯದ 31 ತಾಲೂಕು ಕಚೇರಿಯಲ್ಲಿ ಪ್ರಾಯೋಗಿಕವಾಗಿ ರೆಕಾರ್ಡ್ ರೂಂ ದಾಖಲೀಕರಣ ಕಾರ್ಯ ಆರಂಭಿಸಲಾಗಿದ್ದು, ಈ ತನಕ 3 ಕೋಟಿ ದಾಖಲೆ ಸ್ಕ್ಯಾನಿಂಗ್ ಮಾಡಲಾಗಿದೆ. ಮುಂದಿನ ಒಂದು ತಿಂಗಳಲ್ಲಿ ರಾಜ್ಯದ ಉಳಿದ ತಾಲೂಕುಗಳಲ್ಲಿ ಇದಕ್ಕೆ ಚಾಲನೆ ನೀಡಲಾಗುವುದು. ದಾಖಲೀಕರಣಕ್ಕಾಗಿ ಗ್ರಾಮ ಲೆಕ್ಕಿಗರು ಹಾಗೂ ಗ್ರಾಮ ನಿರೀಕ್ಷಕರಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗುವುದು. ಕಂದಾಯ ಕೋರ್ಟ್ ಪ್ರಕರಣಗಳ ಸ್ಥಿತಿಗತಿ ತಿಳಿಯಲು ಆರ್.ಸಿ.ಸಿ.ಎಂ.ಎಸ್. (ರೆವಿನ್ಯೂ ಕೋರ್ಟ್ ಕೇಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್) ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. **– ಕೃಷ್ಣಬೈರೇಗೌಡ, ಕಂದಾಯ ಸಚಿವ.**

ಬೆಲೆ ಏರಿಕೆಗೆ ಬಿಜೆಪಿ ಜಿಲ್ಲಾಧ್ಯಕ್ಷ ಎಲ್‌ಆರ್‌ಎಂ ಖಂಡನೆ



ಮಹದೇವಸ್ವಾಮಿ

ಮೈಸೂರು, ಜೂ.27(ಎಂಕೆ)– ಗ್ಯಾರಂಟಿ ಹೆಸರಿನಲ್ಲಿ ರಾಜ್ಯದ ಜನತೆಗೆ ಮಂಕುಬೂದಿ ಎರಚಿ, ದಿನ ಬಳಕೆ ವಸ್ತುಗಳ ಬೆಲೆ ಏರಿಕೆ ಮಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ನಡೆಯನ್ನು ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಖಂಡಿಸಿದ್ದಾರೆ.

ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬ ಮಾತಿನಂತೆ ರಾಜ್ಯ ಕಾಂಗ್ರೆಸ್ ಸರ್ಕಾರ ಫ್ರೀ ಸ್ಕೀಂ ಹೆಸರಿನ ನಾಟಕವಾಡುತ್ತಿದೆ. ಪೆಟ್ರೋಲ್ ಸೇರಿದಂತೆ ಅಗತ್ಯ ದಿನಬಳಕೆ ವಸ್ತುಗಳ ಬೆಲೆ ಏರಿಕೆ ಮಾಡಿ, ಹಣ ವಸೂಲಿಗೆ ನಿಂತಿರುವ ಸರ್ಕಾರ, ನಮ್ಮ ದುಡ್ಡನ್ನು ಕಿತ್ತುಕೊಂಡು ನಮಗೆ ಉಚಿತವಾಗಿ ಕೊಡುತ್ತಿದೆ ಎಂದು ಜನತೆ ವ್ಯಂಗ್ಯವಾಡುವಂತಾಗಿದೆ ಎಂದು ಲೇವಡಿ ಮಾಡಿದ್ದಾರಲ್ಲದೆ ಈಗ ಹಾಲಿನ ದರವನ್ನು ಹೆಚ್ಚಿಸಿರುವ ರಾಜ್ಯ ಸರ್ಕಾರ, ರೈತರಿಗೆ ಸಿಗುವ ಪ್ರೋತ್ಸಾಹ ಧನ ಕಡಿತ ಮಾಡಿ ಅನ್ನದಾತರಿಗೆ ದ್ರೋಹ ಮಾಡಿದೆ ಎಂದು ಕಿಡಿಕಾರಿದ್ದಾರೆ. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ರೈತರ ಹಿತದೃಷ್ಟಿ ಗಮನಿಸಿ ಪ್ರೋತ್ಸಾಹ ಧನ ನೀಡುತ್ತಿದ್ದರು. ಬೆಂಬಲ ನೀಡಿ, ಕೃಷಿಗೆ ಪೂರಕ ಯೋಜನೆಗಳನ್ನು ಜಾರಿಗೊಳಿಸಿ ರೈತರ ಹಿತ ಕಾಪಾಡುತ್ತಿದ್ದರು. ಆದರೆ ಪ್ರಸ್ತುತ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ, ತನ್ನ ಸ್ವಾರ್ಥಕ್ಕಾಗಿ ಜನರನ್ನು ಸಂಕಷ್ಟಕ್ಕೆ ನೂಕುತ್ತಿದೆ. ರಾಜ್ಯದ ಆರ್ಥಿಕ ವ್ಯವಸ್ಥೆ ಕುಸಿಯುತ್ತಿದ್ದು, ಇದರ ಪರಿಣಾಮವನ್ನು ಕಾಂಗ್ರೆಸ್ ಎದುರಿಸಲಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಸಿಎಂ ಸ್ಥಾನದಲ್ಲಿ ಮುಂದುವರೆಯುವುದು ಬೇಡ

ಅವರು ಸಿಎಂ ಸ್ಥಾನದಲ್ಲಿ ಇರುವುದಿಲ್ಲ ಎಂದು ಅನ್ನಿಸುತ್ತದೆ ಎಂದಿದ್ದಾರೆ.

ಇದು ಈ ಸರ್ಕಾರದ ಬೇಗುದಿ. ಈಗ ಒಂದೊಂದೇ ಹೊರಗೆ ಬರುತ್ತಿದೆ. ಡಿಕೆ ಗ್ರೂಪ್ ಮತ್ತು ಸಿಎಂ ಗ್ರೂಪ್ ನಡುವೆ ವಾರ್ ನಡೆಯುತ್ತಿದೆ. ಇವರಿಂದ ನಯಾ ಪೈಸೆ ಅಭಿವೃದ್ಧಿ ಆಗಿಲ್ಲ. ಕಾಂಗ್ರೆಸ್‌ನಲ್ಲಿ ಗೊಂದಲ ಇದೆ. ಸರ್ಕಾರಕ್ಕೆ ಆಪತ್ತು ಇದೆ ಎಂದು ಗೊತ್ತಾಗಿದೆ. ಇದರಿಂದಲೇ ಜಾಸ್ತಿ ದಿನ ಈ ಸರ್ಕಾರ ಇರುವುದಿಲ್ಲ ಎಂದು ಹೇಳಿದ್ದೆ ಎಂದಿದ್ದಾರೆ.

ಈ ವಿಚಾರವನ್ನು ಸ್ವಾಮೀಜಿಯವರೇ ಹೇಳಿದ್ರಾ ಅಥವಾ ಹೇಳಿಸಿದ್ರಾ ಎಂಬ ಒಳಗುಟ್ಟು ಸಿಎಂಗೆ ಅರ್ಥವಾಗಿದೆ. ಹೀಗಾಗಿ ಸಿದ್ದರಾಮಯ್ಯ ರಾಜೀನಾಮೆ ಕೊಡುವುದು ಒಳ್ಳೆಯದು. ರಾಜ್ಯದ ಇತಿಹಾಸದಲ್ಲಿ ಸರ್ಕಾರಿ ಕಾರ್ಯಕ್ರಮದಲ್ಲಿ ಇಂತಹ ಅವಮಾನ ಆಗಿರಲಿಲ್ಲ ಎಂದು ಸಿದ್ದರಾಮಯ್ಯ ಅವರನ್ನು ಲೇವಡಿ ಮಾಡಿದ್ದಾರೆ.

ಕ್ಯಾನ್ಸರ್‌ಕಾರಿ!

ಇದೇ ಕಾರಣಕ್ಕೆ ರಾಜ್ಯ ಆರೋಗ್ಯ ಇಲಾಖೆ ಪಾನಿಪುರಿ ಮಾರಾಟದ ಮೇಲೆ ನಿಯಂತ್ರಣ ಹೇರಲು ಮುಂದಾಗಿದೆ.

ಪಾನಿಪುರಿ ದೇಹಕ್ಕೆ ಎಷ್ಟು ಸುರಕ್ಷಿತ ಎಂದು ಕಂಡುಹಿಡಿಯಲು ಆಹಾರ ಇಲಾಖೆ ಅದರ ಮಾದರಿಗಳನ್ನು ಸಂಗ್ರಹ ಮಾಡಿ ಪರೀಕ್ಷೆಗೆ ಒಳಪಡಿಸಿದ್ದು, ಈ ಪರೀಕ್ಷೆಯಲ್ಲಿ ಪಾನಿಪುರಿ ಗಂಭೀರ ಆರೋಗ್ಯ ಸಮಸ್ಯೆಗಳನ್ನು ಉಂಟು ಮಾಡುತ್ತದೆ ಎಂದು ವರದಿಗಳು ಬಹಿರಂಗಪಡಿಸಿವೆ.

ಮೂಲಗಳ ಪ್ರಕಾರ ಬೆಂಗಳೂರಿನ ನಾನಾ ಭಾಗಗಳಲ್ಲಿ ಮಾರಾಟವಾಗುವ ಸುಮಾರು 243 ಪಾನಿಪುರಿ ಸ್ಯಾಂಪಲ್ಸ್ ತೆಗೆದುಕೊಂಡು ಅಧಿಕಾರಿಗಳು ಪರೀಕ್ಷೆಗೊಳಪಡಿಸಿದ್ದು, ಈ ಪರೀಕ್ಷೆಯಲ್ಲಿ ಪಾನಿಪುರಿಯಲ್ಲಿ ಅಪಾಯಕಾರಿ ಕೆಮಿಕಲ್ಸ್ ಬಳಕೆ ಮಾಡುತ್ತಿರುವುದು ಬಹಿರಂಗವಾಗಿದೆ. ಪರೀಕ್ಷೆಗೆ ಒಳಪಡಿಸಿದ 243 ಸ್ಯಾಂಪಲ್ಸ್‌ಗಳ ಪೈಕಿ 43 ಬಳಕೆಗೆ ಅಂದರೆ ತಿನ್ನಲು ಅಸುರಕ್ಷಿತ ಎಂದು ತಿಳಿದು ಬಂದಿದೆ. ಈ ಬಗ್ಗೆ ಅಧಿಕಾರಿಗಳು ಇನ್ನಷ್ಟು ಪರೀಕ್ಷೆಗಳನ್ನು ನಡೆಸಿದ್ದು ಇದರ ವರದಿಗಳು ಇನ್ನಷ್ಟೇ ಬರಬೇಕಿದೆ.

ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ (FSSAI) ಅಧಿಕಾರಿಗಳು ರಾಜ್ಯಾದ್ಯಂತ ಪಾನಿ ಪುರಿಯ 200ಕ್ಕೂ ಹೆಚ್ಚು ಮಾದರಿಗಳನ್ನು ಸಂಗ್ರಹಿಸಲಾಗಿದೆ. ಪ್ರಸ್ತುತ ಮಾದರಿ ಪರೀಕ್ಷೆಯ ಫಲಿತಾಂಶಗಳಿಗಾಗಿ ಕಾಯುತ್ತಿದ್ದೇವೆ ಎಂದು ಹೇಳಿದ್ದಾರೆ.

ಮಾಲ್‌ಗಳು, ಉದ್ಯಾನವನಗಳು, ಶಿಕ್ಷಣ ಸಂಸ್ಥೆಗಳು ಮತ್ತು ಕಚೇರಿಗಳ ಹೊರಗೆ ಬೀದಿ ವ್ಯಾಪಾರಿಗಳು ಮಾರಾಟ ಮಾಡುವ ಮಾದರಿಗಳನ್ನು ಹೊರತುಪಡಿಸಿ, ಮದುವೆಗಳು, ಶಾಪಿಂಗ್ ಮಾಲ್‌ಗಳಂತಹ ವಿವಿಧ ಸ್ಥಳಗಳಿಂದ ಇಲಾಖೆಯು ಮಾದರಿಗಳನ್ನು ಸಂಗ್ರಹಿಸಿದೆ ಎಂದು ಹಿರಿಯ ಎಫ್‌ಎಸ್‌ಎಸ್‌ಎಐ ಅಧಿಕಾರಿಯೊಬ್ಬರು ಉಲ್ಲೇಖಿಸಿದ್ದಾರೆ.

ನಿರಂತರ ಪರೀಕ್ಷಾ ಉಪಕ್ರಮವು ಬೀದಿ ಆಹಾರಕ್ಕೆ ಸಂಬಂಧಿಸಿದ ಅಪಾಯಗಳು ಮತ್ತು ಹಾನಿಕಾರಕ ರಾಸಾಯನಿಕಗಳ ಸಂಭಾವ್ಯ ಉಪಸ್ಥಿತಿಯ ಬಗ್ಗೆ ನಾಗರಿಕರಿಗೆ ಶಿಕ್ಷಣ ನೀಡುವುದು ಮಾತ್ರವಲ್ಲದೆ ಆಹಾರ ಸುರಕ್ಷತೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಮಾರಾಟಗಾರರಿಗೆ ಎಚ್ಚರಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

ಮಾತಾಡಬೇಡಿ...!

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಹಾಗೂ ಹೆಚ್ಚುವರಿ ಉಪ ಮುಖ್ಯಮಂತ್ರಿ ಬಗ್ಗೆ ನೀಡಿರುವ ಹೇಳಿಕೆಗೆ ವರಿಷ್ಠರು ಗರಂ ಆಗಿದ್ದಾರೆ ಎನ್ನಲಾಗಿದೆ. ಮುಖ್ಯಮಂತ್ರಿ ಅವರು ಈ ಸಂಬಂಧ ಪತ್ರಕರ್ತರ ಮುಂದೆ ಹೇಳಿಕೆ ನೀಡುವುದಕ್ಕೂ ಮುನ್ನ ರಾಜಣ್ಣ ಅವರನ್ನು ಸಂಪರ್ಕಿಸಿ, ಇಂತಹ ವಿಚಾರಗಳ ಬಗ್ಗೆ ಇನ್ನು ಮುಂದೆ ಬಹಿರಂಗವಾಗಿ ಮಾತನಾಡಬಾರದೆಂದು ಎಚ್ಚರಿಕೆ ನೀಡಿದ್ದಾರೆ. ಅದೇ ಸಂದರ್ಭದಲ್ಲಿ ಕೆಲವು ಸಚಿವರು ಮತ್ತು ಶಾಸಕರಿಗೂ ಕಿವಿಮಾತು ಹೇಳಿದ್ದಾರೆ. ಸಚಿವರಾದ ರಾಜಣ್ಣ ಮತ್ತು ಜಾರಕಿಹೊಳಿ ನೀಡುತ್ತಿರುವ ಹೇಳಿಕೆ ಬಗ್ಗೆ ಗರಂ ಆಗಿರುವ ಉಪಮುಖ್ಯಮಂತ್ರಿ ಶಿವಕುಮಾರ್, ಮಾಧ್ಯಮದ ಮುಂದೆ ಬಲ ತೋರಿಸುವ ಬದಲು ವರಿಷ್ಠರಿಂದ ಪರಿಹಾರ ತನ್ನಿ ಎಂದು ಖಾರವಾಗಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿಯೊಬ್ಬ ಕಾರ್ಯಕರ್ತನಿಗೂ, ಮುಖಂಡನಿಗೂ ಪಕ್ಷ ಮತ್ತು ಸರ್ಕಾರದಲ್ಲಿ ಅಧಿಕಾರ ಪಡೆಯುವ ಹಕ್ಕಿದೆ. ಅದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ. ಮಾಧ್ಯಮಗಳ ಮುಂದೆ ಹೇಳಿಕೆ ನೀಡಿ ಪ್ರಚಾರ ಪಡೆಯುವ ಬದಲು ಸಚಿವರುಗಳು ವರಿಷ್ಠರನ್ನು ಭೇಟಿ ಮಾಡಲಿ, ಅವರನ್ನು ಭೇಟಿ ಮಾಡಲು ಬೇಲಿಗಳು ಅಡ್ಡ ಇಲ್ಲ ಎಂದರು.

ನಾನೇ ಸ್ವಾಮೀಜಿ ಆಗುತ್ತೇನೆ!

ನಾನು ಖಾವಿ ಬಟ್ಟೆ ಹಾಕಿಕೊಳ್ಳಲು ಸಿದ್ಧ, ಅವರು ಖಾವಿ ಬಿಟ್ಟುಕೊಡಲು ಸಿದ್ಧರಿದ್ದಾರಾ ಎಂದು ಪರೋಕ್ಷವಾಗಿ ಸ್ವಾಮೀಜಿಯವರನ್ನು ರಾಜಣ್ಣ ಪ್ರಶ್ನಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಾಕ್ ಸ್ವಾತಂತ್ರ್ಯ ಎನ್ನುವುದು ಎಲ್ಲರಿಗೂ ಇದೆ. ಹಾಗಾಗಿ, ಸ್ವಾಮೀಜಿ ಗಳ ಹೇಳಿಕೆಯನ್ನು ನಾನು ವ್ಯಾಖ್ಯಾನಿಸಲು ಹೋಗುವುದಿಲ್ಲ ಎಂದು ರಾಜಣ್ಣ ಹೇಳಿದ್ದಾರೆ. ರಾಜ್ಯದಲ್ಲಿ ಸಿಎಂ ಸ್ಥಾನ ಖಾಲಿಯಿಲ್ಲ, ಡಿಸಿಎಂ ಸ್ಥಾನ ಖಾಲಿ ಯಿದೆ, ಭರ್ತಿ ಮಾಡಿ ಎಂದು ನಾನು ಈಗಾಗಲೇ ಹೇಳಿದ್ದೇನೆ. ಅದನ್ನು ಪುನರುಚ್ಚರಿಸುತ್ತೇನೆ. ಡಿ.ಕೆ.ಶಿವಕುಮಾರ್ ಅವರು ಹೇಳಿದ ಹಾಗೇ ನಡೆಯಬೇಕು ಎನ್ನುವುದು ನನಗೇನೂ ಇಲ್ಲ. ನನಗೂ ಸ್ವಂತ ಬುದ್ದಿ ಎನ್ನುವುದು ಇದೆ ಎಂದು ರಾಜಣ್ಣ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

ಸಂವಾದದಿಂದ ಉತ್ತಮ ಸಮಾಜ ನಿರ್ಮಾಣ

'ಮನಸ್‌ವೃದ್ಧಿ' ವಾಣಿಜ್ಯ ಉತ್ಸವದಲ್ಲಿ ಮೈಸೂರು ವಿವಿ ಕುಲಪತಿ ಅಭಿಮತ



ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯ ಅಧ್ಯಯನ ವಿಭಾಗದ ವತಿಯಿಂದ ಲಲಿತಕಲಾ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ 'ಮನಸ್‌ವೃದ್ಧಿ' ವಾಣಿಜ್ಯ ಉತ್ಸವವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಮೈಸೂರು, ಜೂ.27(ಜಿಎ)–ಮೊಬೈಲ್, ಗ್ಯಾಜೆಟ್‌ಗಳ ಬಳಕೆ ಹೆಚ್ಚಿದಂತೆ ಚರ್ಚಿಸುವ ಅಭ್ಯಾಸ ಕಡಿಮೆಯಾಗಿದೆ. ಸಂವಾದಗಳು ಉತ್ತಮ ಸಮಾಜವನ್ನು ರೂಪಿಸುತ್ತವೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯ ಅಧ್ಯಯನ ವಿಭಾಗದ ವತಿಯಿಂದ ಲಲಿತ ಕಲಾ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಮನಸ್‌ವೃದ್ಧಿ ವಾಣಿಜ್ಯ ಉತ್ಸವ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ವರ್ಷಕ್ಕೆ 30 ಲಕ್ಷ ಮಂದಿ ಉನ್ನತ ಶಿಕ್ಷಣ ಪಡೆದು ಪದವೀಧರರಾಗುತ್ತಿದ್ದು, ಇಷ್ಟು ಜನರಿಗೆ ಉದ್ಯೋಗ ಸೃಷ್ಟಿಸುವುದು ಸವಾಲಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಅಧ್ಯಯನ ಹಾಗೂ ಕೌಶಲ ಪಡೆಯುವತ್ತ ಗಮನಹರಿಸಬೇಕು ಎಂದರು.

ವಿಜ್ಞಾನ ವಿಷಯಗಳಷ್ಟೇ ವಾಣಿಜ್ಯ ವಿಷಯಕ್ಕೂ ಪ್ರಾಧಾನ್ಯತೆ ಬಂದಿದೆ. ವ್ಯಾಪಾರ, ವಹಿವಾಟು, ಷೇರು ಮಾರುಕಟ್ಟೆ, ಹಣಕಾಸು ವಲಯ ವೇಗವಾಗಿ ಬೆಳೆಯುತ್ತಿದೆ. ಈ ಕ್ಷೇತ್ರಕ್ಕೆ ನುರಿತವರು ಬೇಕು. ಹಾಗಾಗಿ ವಿಷಯಾಧಾರಿತ ಕಲಿಕೆ ಜೊತೆಗೆ ಕೌಶಲಕ್ಕೆ ಹೆಚ್ಚು ಒತ್ತು ನೀಡಿ ಎಂದ ಅವರು, ಸಂವಹನ ಸೇರಿದಂತೆ ವಿವಿಧ ಕೌಶಲಗಳನ್ನು ಸಿದ್ಧಿಸಿಕೊಳ್ಳಬೇಕು. ರಾಜ್‌ಕುಮಾರ್‌ರಂತೆ ಮೈಕಟ್ಟು, ರೂಪ ಇಲ್ಲದಿದ್ದರೂ ರಜನಿಕಾಂತ್ ಅವರಿಗೆ ಎಲ್ಲರನ್ನೂ ಸೆಳೆಯುವ ಕೌಶಲವಿತ್ತು. ಹೀಗಾಗಿಯೇ ಅವರ ಚಿತ್ರಗಳು ಜಪಾನ್, ಕೊರಿಯಾದಲ್ಲೂ ಯಶಸ್ಸು ಕಂಡಿವೆ. ಇದೇ ರೀತಿ ತಮ್ಮ ಕ್ಷೇತ್ರದಲ್ಲಿ ಕೌಶಲ ಬೆಳೆಸಿಕೊಳ್ಳುವುದು ಮುಖ್ಯ ಎಂದು ಹೇಳಿದರು.

ಶೈಕ್ಷಣಿಕ ವಿಚಾರದಲ್ಲಿ ಶಿಸ್ತನ್ನು ಬೆಳೆಸಿಕೊಳ್ಳಬೇಕು. ನೋಟ್ಸ್, ತರಗತಿ ಕಲಿಕೆಯಾಚೆಗೆ ಸ್ವಯಂ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಿ, ಒಂದೇ ವಿಷಯದ ಕುರಿತು ನುರಿತ ತಜ್ಞರಾಗಲು ಮುಂದಾಗಬೇಕು. ಉನ್ನತ ಶಿಕ್ಷಣ ಪಡೆಯುವುದು ಗುರಿಯಾಗಬೇಕು. ಒಂದು ವರ್ಷದ ಅವಧಿಯಲ್ಲಿ ನಾನೇನು ಸಾಧನೆ ಮಾಡಬೇಕು. ಎಷ್ಟು ಕಲಿಯಬೇಕು ಎಂಬುದರ ಬಗ್ಗೆಯೇ ಸದಾ ಯೋಚಿಸಿ ಕಾರ್ಯೋನ್ಮುಖರಾಗಿರಬೇಕು. ಮಾನವೀಯತೆ, ಪ್ರಾಮಾಣಿಕತೆ, ಕಲಿಕೆಯಲ್ಲಿ ನಿರಂತರತೆ, ಪರಿಶ್ರಮ ಹಾಗೂ ಸ್ಪಂದಿಸುವ ಗುಣ ಬೆಳೆಸಿಕೊಳ್ಳಬೇಕು. ಅದೇ ನಮ್ಮನ್ನು ನಾಯಕರನ್ನಾಗಿಸುತ್ತದೆ ಎಂದು ಎಂದು ಸಲಹೆ ನೀಡಿದರು.

ಉದ್ಯಮಶೀಲರಾಗಲು ವಿದ್ಯಾರ್ಥಿಗಳು ಆಲೋಚಿಸಬೇಕು. ಉದ್ಯೋಗ ಸೃಷ್ಟಿಸಿ ದೇಶದ ಅಭಿವೃದ್ಧಿಗೆ ನೆರವಾಗಬೇಕು. ಅದಕ್ಕಾಗಿ ತಂತ್ರಜ್ಞಾನ ಹಾಗೂ ಮಾನವ ಸಂಪನ್ಮೂಲವನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದರು. ಜೆ.ಕೆ.ಟೈರ್ ಸಂಸ್ಥೆಯ ಮುಖ್ಯ ವ್ಯವಸ್ಥಾಪಕಿ ಎ.ಸುಧಾಶ್ರೀ, ವಿಭಾಗದ ಮುಖ್ಯಸ್ಥ ಪ್ರೊ.ಎಚ್.ರಾಜಶೇಖರ್ ಉಪಸ್ಥಿತರಿದ್ದರು.

ಇಂದಿನಿಂದ 'ಮೈಸಿರಿ' ವಾರ್ಷಿಕೋತ್ಸವ

ಮೈಸೂರು,ಜೂ.27(ಜಿಎ)–ಮೈಸೂರು ಎಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ಕಾಲೇಜು ವತಿಯಿಂದ ಜೂ.28, 29ರಂದು ಕಾಲೇಜು ಆವರಣದಲ್ಲಿ ಮೈಸಿರಿ ಶೀರ್ಷಿಕೆಯಡಿ ಶಿಕ್ಷಣ ಸಂಸ್ಥೆ ವಾರ್ಷಿಕೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಚಾರ್ಯ ಡಾ.ಪ್ರಭುಸ್ವಾಮಿ ಈ ವಿಷಯ ತಿಳಿಸಿ, ಜೂ.28 ಮತ್ತು 29ರಂದು ಕಾರ್ಯಕ್ರಮಗಳ ನಡುವೆ ಫ್ಯಾಷನ್ ಶೋ ನಡೆಯಲಿದೆ. ಎರಡೂ ದಿನ ಸಂಜೆ 6.30ಕ್ಕೆ ಬಾಲಿವುಡ್ ನೈಟ್, ಹಾಡುಗಾರಿಕೆ, ಡಿಜೆ ನೈಟ್ಸ್ ಕಾರ್ಯಕ್ರಮಗಳು ನಡೆಯಲಿವೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರೊ.ಯೋಗೀಶ್, ಪ್ರೊ.ಪ್ರೀತಿ, ಪ್ರೊ.ಸಹನಾಪ್ರಿಯ ಉಪಸ್ಥಿತರಿದ್ದರು.

ಡಾ.ನ.ರತ್ನಗೆ ನುಡಿನಮನ



ಮೈಸೂರು, ಜೂ. 27 –ರಂಗಕರ್ಮಿ ಡಾ.ನ.ರತ್ನ ಅವರಿಗೆ ಜೂ.29ರಂದು ಬೆಳಗ್ಗೆ 10ಕ್ಕೆ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ರತ್ನರ ಬಳಗದಿಂದ ನುಡಿನಮನ ಏರ್ಪಡಿಸಿದೆ ಎಂದು ಶ್ರೀನಿವಾಸ ಪಾಲಹಳ್ಳಿ ತಿಳಿಸಿದ್ದಾರೆ.

ಪ್ರಶ್ನೆ ಪತ್ರಿಕೆ ಸೋರಿಕೆ ನಡೆಸಿದವರಿಗೆ ಶಿಕ್ಷೆ ವಿಧಿಸಲು ಸರ್ಕಾರ ಬದ್ಧ

- ಸಂಸತ್ ಜಂಟಿ ಅಧಿವೇಶನದಲ್ಲಿ ರಾಷ್ಟ್ರಪತಿ ಭಾಷಣ
- ಇತ್ತೀಚಿನ ನೀಟ್, ಯುಜಿಸಿ ನೆಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಸ್ತಾಪ



ನವದೆಹಲಿ: ಇತ್ತೀಚಿನ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಘಟನೆಗಳ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಸಂಪೂರ್ಣವಾಗಿ ಬದ್ಧವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಸಂಸತ್ತಿನ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಹೇಳಿದರು.

ಮೊದಲ ಬಾರಿಗೆ 18 ನೇ ಲೋಕಸಭೆಯನ್ನು ಉದ್ದೇಶಿಸಿ ಮಾತನಾಡಿದ ರಾಷ್ಟ್ರಪತಿಗಳು, ದೇಶದ ಯುವಜನತೆ ದೊಡ್ಡ ಕನಸು ಕಾಣಲು ಮತ್ತು ಅವುಗಳನ್ನು ಸಾಧಿಸಲು ಅನುವು ಮಾಡಿಕೊಡುವ ವಾತಾವರಣವನ್ನು ಸೃಷ್ಟಿಸಲು ಸರ್ಕಾರ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಶಿಕ್ಷಣ ರಂಗದಲ್ಲಿ ಸರ್ಕಾರ ಕೈಗೊಂಡ ಕ್ರಮಗಳನ್ನು ಅವರು ಪ್ರಸ್ತಾಪಿಸುತ್ತಿದ್ದಂತೆ, ಕೆಲವು ವಿರೋಧ ಪಕ್ಷದ ಸದಸ್ಯರು ನೀಟ್, ನೆಟ್ ಎಂದು ಕೂಗಿದರು. ಯಾವುದೇ ಕಾರಣದಿಂದ ಪರೀಕ್ಷೆಯಲ್ಲಿ ಅಡಚಣೆ ಉಂಟಾದರೆ ಅದು ಸೂಕ್ತವಲ್ಲ, ಸರ್ಕಾರಿ ನೇಮಕಾತಿ ಮತ್ತು ಪರೀಕ್ಷೆಗಳಲ್ಲಿ ಪಾವಿತ್ರ್ಯತೆ, ಪಾರದರ್ಶಕತೆ ಅತ್ಯಗತ್ಯ ಎಂದು ರಾಷ್ಟ್ರಪತಿಗಳು ಹೇಳಿದರು. ಇತ್ತೀಚಿನ ಪೇಪರ್ ಸೋರಿಕೆ ಘಟನೆಗಳಲ್ಲಿ ನ್ಯಾಯಯುತ ತನಿಖೆ ನಡೆಸಲು ಮತ್ತು ತಪ್ಪಿತಸ್ಥರಿಗೆ ಅತ್ಯಂತ ಕಠಿಣ ಶಿಕ್ಷೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದರು.

ಈ ಹಿಂದೆಯೂ ಕೆಲವು ರಾಜ್ಯಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯ ಘಟನೆಗಳು ನಡೆದಿವೆ, ಪಕ್ಷಪಾತದ ರಾಜಕೀಯವನ್ನು ಮೀರಿ ರಾಷ್ಟ್ರಮಟ್ಟದಲ್ಲಿ ಬಲವಾದ ಹೆಜ್ಜೆಗಳನ್ನು ಇಡುವ ಅಗತ್ಯವಿದೆ ಎಂದರು.

ನೀಟ್ ಪರೀಕ್ಷೆ ಪತ್ರಿಕೆ ಸೋರಿಕೆ ವಿರುದ್ಧ ಸಂಸತ್ತು ಕೂಡ ಬಲವಾದ ಕಾನೂನನ್ನು ಮಾಡಿದೆ ಎಂದು ರಾಷ್ಟ್ರಪತಿಗಳು ಹೇಳಿದರು. ಪರೀಕ್ಷಾ ಪ್ರಕ್ರಿಯೆಯಲ್ಲಿ ಸುಧಾರಣೆಗಳನ್ನು ತರಲು ಸರ್ಕಾರ ಕೆಲಸ ಮಾಡುತ್ತಿದೆ ಎಂದರು.

ತುರ್ತು ಪರಿಸ್ಥಿತಿ ಸಂವಿಧಾನ ಮೇಲೆ ನೇರ ದಾಳಿ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 1975 ರಲ್ಲಿ ತುರ್ತುಪರಿಸ್ಥಿತಿ ಹೇರಿಕೆಯನ್ನು ಸಂವಿಧಾನದ ಮೇಲಿನ ನೇರ ದಾಳಿಯ "ದೊಡ್ಡ ಮತ್ತು ಕರಾಳ ಅಧ್ಯಾಯ" ಎಂದು ಬಣ್ಣಿಸಿದರು. ಅಂತಹ ಅಸಂವಿಧಾನಿಕ ಶಕ್ತಿಗಳ ವಿರುದ್ಧ ದೇಶವು ಗೆದ್ದುಬಂದಿದೆ. ಸಂವಿಧಾನ ಜಾರಿಗೆ ಬಂದ ನಂತರವೂ ಸಂವಿಧಾನದ ಮೇಲೆ ಹಲವಾರು ದಾಳಿಗಳು ನಡೆದಿವೆ ಜೂನ್ 25, 1975 ರಂದು ತುರ್ತು ಪರಿಸ್ಥಿತಿ ಹೇರಿದ್ದು ಸಂವಿಧಾನದ ಮೇಲಿನ ನೇರ ದಾಳಿಯ ಅತಿದೊಡ್ಡ ಮತ್ತು ಕರಾಳ ಅಧ್ಯಾಯವಾಗಿದೆ. ಇಡೀ ದೇಶವು ಆಕ್ರೋಶಗೊಂಡಿತು. ಆದರೆ ಗಣರಾಜ್ಯದ ಸಂಪ್ರದಾಯಗಳಂತಹ ಅಸಂವಿಧಾನಿಕ ಶಕ್ತಿಗಳ ವಿರುದ್ಧ ದೇಶವು ವಿಜಯಶಾಲಿಯಾಗಿದೆ ಎಂದರು. ತಮ್ಮ ಭಾಷಣದಲ್ಲಿ ತುರ್ತು ಪರಿಸ್ಥಿತಿಯನ್ನು ಉಲ್ಲೇಖಿಸಿದಾಗ ಕೆಲವು ವಿರೋಧ ಪಕ್ಷದ ಸದಸ್ಯರು ಪ್ರತಿಭಟನೆ ನಡೆಸಿದರು. ಆದರೆ, ರಾಷ್ಟ್ರಪತಿಗಳು ಯಾರ ಹೆಸರನ್ನೂ ಉಲ್ಲೇಖಿಸಿರಲಿಲ್ಲ.

ಜು.1ರಂದು ತಾಪಂ ಸಾಮಾನ್ಯ ಸಭೆ

ಮೈಸೂರು, ಜೂ.27–ಮೈಸೂರು ತಾಲೂಕು ಪಂಚಾಯತ್‌ನ ಆಡಳಿತಾಧಿಕಾರಿ ಅಧ್ಯಕ್ಷತೆಯಲ್ಲಿ ಜು.1ರಂದು ಬೆಳಗ್ಗೆ 10.30ಕ್ಕೆ ಮೈಸೂರು ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಸಾಮಾನ್ಯ ಸಭೆಯನ್ನು ಏರ್ಪಡಿಸಲಾಗಿದೆ. ಸಭೆಗೆ ತಾಲೂಕಿನ ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಮೇ–2024ರ ಮಾಹೆಯ ಅಂತ್ಯದವರೆಗಿನ ಪ್ರಗತಿಯ ವರದಿಯೊಂದಿಗೆ ಕಡ್ಡಾಯವಾಗಿ ಹಾಜರಾಗಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.06.2024 ಶುಕ್ರವಾರ, ಮಳೆ ನಕ್ಷತ್ರ: ಆರಿದ್ರಾ 22.06.2024ರಿಂದ 05.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಪೂಭಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ಜ್ಞಾನೇಶ್ವರಿ ವಿದ್ಯಾಸಂಸ್ಥೆ :** ನಿಸರ್ಗದ ಮಡಿಲಿನಲ್ಲಿ ಶ್ರೀ ಸರಸ್ವತಿದೇವಿ, ಖ್ಯಾತ ಚಿತ್ರ ಕಲಾವಿದ ಹಾ.ಮ. ರಂಗಸ್ವಾಮಿ ಅವರು ಚಿತ್ರಿಸಿರುವ ಕಲಾಕೃತಿ ಲೋಕಾರ್ಪಣೆ, ಕಲಾಕೃತಿ ಲೋಕಾರ್ಪಣೆ : ಶ್ರೀ ಜ್ಞಾನೇಶ್ವರಿ ವಿದ್ಯಾಸಂಸ್ಥೆ ಮುಖ್ಯಸ್ಥ ಎಸ್.ಶಂಕರರಾವ್, ವಿಶೇಷ ಅತಿಥಿಗಳು: ಹಿರಿಯ ಕಲಾವಿದ ಎನ್.ಬಿ. ಕಾವೇರಪ್ಪ, ಉಪಸ್ಥಿತರು: ಕಲಾವಿದ ಹಾ.ಮ.ರಂಗಸ್ವಾಮಿ, ಸ್ಥಳ: ಶ್ರೀ ಜ್ಞಾನೇಶ್ವರಿ ವಿದ್ಯಾಸಂಸ್ಥೆ, 8ನೇ ಮೇನ್, 1ನೇ ಹಂತ, ಹೆಬ್ಬಾಳು, ಮಧ್ಯಾಹ್ನ 12.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ವಾಣಿಜ್ಯಶಾಸ್ತ್ರ ವಿಭಾಗ :** ವಿಶ್ವವಿದ್ಯಾನಿಲಯ ಮಟ್ಟದ ವಾಣಿಜ್ಯ ಉತ್ಸವ 'ಮನಸ್ ವೃದ್ಧಿ–2024' ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಡಾ.ಬಿ. ಮಹದೇವಪ್ಪ, ಅಧ್ಯಕ್ಷತೆ: ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ಹೆಚ್. ರಾಜಶೇಖರ್, ಬಹುಮಾನ ವಿತರಣೆ : ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ. ಕೆ. ನಾಗೇಂದ್ರಬಾಬು, ಡಾ. ಬಿ. ನಾಗರಾಜು, ಡಾ. ಎನ್. ನಾಗರಾಜ, ಡಾ. ಎಂ.ಎಲ್. ಅಶೋಕ, ಸ್ಥಳ: ಲಲಿತ ಕಲೆಗಳ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ನಿವೃತ್ತ ಶಿಕ್ಷಕರಾದ ಶ್ರೀಮತಿ ನರಸು ಎಲ್, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ

■ **ಮೈಸೂರು ಸಂಗೀತ ಸಭೆಗಳ ಒಕ್ಕೂಟ ಮತ್ತು ಗಾನಭಾರತಿ :** ಕರ್ನಾಟಕ ವಾಗ್ಗೇಯ ವೈಭವ ಕಾರ್ಯಕ್ರಮ, ಸಂಜೆ 6ಕ್ಕೆ ವಾಗ್ಗೇಯಕಾರರು– ಪ್ರೊ.ರಾ.ವಿಶ್ವೇಶ್ವರನ್, ವಿದ್ವಾನ್ ಎನ್.ಆರ್.ಪ್ರಶಾಂತ್ ಅವರಿಂದ ಗಾಯನ, ವಿದ್ವಾನ್ ತುಮಕೂರು ಬಿ.ರವಿಶಂಕರ್–ಮೃದಂಗ; ವಾಗ್ಗೇಯಕಾರರು–ಬಳ್ಳಾರಿ ಶೇಷಗಿರಿ ಆಚಾರ್, ವಿದುಷಿ ಹರ್ಷಿತಾ ಅವರಿಂದ ಗಾಯನ, ವಿದ್ವಾನ್ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ವಿಕ್ರಂ ಭಾರದ್ವಾಜ್–ಮೃದಂಗ, ವಿದ್ವಾನ್ ಕೆ.ಎಂ. ಲಿಖಿತ್–ಮೋರ್ಚಿಂಗ್, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಬಣ್ಣದ ಬಾನಾಡಿಗಳು' –ಬಾನುಲಿ ಸರಣಿ, ರಚನೆ–ಡಾ.ಎಸ್.ವಿ. ನರಸಿಂಹನ್, ಪ್ರಸ್ತುತಿ– ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ– ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಪ್ರೊ. ಸಿ. ಮಹದೇವಮೂರ್ತಿ, ಮುಖ್ಯಸ್ಥರು, ನಿರ್ವಹಣ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ–ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಬಾಲಸಾಯಿ–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ, ಪ್ರಸ್ತುತಿ : ಶಿವಶಂಕರಸ್ವಾಮಿ. ಹೆಚ್. ಎಲ್

ಮಧ್ಯಾಹ್ನ: 12.30 ದೇವರನಾಮ–ಅಂಬುಜಾ ಶ್ರೀಧರ್, 12.45 ಕಾದಂಬರಿ ವಿಹಾರ – ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್. ಎಸ್, 1.20 ಭಾವಗೀತೆಗಳು–ಪ್ರಥಮ್ ಭಟ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಚಿತ್ರಾ ಬಿಲ್ವಂ, 4.00 ಮಹಿಳಾರಂಗ–ಸಖೀ ಸಂವಾದ, ಪ್ರಸ್ತುತಿ : ಸಹನಾ. ಆರ್, 4.30 ವೃತ್ತಿ ಮಾರ್ಗದರ್ಶನ : 'ಪಶುವೈದ್ಯ ವಿಜ್ಞಾನ ಮತ್ತು ಪಶುಸಂಗೋಪನೆ ಅಂದರೆ ವೆಟರಿನರಿ ಸೈನ್ಸ್ ಮತ್ತು ಅನಿಮಲ್ ಹಸ್ಬೆಂಡರಿ ಶಿಕ್ಷಣದ ಪ್ರಾಮುಖ್ಯತೆ' ಕುರಿತು ಹಾಸನದ ಸರ್ಕಾರಿ ಪಶುವೈದ್ಯಕೀಯ ಮಹಾವಿದ್ಯಾಲಯದ ಡೀನ್ ಡಾ. ಶಿವಕುಮಾರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಎನ್. ಕೇಶವಮೂರ್ತಿ, 5.30 Pashudhan Se Behthar Jeevan, ಪ್ರಾಯೋಜಕರು : ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, 6.50 ಕೃಷಿರಂಗ–ಮೈಸೂರು ತಾಲೂಕು ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಆವರಣದಲ್ಲಿ ಜರುಗಿದ ಸಾವಯವ ಸಂಪದ ಬಾನುಲಿ ಸರಣಿಯ ಸಮಾರೋಪ ಸಮಾರಂಭದ ಬಾನುಲಿ ವರದಿ. ಪ್ರಸ್ತುತಿ:ಆರ್. ಲೋಕೇಶ್ವರಿ, 7.45 ಚಿತ್ರಗೀತೆಗಳು, 8.00 ಸಂಧ್ಯಾ ರಾಗ : ನಿವೃತ್ತ ಪ್ರಾಧ್ಯಾಪಕರಾದ ಎನ್. ಬೋರಲಿಂಗಯ್ಯ ಹಾಗೂ ಅವರ ಮಡದಿ ಸರಸ್ವತಿ ಬೋರಲಿಂಗಯ್ಯ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಅಬ್ದುಲ್ ರಶೀದ್, 9.30 ನಾಟಕ : ಬಯಲಾಟ, ಮೂಲಕಥೆ ಹಾಗೂ ಬಾನುಲಿ ನಾಟಕ ರೂಪಾಂತರ–ಅಲಕಾ ಕಟ್ಟೆಮನೆ, ನಿರ್ದೇಶನ ಹಾಗೂ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 10.00 ತತ್ವ ಸಂಚಾರ : ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.30 ಸವಿನೆನಪು

ದಿನಾ ಬೆಳಗ್ಗೆ ತಮ್ಮ ತಮ್ಮ ವಾರ್ಡ್ ವ್ಯಾಪ್ತಿ ವಾಕಿಂಗ್ ಮಾಡಿ...!

● ಪಾಲಿಕೆ ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರ ಸಲಹೆ ● ಜನರ ಸಮಸ್ಯೆ ಅರಿಯಲು ಇದೇ ಸುಲಭ ಮಾರ್ಗ ● ಸಣ್ಣ–ಪುಟ್ಟ ಸಮಸ್ಯೆ ತಕ್ಷಣ ಪರಿಹರಿಸಿ



ನಗರ ಪಾಲಿಕೆಯ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಶಾಸಕ ಜಿ.ಟಿ.ದೇವೇಗೌಡ, ಪಾಲಿಕೆ ವ್ಯಾಪ್ತಿಯ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್ ಮತ್ತಿತರರಿದ್ದರು.

ಮೈಸೂರು, ಜೂ.27(ಎಂಕೆ)– ನಗರಪಾಲಿಕೆಯ ಎಲ್ಲಾ ಅಧಿಕಾರಿಗಳು ಬೆಳಗ್ಗೆ ಹೊತ್ತು ತಮ್ಮ ತಮ್ಮ ವ್ಯಾಪ್ತಿಯ ವಾರ್ಡ್‌ಗಳಲ್ಲಿ ವಾಕಿಂಗ್ ಅಥವಾ ಟೂರ್ ಮಾಡಿ ಸಮಸ್ಯೆಗಳ ಪಟ್ಟಿ ತಯಾರಿಸಿ ವರದಿ ನೀಡಿದರೆ, ತ್ವರಿತವಾಗಿ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗುತ್ತದೆ. ಪ್ರತಿಯೊಬ್ಬರು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡುವಂತೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸಲಹೆ ನೀಡಿದರು.

ನಗರ ಪಾಲಿಕೆಯ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಗುರುವಾರ ಪಾಲಿಕೆ ವ್ಯಾಪ್ತಿಯ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಕ್ಷೇತ್ರ ವ್ಯಾಪ್ತಿಯಲ್ಲಿ ಕಂಪ್ಲೆಂಟ್ ಬರದಂತೆ ನೋಡಿಕೊಳ್ಳಿ, ಮೇಜರ್ ಸಮಸ್ಯೆಗಳಿದ್ದರೆ ಬರಲಿ. ಆದರೆ ಸಣ್ಣ–ಪುಟ್ಟ ಸಮಸ್ಯೆಗೂ ಮನೆ ಮುಂದೆ ಜನರು ಬರುವುದಕ್ಕೆ ಅವಕಾಶ ಮಾಡಿಕೊಡಿ. ನೀವು ಮಾಡುವ ಕೆಲಸವನ್ನು ಸರಿಯಾಗಿ ಮಾಡಿ ಎಂದು ತಾಕೀತು ಮಾಡಿದರು.

ಈಗ ಕಾರ್ಪೊರೇಟರ್‌ಗಳಿಲ್ಲ. ಹಾಗಾಗಿ ಅಧಿಕಾರಿಗಳು, ಸಿಬ್ಬಂದಿಗಳೇ ಜನರೊಂದಿಗೆ ನೇರ ಸಂಪರ್ಕ ಇಟ್ಟುಕೊಂಡಿರಬೇಕು. ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಯುಜಿಡಿ ಸಮಸ್ಯೆಗಳು ಬರದಂತೆ ಎಚ್ಚರಿಕೆ ವಹಿಸಿ, ಯಾರೇ ಸಮಸ್ಯೆ ಹೇಳಿದರೂ ಕೂಡಲೇ ಸ್ಪಂದಿಸಿ, ಬೆಳಗ್ಗೆ ಹೊತ್ತು ತಮ್ಮ ವ್ಯಾಪ್ತಿಯ ವಾರ್ಡ್‌ಗಳಲ್ಲಿ ವಾಕಿಂಗ್ ಮಾಡುವ ಅಭ್ಯಾಸ ಬೆಳೆಸಿಕೊಳ್ಳಿ. ಕೆಲಸ ಚುರುಕು ಮಾಡಿ. ಸಮಸ್ಯೆಗಳು ಒಂದೆರಡು ಇದ್ದಾಗಲೇ ಸರಿ ಪಡಿಸಿ, ಸಮಸ್ಯೆಗಳು ಜಾಸ್ತಿಯಾಗಿ ಕೆಟ್ಟ ಹೆಸರು ತರುತ್ತದೆ ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಕ್ಷೇತ್ರ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಅಸಮರ್ಪಕ ಪೂರೈಕೆ, ಯುಜಿಡಿ ಸಮಸ್ಯೆ, ಉದ್ಯಾನ ನಿರ್ವಹಣೆ ಲೋಪ ಹೀಗೆ ಹಲವು ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ನೀಡಿದ ದೂರಿನ ಮೇರೆಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಶಾಸಕರು, ಅಗತ್ಯ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಸಾರ್ವಜನಿಕರು ತಮ್ಮ ಸಮಸ್ಯೆಗಳ ಬಗ್ಗೆ ಹೇಳಿಕೊಳ್ಳುವ ಸಂದರ್ಭದಲ್ಲಿಯೇ ಸಂಬಂಧ ಪಟ್ಟ ಅಧಿಕಾರಿಗಳನ್ನು ಪ್ರಶ್ನಿಸಿದ ಶಾಸಕರು, ಮುಂದೆ ಈ ರೀತಿ ಲೋಪವಾಗದಂತೆ ಕ್ರಮವಹಿಸಬೇಕು ಎಂದು ಎಚ್ಚರಿಕೆ ನೀಡಿದರಲ್ಲದೆ ಸಮಸ್ಯೆಗಳು ಬಗೆಹರಿಯುತ್ತಿವೆಯೇ ಎಂಬುದರ ಕುರಿತು ಹಿರಿಯ ಅಧಿಕಾರಿಗಳು ಫಾಲೋ ಅಪ್ ಮಾಡಬೇಕು. ಇಲ್ಲವೇ ಯಾವ ಕೆಲಸಗಳು ಆಗುವುದಿಲ್ಲ ಎಂದು ತಿಳಿ ಹೇಳಿದರಲ್ಲದೆ ವಿಜಯನಗರ 3ನೇ ಹಂತ, ವಾರ್ಡ್ ನಂ 7, 44, 45, 46, 58 ವ್ಯಾಪ್ತಿಯಲ್ಲಿ ಸಮಸ್ಯೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರಲ್ಲದೆ ಸಮಸ್ಯೆಗಳು ತ್ವರಿತವಾಗಿ ಬಗೆಹರಿಸಿ, ಮಾಹಿತಿ ನೀಡುವಂತೆ ತಿಳಿಸಿದರು.

ಉದ್ದೇಶ ಈಡೇರುವುದಿಲ್ಲ: ಪಾರ್ಕ್‌ಗಳ ನಿರ್ವಹಣೆ ಇಲ್ಲದಿರುವುದು ನನ್ನ ಗಮನಕ್ಕೆ ಬಂದಿದೆ. ಪಾರ್ಕ್ ನಿರ್ಮಾಣ ಉದ್ದೇಶ ಈಡೇರಬೇಕಾದರೆ ನಿರ್ವಹಣೆ ಸರಿಯಾಗಿರಬೇಕು. ಇಲ್ಲವಾದರೆ ಉದ್ಯಾನವನಗಳು ಪುಂಡರ, ಕುಡುಕರ ಸ್ಥಳವಾಗುತ್ತವೆ. ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯಲ್ಲಿ 16 ಪಾರ್ಕ್‌ಗಳಿದ್ದು, ಎಲ್ಲಾ ಪಾರ್ಕ್‌ಗಳ ನಿರ್ವಹಣೆಯೂ ಆಗಬೇಕು. ಹಾಗೆಯೇ ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುವವರಿಂದಾಗುವ ತ್ಯಾಜ್ಯ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.

ಆಶ್ರಯ ಬಡಾವಣೆಗೆ ಮೂಲ ಸೌಕರ್ಯ: ಪಾಲಿಕೆ ವತಿಯಿಂದ ಆಶ್ರಯ ಬಡಾವಣೆಗಳನ್ನು ಗುರೂರು, ಬೋಗಾದಿ, ಹಿನಕಲ್ ಗ್ರಾಮಗಳಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಆದರೆ ಅವುಗಳಿಗೆ ಮೂಲಭೂತ ಸೌಕರ್ಯ ಒದಗಿಸದೆ ಬಹಳ ತೊಂದರೆಯಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡುವ ಮುನ್ನ ಮೂಲ ಸೌಕರ್ಯಗಳನ್ನು ಒದಗಿಸಿ. ಮಂಡಕಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಆಶ್ರಯ ಮನೆಗಳ ನಿರ್ಮಾಣ ಹಂತದ ಮಾಹಿತಿ ಪಡೆದರು.

ಸಭೆಯಲ್ಲಿ ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್, ಪಾಲಿಕೆ ಹೆಚ್ಚುವರಿ ಆಯುಕ್ತೆ ಕುಸುಮಾಕುಮಾರಿ, ಎಸ್ಇ ಕೆ.ಜೆ.ಸಿಂಧು, ವಲಯ ಸಹಾಯಕ ಆಯುಕ್ತ ಸತ್ಯಮೂರ್ತಿ, ಆರೋಗ್ಯಾಧಿಕಾರಿ ಡಾ.ವೆಂಕಟೇಶ್ ಸೇರಿದಂತೆ ಅಧಿಕಾರಿ, ಸಿಬ್ಬಂದಿ ಹಾಗೂ ಆಯಾ ವಾರ್ಡ್‌ನ ಮುಖಂಡರು ಉಪಸ್ಥಿತರಿದ್ದರು.

ಪಾಲಿಕೆಗೆ ಹಸ್ತಾಂತರವಾದ ಬಡಾವಣೆಗಳಲ್ಲಿ ಮುಡಾ ತೆರಿಗೆ ಸಂಗ್ರಹ...!

ಪಾಲಿಕೆಗೆ ಹಸ್ತಾಂತರವಾಗಿರುವ ಆನಂದನಗರದಲ್ಲಿ ಮುಡಾ ಕಂದಾಯ ಕಟ್ಟಿಸಿಕೊಳ್ಳುತ್ತಿದೆ. ಈ ಕುರಿತು ಮತ್ತೊಮ್ಮೆ ಮುಡಾಗೆ ಪತ್ರ ಬರೆಯುವಂತೆ ಶಾಸಕ ಜಿ.ಟಿ.ದೇವೇಗೌಡ, ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಮುನ್ಸಿಪಾಲಿಟಿ ಕಾಯಿದೆ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳೇ ತೆರಿಗೆ ಪಾವತಿಸಿಕೊಳ್ಳಬೇಕು. ಹೀಗಿದ್ದರೂ, ಮುಡಾ ಕಂದಾಯ ಕಟ್ಟಿಸಿಕೊಳ್ಳುತ್ತಿದೆ. ಹಾಗಾಗಿ ಮುಡಾಕ್ಕೆ ಮತ್ತೊಮ್ಮೆ ಪತ್ರ ಬರೆದು ಕಂದಾಯ ಪಾವತಿಸಿಕೊಳ್ಳದೆ ಪಾಲಿಕೆಗೆ ಕಳುಹಿಸಬೇಕು ಎಂದು ಸ್ಥಳದಲ್ಲಿಯೇ ಇದ್ದ ಮುಡಾ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಡಾದಿಂದ ಅನುಮೋದನೆಗೊಂಡ ಬಡಾವಣೆಗಳು ನಗರಪಾಲಿಕೆಗೆ ಹಸ್ತಾಂತರವಾದ ಮೇಲೆ ಖಾತೆ ಮಾಡಿಕೊಡುವುದು ಸೇರಿದಂತೆ ಮೂಲ ಸೌಕರ್ಯಗಳನ್ನು ಕಲ್ಪಿಸುತ್ತಿದೆ. ಆದರೆ ಪಾಲಿಕೆಗೆ ಹಸ್ತಾಂತರವಾದ ಮೇಲೂ ನಿವಾಸಿಗಳಿಂದ ತೆರಿಗೆ ಸಂಗ್ರಹ ಮಾಡುತ್ತಿದೆ. ಈ ಬಗ್ಗೆ ಮತ್ತೊಮ್ಮೆ ಮುಡಾಕ್ಕೆ ಪತ್ರ ಬರೆಯುವುದಕ್ಕೆ ಪಾಲಿಕೆ ಆಯುಕ್ತರಿಗೆ ನಿರ್ದೇಶನ ನೀಡಿದರು.

39 ಎಕರೆ, 23 ಗುಂಟೆ ವಿಸ್ತೀರ್ಣದ ಆನಂದನಗರ ಬಡಾವಣೆಯ ವಿನ್ಯಾಸ ನಕ್ಷೆಯನ್ನು ಮೂರು ಬಾರಿ ಮರು ವಿನ್ಯಾಸ ಮಾಡಿ ಅನುಮೋದನೆಯನ್ನು ನೀಡಲಾಗಿದೆ. ಮೊದಲ ಬಾರಿ 421 ಮನೆಗಳಿದ್ದು, 2ನೇ ಬಾರಿ 395 ಹಾಗೂ 3ನೇ ಬಾರಿಗೆ 532 ಮನೆಗಳಾಗಿವೆ. ಈ ಬಡಾವಣೆಯಲ್ಲಿ ಕಾಯ್ದಿರಿಸಿದ ಉದ್ಯಾನವನ ಹಾಗೂ ಸಿಎ ಪ್ರದೇಶಗಳು ಭೌತಿಕವಾಗಿ ಲಭ್ಯವಿವೆಯೇ ಎಂಬುದನ್ನು ತಾಂತ್ರಿಕ ಶಾಖೆಯಿಂದ ಪರಿಶೀಲಿಸಿ, ಸಂರಕ್ಷಿಸಿ. ಎಷ್ಟು ನಿವೇಶನಗಳು ಬಿಡುಗಡೆಯಾಗಿವೆ. ಉಳಿಕೆ ನಿವೇಶನಗಳೆಷ್ಟು ಹಾಗೂ ಕಡತದಲ್ಲಿ ದಾಖಲಾಗಿರುವಂತೆ 3 ಎಕರೆ 17 ಗುಂಟೆ ಖರಾಬಿದ್ದು, ಖರಾಬು ಜಾಗದಲ್ಲಿ ನಿವೇಶನಗಳಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ ಹಿನ್ನಲೆಯಲ್ಲಿ ಭೂಮಾಪಕರಿಂದ ಮಾಹಿತಿ ಪಡೆದುಕೊಳ್ಳಿ ಹಾಗೆಯೇ 39 ಎಕರೆ, 23 ಗುಂಟೆ ವಿಸ್ತೀರ್ಣದ ಆನಂದನಗರ ಬಡಾವಣೆಗೆ 2003ರ ಮೇ 5 ರಂದು ಅನುಮೋದಿಸಲಾದ ಪರಿಷ್ಕೃತ ನಕ್ಷೆಯಲ್ಲಿ 39 ಎಕರೆ ಮಾತ್ರ ಇದ್ದು, ಉಳಿಕೆ 23 ಗುಂಟೆ ಜಮೀನನ್ನು ಹೊರತುಪಡಿಸಲಾಗಿರುವ ಬಗ್ಗೆ ಕಾರಣವು ಕಡತದಲ್ಲಿ ದಾಖಲಾಗಿರುವುದಿಲ್ಲ ಈ ಬಗ್ಗೆ ಪರಿಶೀಲಿಸಿ, ಕ್ರಮ ವಹಿಸುಮಂತೆ ತಿಳಿಸಿದರು.

ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ,

ಕೊಠಡಿ ಸಂಖ್ಯೆ 342. ಮೂರನೇ ಮಹಡಿ, ಜಿಲ್ಲಾಡಳಿತ ಭವನ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ದೂ: 08226–224889 Email ID: dlochamarajanagar@gmail.com

ಸಂ: NPCB/CHN/Middle AgeSpectacles/01/2024-25 ದಿನಾಂಕ: 27–06–2024

ಇ–ಟೆಂಡರ್ ಪ್ರಕಟಣೆ

2024–25 ನೇ ಸಾಲಿನಲ್ಲಿ ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಆಶಾಕಿರಣ ಯೋಜನೆಯಡಿಯಲ್ಲಿ ದೃಷ್ಟಿದೋಷವಿರುವ 19–39ರ ವಯೋಮಾನದವರಿಗೆ ಉಚಿತವಾಗಿ ಕನ್ನಡಕಗಳನ್ನು ವಿತರಿಸಲು, ಕನ್ನಡಕಗಳ ಖರೀದಿಗಾಗಿ ಕರೆಯಲಾಗಿರುವ ಇ–ಟೆಂಡರ್.

TENDER SCHEDULE

1. Tender Reference No	DHFWS/2024-25/IND0690
2. Tender Amount	7718000/-
3. EMD Amount (2%)	154360/-

4. Date of Commencement of Download of Tender Document from e Procurement website: http://https://kppp.karnataka.gov.in/#/portal/portal-home: From 28-06-2024

5. Date, Time & Venue of Pre-bid Meeting: 01-07-2024 @11-00 Hrs District Leprosy Office, Room No 342, Third Floor, District Administrative Building, Chamarajanagar 571313

6. Last Date and Time for uploading of e Tender in e Procurement Portal : 24-07-2024 @ 17:30 Hrs

7. Date and Time of Online Opening of Technical Bids: 26-07-2024 @ 11:00 Hrs

8. Date and Time of Equipment's Demonstration (Sample submission): 29-07- 2024 @ 11:00 Hrs

9. Date and Time of Financial Bid Opening: 02-08-2024 @ 11:30 Hrs (Tentative)

ಸಹಿ/– ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂ:ವಾಸಾಸಂಇ:ಚಾ.ನಗರ:52:2024–25

ರಾಜ್ಯದ ಅಭಿವೃದ್ಧಿ ನಮ್ಮೆಲ್ಲರ ಗುರಿಯಾಗಿರಬೇಕು

● ರಾಜ್ಯದಿಂದ ಆಯ್ಕೆಯಾಗಿರುವ ಸಂಸದರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒಗ್ಗಟ್ಟಿನ ಪಾಠ

● ರಾಜ್ಯದ ನೆಲ–ಜಲ, ಸಂಸ್ಕೃತಿ, ಸಂಪನ್ಮೂಲ ಅಭಿವೃದ್ಧಿಗೆ ಸೌಹಾರ್ದಯುತವಾಗಿ ಪ್ರಯತ್ನಿಸೋಣ



ನವದೆಹಲಿಯ ಖಾಸಗಿ ಹೋಟೆಲಿನಲ್ಲಿ ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ರಾಜ್ಯ ಸಂಸದರ ಸಭೆ ನಡೆಯಿತು.

ನವದೆಹಲಿ, ಜೂ.27–ರಾಜ್ಯದ ನೆಲ–ಜಲ, ಸಂಸ್ಕೃತಿ, ಸಂಪನ್ಮೂಲ ಅಭಿವೃದ್ಧಿಗಾಗಿ ರಾಜ್ಯದ ಎಲ್ಲಾ ಸಂಸದರೂ ಪಕ್ಷಾತೀತವಾಗಿ ಒಂದೇ ಧ್ವನಿಯಲ್ಲಿ ಪ್ರಯತ್ನಿಸುವ ಅಗತ್ಯವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್, ಸಚಿವರಾದ ಡಾ. ಜಿ.ಪರಮೇಶ್ವರ್, ಡಾ. ಹೆಚ್.ಸಿ. ಮಹದೇವಪ್ಪ, ಕೃಷ್ಣಭೈರೇಗೌಡ, ಪ್ರಿಯಾಂಕ್ ಖರ್ಗೆ, ಕೆ.ಜೆ.ಜಾರ್ಜ್, ಹೆಚ್.ಕೆ.ಪಾಟೀಲ್ ಅವರೊಂದಿಗೆ ಇಂದು ದೆಹಲಿಗೆ ಆಗಮಿಸಿದ ಮುಖ್ಯಮಂತ್ರಿಗಳು ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ರಾಜ್ಯದಿಂದ ಆಯ್ಕೆಯಾದ ಸಂಸದರ ಸಭೆನಡೆಸಿದರು.

ಈ ವೇಳೆ ಮಾತನಾಡಿದ ಮುಖ್ಯಮಂತ್ರಿಗಳು, ರಾಜ್ಯದ ಅಭಿವೃದ್ಧಿ ಒಂದೇ ನಮ್ಮ ಗುರಿಯಾಗಿರಬೇಕು. ಇದರಲ್ಲಿ ರಾಜಕೀಯ, ಟೀಕೆ, ಭಾವನಾತ್ಮಕವಾದ ಆರೋಪಗಳ ಅಗತ್ಯವಿಲ್ಲ. ನಾವೆಲ್ಲರೂ ಪಕ್ಷಾತೀತವಾಗಿ ರಾಜ್ಯದ ಅಭಿವೃದ್ಧಿಗೆ ಸೌಹಾರ್ದಯುತವಾಗಿ ಪ್ರಯತ್ನಿಸೋಣ. ರಾಜ್ಯದ ಹಿತಕ್ಕಾಗಿ ಸಂಸತ್ತಿನ ಒಳಗೆ ಮತ್ತು ಹೊರಗೆ ಧ್ವನಿ ಎತ್ತೋಣ ಎಂದು ಮನವಿ ಮಾಡಿದರು.

ಮೇಕೆದಾಟು ಯೋಜನೆಗೆ ಕೇಂದ್ರದ ಅನುಮತಿ ಅಗತ್ಯವಿದೆ. ಭದ್ರಾ ಯೋಜನೆ ಬಗ್ಗೆಯೂ ಪ್ರಯತ್ನ ಮುಂದುವರೆಸಬೇಕಾಗಿದೆ ಎಂದ ಸಿದ್ದರಾಮಯ್ಯ, ಭದ್ರಾ ಯೋಜನೆಗೆ ಕೇಂದ್ರ ಬಜೆಟ್‌ನಲ್ಲಿ ಘೋಷಣೆ ಮಾಡಿ ಒಂದು ವರ್ಷವಾಗಿದೆ. ಹೀಗಾಗಿ ಆ ಯೋಜನೆಗೆ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ, ರಾಜ್ಯದಿಂದಲೇ ರಾಜ್ಯಸಭೆಗೆ ಆಯ್ಕೆಯಾಗಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಿದರು.

18,172 ಕೋಟಿ ಬರ ಪರಿಹಾರ ಹಣ ಕೇಳಿದ್ದೆವು. ನಮಗೆ ಅದು ಪೂರ್ತಿ ಬಂದಿಲ್ಲ. ಈ ಹಣವನ್ನು ಕೇಂದ್ರದಿಂದ ಪಡೆಯಲು ಎಲ್ಲಾ ಸಂಸದರೂ ಪ್ರಯತ್ನಿಸಬೇಕಾಗಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕರ್ನಾಟಕ ಕಲ್ಯಾಣ ಹಿಂದುಳಿದಿದೆ. ಅಲ್ಲಿಗೆ ಏಮ್ಸ್ ಬಂದರೆ ಅಭಿವೃದ್ಧಿ ಸಾಧ್ಯವಾಗುತ್ತದೆ. ಆ ದಿಕ್ಕಿನಲ್ಲು ಪ್ರಯತ್ನಗಳು ಮುಂದುವರೆಯಬೇಕು ಎಂದು ಹೇಳಿದರು.

ರಾಜ್ಯದ ಕರಾವಳಿ ವಿಭಾಗಗಳ ಅಭಿವೃದ್ಧಿಗಾಗಿ ಉಡಾನ್ ಯೋಜನೆಯಡಿ ಸಲ್ಲಿಸಿರುವ ಪ್ರಸ್ತಾವನೆಯು ನಾಗರಿಕ ವಿಮಾನ ಯಾನ ಇಲಾಖೆಯಲ್ಲಿದೆ. ಈ ಪ್ರಸ್ತಾವನೆಗೆ ಅಂಗೀಕಾರ ಪಡೆಯಬೇಕಾದ ಅಗತ್ಯವಿದೆ. ಮೈಸೂರು ಅಥವಾ ಹಾಸನಕ್ಕೆ ಮತ್ತೊಂದು ಐಐಟಿ ಬೇಕು ಎಂಬ ಪ್ರಸ್ತಾವನೆಯು ಕೇಂದ್ರದ ಮುಂದಿದೆ. ಕಸ್ತೂರಿ ರಂಗನ್ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು. ಈ ಮೂಲಕ ಪಶ್ಚಿಮಘಟ್ಟದ ಜನರಿಗೆ ನೆಮ್ಮದಿ ಒದಗಿಸಬೇಕು ಎಂದು ಮನವಿ ಮಾಡಿದ್ದೇವೆ. ನಮ್ಮ ಈ ಮನವಿಯನ್ನು ಕೇಂದ್ರ ಅಂಗೀಕರಿಸಲು ಎಲ್ಲಾ ಸಂಸದರು ಒಕ್ಕೊರಲಿನಿಂದ ಧ್ವನಿ ಎತ್ತಬೇಕು ಎಂದರು.

ರಾಜ್ಯವು ರೈಲ್ವೆ ಸಂಪರ್ಕದಲ್ಲಿ ಹಿಂದುಳಿದಿದೆ ಎಂದ ಮುಖ್ಯಮಂತ್ರಿಗಳು, ಆದ್ಯತೆ ಮೇರೆಗೆ ರಾಜ್ಯಕ್ಕೆ ಹೆಚ್ಚು ಅನುದಾನ ಒದಗಿಸಿ, ರೈಲ್ವೆ ಸಂಪರ್ಕ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ರೈಲ್ವೆ ಇಲಾಖೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಮಾಡಿದರು. ಗ್ರಾಮ ಸಡಕ್ ಯೋಜನೆಯು ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಹಿಂದುಳಿದಿದೆ. ಇದನ್ನು ಸರಿದೂಗಿಸಬೇಕಾಗಿದೆ. 15ನೇ ಹಣಕಾಸು ಆಯೋಗದಲ್ಲಿ ನಮಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು 16ನೇ ಹಣಕಾಸು ಆಯೋಗದ ಮುಂದೆ ಪ್ರಬಲವಾಗಿ ವಾದ ಮಂಡಿಸಬೇಕಾಗಿದೆ.

1971ರ ಸೆನ್ಸಸ್ ಪರಿಗಣಿಸಿದ್ದರೆ ನಮ್ಮ ರಾಜ್ಯಕ್ಕೆ ಅನ್ಯಾಯವಾಗಲು ಸಾಧ್ಯವಾಗುತ್ತಿರಲಿಲ್ಲ. 15ನೇ ಹಣಕಾಸು ಆಯೋಗದಲ್ಲಿ ಶಿಫಾರಸು ಮಾಡಿರುವ ಮತ್ತು ಬಜೆಟ್‌ನಲ್ಲಿ ಕೇಂದ್ರ ಸರ್ಕಾರವೇ ಘೋಷಿಸಿರುವ ಮೊತ್ತವನ್ನು ರಾಜ್ಯಕ್ಕೆ ನೀಡಬೇಕು. ಈ ನಿಟ್ಟಿನಲ್ಲಿ ಎಲ್ಲಾ ಸಂಸದರು ಧ್ವನಿ ಎತ್ತಬೇಕು ಎಂದು ಮುಖ್ಯಮಂತ್ರಿಗಳು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಮನವಿ ಮಾಡಿದರು.

ಸ್ವಲ್ಪ ದಿನದ ಹಿಂದೆ ಟೀಕಾ ಪ್ರಹಾರ; ಈಗ ಹಸ್ತಲಾಘವ!





ನವದೆಹಲಿಯ ಖಾಸಗಿ ಹೋಟೆಲಿನಲ್ಲಿ ನಡೆದ ರಾಜ್ಯ ಸಂಸದರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಾ. ಸಿ.ಎನ್.ಮಂಜುನಾಥ್, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಹಸ್ತಲಾಘವ ಮಾಡಿ ಕುಶಲೋಪರಿ ವಿಚಾರಿಸಿದರು

ನವದೆಹಲಿ, ಜೂ.27–ಲೋಕಸಭಾ ಚುನಾವಣೆ ವೇಳೆ ಪರಸ್ಪರ ಟೀಕಾಪ್ರಹಾರ ಮಾಡಿಕೊಂಡ ಹಿರಿಯ ರಾಜಕಾರಣಿಗಳು ಇಂದು ನವದೆಹಲಿಯಲ್ಲಿ ನಡೆದ ರಾಜ್ಯ ಸಂಸದರ ಸಭೆಯಲ್ಲಿ ಪರಸ್ಪರ ಹಸ್ತಲಾಘವದ ಮೂಲಕ ಕುಶಲೋಪರಿ ವಿಚಾರಿಸಿದರು.

ಸಭೆಗೆ ಆಗಮಿಸಿದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಹಸನ್ಮುಖಿಗಳಾಗಿ ಹಸ್ತಲಾಘವ ಮಾಡಿದರು. ಸಿದ್ದರಾಮಯ್ಯನವರು ಡಾ. ಸಿ.ಎನ್.ಮಂಜುನಾಥ್, ವಿ.ಸೋಮಣ್ಣ, ವಿಶ್ವೇಶ್ವರ ಹೆಗ್ಡೆ ಕಾಗೇರಿ ಸೇರಿದಂತೆ ಎಲ್ಲಾ ಸಂಸದರ ಕುಶಲೋಪರಿ ವಿಚಾರಿಸಿದರು. ಮತ್ತೊಂದೆಡೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರಸಚಿವ ಹೆಚ್.ಡಿ. ಕುಮಾರಸ್ವಾಮಿ ಮತ್ತು ತಮ್ಮ ಸಹೋದರ ಡಿ.ಕೆ.ಸುರೇಶ್ ಅವರನ್ನು ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಸೋಲಿಸಿದ ಡಾ. ಸಿ.ಎನ್.ಮಂಜುನಾಥ್ ಅವರೊಂದಿಗೆ ಹಸ್ತಲಾಘವ ಮಾಡಿಕೊಂಡರು.

ರಾಜ್ಯದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಅವರು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಸಂಸದರಿಗೂ ಹೂಗುಚ್ಛ ನೀಡಿ ಸ್ವಾಗತಿಸಿದರು. ಈ ವೇಳೆ ರಾಜ್ಯ ಅಪರ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀ. ನವೀನ ಎಚ್ ಆರ್ ರವರು ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಶ್ರೀ ಮರಿಗೌಡ ಬಿನ್ ಲೇಟ್ ಬೋರೇಗೌಡ ರವರಿಂದ ಖರೀದಿಸಲು ಇಚ್ಛೆಯುಳ್ಳವರಾಗಿದ್ದು, ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾವುದೇ ವ್ಯಕ್ತಿ/ಸಂಘ ಸಂಸ್ಥೆಗಳಿಗೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಸ್ವಾಧೀನ, ಮಾಲೀಕತ್ವ, ಋಣಭಾರ, ಅಡಮಾನ ಕ್ಲೇಮ್, ತಕರಾರು, ವಗೈರೆಗಳು ಇದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿ/ಸಂಘ ಸಂಸ್ಥೆಗಳ ಪ್ರತಿನಿಧಿಗಳು ಈ ಪ್ರಕಟಣೆ ಪ್ರಕಟವಾದ ದಿನದಿಂದ 7 ದಿನಗಳ ಒಳಗೆ ಈ ಕೆಳಗೆ ನಮೂದಿಸಿರುವ ಕಚೇರಿಯ ವಿಳಾಸಕ್ಕೆ ದಾಖಲೆಗಳ ಸಮೇತ ತಮ್ಮ ಹಕ್ಕು, ಹಿತಾಸಕ್ತಿ, ಸ್ವಾಧೀನ, ಮಾಲೀಕತ್ವ, ಋಣಭಾರ, ಅಡಮಾನ ಕ್ಲೇಮ್, ತಕರಾರು ಸಾಬೀತುಪಡಿಸಬಹುದಾಗಿರುತ್ತದೆ. ನಿಗದಿತ ಅವಧಿಯೊಳಗೆ ದಾಖಲೆಯ ಸಮೇತ ತಕರಾರು ವಗೈರೆಗಳು ಬರದೇ ಇದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಖರೀದಿಸುವ ನಿಟ್ಟಿನಲ್ಲಿ ಕ್ರಮ ವಹಿಸಲು ಸಿದ್ಧರಿದ್ದು ಮುಂದೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಬರಬಹುದಾದಂತಹ ತಂಟೆ ತಕರಾರುಗಳಿಗೆ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲವೆಂದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸದ್ಭಾವಿತ ಖರೀದಿದಾರರೆಂದು ಪರಿಗಣಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ದೇವರಾಜ ಮೊಹಲ್ಲಾ, ವಿಜಯನಗರ 4ನೇ ಹಂತ, 2ನೇ ಘಟ್ಟ, ನಿವೇಶನ ಸಂಖ್ಯೆ 4706 ಕ್ಕೆ ಚಕ್ಕುಬಂದಿ:

ಪೂರ್ವಕ್ಕೆ : ನಿವೇಶನ ಸಂಖ್ಯೆ 4721, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ: ನಿವೇಶನ ಸಂಖ್ಯೆ 4705, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 4707, ಈ ಮಧ್ಯೆ ಇರುವ ಪೂರ್ವಪಶ್ಚಿಮ 12:00 ಮೀಟರ್, ದಕ್ಷಿಣೋತ್ತರ: 9:00 ಮೀಟರ್ ಒಟ್ಟು 108:00 ಚದರ ಮೀಟರ್ ವಿಸ್ತೀರ್ಣ ಉಳ್ಳ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಂಜೂರಾದ ಖಾಲಿ ನಿವೇಶನ

ಸಹಿ/– **ಎಸ್.ಎಸ್.ಹರ್ಷಕಿರಣ್,** ವಕೀಲರು, "ಪಾಂಚಜನ್ಯ", #7904, ವಿಜಯನಗರ 4ನೇ ಹಂತ, 2ನೇ ಘಟ್ಟ (ಮರಿಮಲ್ಲಪ್ಪ ಶಾಲೆ ಹತ್ತಿರ) ಮೈಸೂರು–570017 ಮೊ: 7337884885

ದಿನಾಂಕ: 27–06–2024

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀ. ಅನಂತ ಬಿನ್ ವರದೇಗೌಡ ರವರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಶ್ರೀ. ಮರಿಗೌಡ ಬಿನ್ ಲೇಟ್ ಬೋರೇಗೌಡ. ರವರಿಂದ ಖರೀದಿಸಲು ಇಚ್ಛೆಯುಳ್ಳವರಾಗಿದ್ದು, ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾವುದೇ ವ್ಯಕ್ತಿ/ಸಂಘ ಸಂಸ್ಥೆಗಳಿಗೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಸ್ವಾಧೀನ, ಮಾಲೀಕತ್ವ, ಋಣಭಾರ, ಅಡಮಾನ ಕ್ಲೇಮ್, ತಕರಾರು, ವಗೈರೆಗಳು ಇದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿ/ಸಂಘ ಸಂಸ್ಥೆಗಳ ಪ್ರತಿನಿಧಿಗಳು ಈ ಪ್ರಕಟಣೆ ಪ್ರಕಟವಾದ ದಿನದಿಂದ 7 ದಿನಗಳ ಒಳಗೆ ಈ ಕೆಳಗೆ ನಮೂದಿಸಿರುವ ಕಚೇರಿಯ ವಿಳಾಸಕ್ಕೆ ದಾಖಲೆಗಳ ಸಮೇತ ತಮ್ಮ ಹಕ್ಕು, ಹಿತಾಸಕ್ತಿ, ಸ್ವಾಧೀನ, ಮಾಲೀಕತ್ವ, ಋಣಭಾರ, ಅಡಮಾನ ಕ್ಲೇಮ್, ತಕರಾರು ಸಾಬೀತುಪಡಿಸಬಹುದಾಗಿರುತ್ತದೆ. ನಿಗದಿತ ಅವಧಿಯೊಳಗೆ ದಾಖಲೆಯ ಸಮೇತ ತಕರಾರು ವಗೈರೆಗಳು ಬರದೇ ಇದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಖರೀದಿಸುವ ನಿಟ್ಟಿನಲ್ಲಿ ಕ್ರಮ ವಹಿಸಲು ಸಿದ್ಧರಿದ್ದು ಮುಂದೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಬರಬಹುದಾದಂತಹ ತಂಟೆ ತಕರಾರುಗಳಿಗೆ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲವೆಂದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸದ್ಭಾವಿತ ಖರೀದಿದಾರರೆಂದು ಪರಿಗಣಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ದೇವರಾಜ ಮೊಹಲ್ಲಾ, ವಿಜಯನಗರ 4ನೇ ಹಂತ, 2ನೇ ಘಟ್ಟ, ನಿವೇಶನ ಸಂಖ್ಯೆ 4705ಕ್ಕೆ ಚಕ್ಕು ಬಂದಿ:, ಪೂರ್ವಕ್ಕೆ : ನಿವೇಶನ ಸಂಖ್ಯೆ 4722, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ: ನಿವೇಶನ ಸಂಖ್ಯೆ 4704, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 4706 ಈ ಮಧ್ಯೆ ಇರುವ ಪೂರ್ವಪಶ್ಚಿಮ 12:00 ಮೀಟರ್, ದಕ್ಷಿಣೋತ್ತರ: 9:00 ಮೀಟರ್ ಒಟ್ಟು 108:00 ಚದರ ಮೀಟರ್ ವಿಸ್ತೀರ್ಣ ಉಳ್ಳ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಂಜೂರಾದ ಖಾಲಿ ನಿವೇಶನ

ಸಹಿ/– **ಎಸ್.ಎಸ್.ಹರ್ಷಕಿರಣ್,** ವಕೀಲರು, "ಪಾಂಚಜನ್ಯ", #7904, ವಿಜಯನಗರ 4ನೇ ಹಂತ, 2ನೇ ಘಟ್ಟ (ಮರಿಮಲ್ಲಪ್ಪ ಶಾಲೆ ಹತ್ತಿರ) ಮೈಸೂರು–570017 ಮೊ: 7337884885

ದಿನಾಂಕ: 27–06–2024

ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಾರ್ಯಾಲಯ

ಮೈಸೂರು ಜಿಲ್ಲೆ – 570008

ಕಛೇರಿ : 0821-2330109, ಇಮೇಲ್: itstaff_ulb_srirampur@yahoo.com

ಸಂ:ಶ್ರೀ.ಪ.ಪಂ.ಕಾ/ಜೆ.ಇ/ಟೆಂ.ಪ್ರ02/2024–25 ದಿನಾಂಕ: 27.06.2024

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಪಟ್ಟಣ ಪಂಚಾಯಿತಿ ಶ್ರೀರಾಂಪುರ ಮುಖ್ಯಾಧಿಕಾರಿರವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಕೆಡಬ್ಲ್ಯೂ–1 ಹಾಗೂ ಕೆಡಬ್ಲ್ಯೂ–2 ನಿಯಮದನ್ವಯ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಎಸ್.ಎಫ್.ಸಿ ಹಾಗೂ 15ನೇ ಹಣಕಾಸು ಯೋಜನೆಯಡಿ ಅನುದಾನದ ಕೆಳಗಿನ ಕಾಮಗಾರಿಗಳಿಗೆ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಇ–ವೆಬ್‌ಸೈಟ್ **www.kppp.karnataka.gov.in** ಮೂಲಕ ಇಎಂಡಿ, ಗುತ್ತಿಗೆ ಮತ್ತು ಇತರೆ ಶರತ್ತುಗಳನ್ನು ಗಮನಿಸಿಕೊಳ್ಳುವುದು. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ www.srirampuratown.mrc.gov.in ನಿಂದ ಪಡೆದುಕೊಳ್ಳಬಹುದು. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: **12–07–2024 ಸಂಜೆ 5.00 ಗಂಟೆಗೆ.** ತಾಂತ್ರಿಕ ಟೆಂಡರ್ ತೆರೆಯುವ **ದಿನಾಂಕ: 15–07–2024 ಪೂರ್ವಾಹ್ನ 11.30 ಗಂಟೆಗೆ** .ಹಣಕಾಸು ಟೆಂಡರ್ ತೆರೆಯುವ ದಿನಾಂಕ : **16–07–2024 ಪೂರ್ವಾಹ್ನ 11.30 ಗಂಟೆಗೆ**

ಕ್ರ ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ	ಮೀಸಲಾತಿ
1	DMA/2024-25/ ow /work-INDENT19492	10.00	As Per E- portal	Others
2	DMA/2024-25/ RD /work-INDENT19493	14.00		S.C
3	DMA/2024-25/ RD /work-INDENT19494	16.00		S.T
4	DMA/2024-25/ OW /work-INDENT19495	3.20		Others
5	DMA/2024-25/ RD /work-INDENT19497	6.40		Others
6	DMA/2024-25/ RD /work-INDENT19498	2.80		S.C
7	DMA/2024-25/ RD /work-INDENT19499	3.00		Others

ಸೂಚನೆ: ಹೆಚ್ಚಿನ ವಿವರ ಹಾಗೂ ಮಾಹಿತಿಗಳನ್ನು www.kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– (ಹೆಚ್. ಎಂ. ಸುರೇಶ) ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ, ಶ್ರೀರಾಂಪುರ

ಸಹಿ/– (ಕೆ. ಎಂ. ಮಹೇಶ್ ಕುಮಾರ್., ಕೆ.ಎ.ಎಸ್.) ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯಿತಿ, ಶ್ರೀರಾಂಪುರ

DIPR/MYS/KAVITA/169/24-25

ಕರ್ನಾಟಕ ಸರ್ಕಾರ

ಕಡಕೊಳ ಪಟ್ಟಣ ಪಂಚಾಯಿತಿ ಕಾರ್ಯಾಲಯ, ಮೈಸೂರು ಜಿಲ್ಲೆ

Email id: itstaff_ulb_kadakola@yahoo.com Tele Phone no:0821-2970319

ಕಡಕೊಳ ಪಟ್ಟಣ ಪಂಚಾಯಿತಿ ಮುನಿಸಿ(4)/ಎಸ್.ಎಫ್.ಸಿ/ಮು.ನಿ/ಕ್ರಿಯೋ/ಸಿ.ಆರ್–01/2023–24

ದಿನಾಂಕ.21.06.2024

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಕಡಕೊಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕರಿಗೆ ತಿಳಿಯಪಡಿಸುವುದೇನಂದರೆ 2024–25 ನೇ ಸಾಲಿಗೆ ಎಸ್.ಎಫ್.ಸಿ. ಮತ್ತು ಪಟ್ಟಣ ಪಂಚಾಯತಿ ನಿಧಿ ಕ್ರಿಯಾ ಯೋಜನೆ ಎಸ್.ಸಿ.ಎಸ್.ಪಿ. & ಟಿ.ಎಸ್.ಪಿ., (24.10%), ಇತರೆ ಹಿಂದುಳಿದ ವರ್ಗದ ಕಲ್ಯಾಣ ಕಾರ್ಯಕ್ರಮ (7.25%) ಹಾಗೂ ವಿಕಲಚೇತನರ ಕಲ್ಯಾಣ ಕಾರ್ಯಕ್ರಮ (5%) ದ ವೈಯಕ್ತಿಕ ಕಾರ್ಯಕ್ರಮದಡಿ ಫಲಾನುಭವಿಗಳು ಅರ್ಜಿಯನ್ನು ಸಲ್ಲಿಸಲು ಪ್ರಕಟಣೆ ಹೊರಡಿಸಲಾಗಿದ್ದು ಆಸಕ್ತರು ಹಾಗೂ ಅರ್ಹರು ಕೆಳಕಂಡ ಕಾರ್ಯಕ್ರಮದ ಪ್ರಯೋಜನ ಪಡೆಯಲು ದಿನಾಂಕ.15.07.2024 ರ ಸಂಜೆ 5–30 ರ ಒಳಗೆ ಅರ್ಜಿ ಹಾಗೂ ಸಬಂಧಪಟ್ಟ ದಾಖಲೆಗಳೊಂದಿಗೆ ಕಚೇರಿಗೆ ಅರ್ಜಿ ಸಲ್ಲಿಸಲು ಕೋರಿದೆ.

ಕಾರ್ಯಕ್ರಮಗಳ ವಿವರ

ಕ್ರ ಸಂ	ಕಾರ್ಯಕ್ರಮಗಳ ವಿವರ	ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು ಹಾಗೂ ಷರತ್ತುಗಳು
1	ಡಾ. ಅಂಬೇಡ್ಕರ್ ನಗರ ವಸತಿ ಯೋಜನೆ ಅಥವಾ ಸರ್ಕಾರದ ಇತರೆ ವಸತಿ ಯೋಜನೆಯಡಿಯಲ್ಲಿನ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ವಂತಿಕೆಯನ್ನು ಪಾವತಿಸುವ ಕಾರ್ಯಕ್ರಮ (ಶೇ.24.10 ಯೋಜನೆ)	ಇ–ಸ್ವತ್ತು ಪ್ರತಿ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ ರೇಷನ್ ಕಾರ್ಡ್, ಆಧಾರ್ ಕಾರ್ಡ್, ಕಂದಾಯ ಪಾವತಿ ರಶೀದಿ, ಪಾಸ್‌ಪೋರ್ಟ್ ಸೈಜಿನ ಫೋಟೋ, ಬ್ಯಾಂಕ್ ಪಾಸ್ ಪುಸ್ತಕ ಬುಕ್ ಇವುಗಳ ಸ್ವಯಂ ದೃಢೀಕೃತ ಪ್ರತಿಗಳು ಸಲ್ಲಿಸುವುದು.
2	ವಾಜಪೇಯಿ ನಗರ ವಸತಿ ಯೋಜನೆ ಅಥವಾ ಸರ್ಕಾರದ ಇತರೆ ವಸತಿ ಯೋಜನೆಯಡಿಯಲ್ಲಿ ಇತರೆ ಹಿಂದುಳಿದ ವರ್ಗದ ಫಲಾನುಭವಿಗಳಿಗೆ ವಂತಿಕೆಯನ್ನು ಪಾವತಿಸಲು (ಶೇ.7.25% ಯೋಜನೆ)	ವಿಶೇಷ ಚೇತನರ ಕಾರ್ಯಕ್ರಮದಡಿ ಅರ್ಜಿ ಸಲ್ಲಿಸುವ ಫಲಾನುಭವಿಗಳು ಮೇಲೆ ತಿಳಿಸಿರುವ ದಾಖಲೆಗಳೊಂದಿಗೆ ಯು.ಐ.ಡಿ.ಕಾರ್ಡ್ ಸಹ ಲಗತ್ತಿಸುವುದು.
3	ವಿಶೇಷ ಚೇತನರಿಗೆ ಕೃತಕ ಅಂಗ ಜೋಡಣೆಗೆ ಸಹಾಯಧನ ನೀಡುವುದು (ಶೇ.5 ಯೋಜನೆ)	ಷರತ್ತುಗಳು:– ಈ ಕಾರ್ಯಕ್ರಮದ ಕುರಿತು ಈ ಹಿಂದೆ ಈ ಕಚೇರಿಯಿಂದ ಅಥವಾ ಯಾವುದೇ ಇಲಾಖೆಯಿಂದ ಸವಲತ್ತು ಪಡೆದಿರಬಾರದು ಹಾಗೂ ಅರ್ಜಿ ಸಲ್ಲಿಸಿರಬಾರದು.

ವಿಶೇಷ ಸೂಚನೆ:–ಕೊನೆ ದಿನಾಂಕದೊಳಗೆ ಸಲ್ಲಿಸದಿರುವ ಅರ್ಜಿಗಳನ್ನು ಹಾಗೂ ಅಸಮರ್ಪಕ ದಾಖಲೆಗಳೊಂದಿಗೆ ಸಲ್ಲಿಸಿರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಕೌನ್ಸಿಲ್ ಸಭೆಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಮಾತ್ರ ಸೌಲಭ್ಯ ನೀಡಲಾಗುವುದು.

DIPR/DDMYS- 152/KSMCA-113/2024-25

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯತಿ, ಕಡಕೊಳ

ನಕ್ಕರೆ ಅದೇ ಸ್ವರ್ಗ

ತಾಯಿ : ಯಾಕೋ ಸ್ಕೂಲಿನಿಂದ ಇಷ್ಟು ಬೇಗ ಬಂದೆ?
ಗುಂಡ : ಒಂದು ಸೊಳ್ಳೆನಾ ಸಾಯಿಸಿದೆ,
ಅದಕ್ಕೆ ಟೀಚರ್ ಮನೆಗೆ ಕಳುಹಿಸಿದರು.
ತಾಯಿ : ಅದರಲ್ಲೇನಿದೆ? ಯಾಕೆ ಮನೆಗೆ ಕಳಿಸಿದ್ರು?
ಗುಂಡ : ಆ ಸೊಳ್ಳೆ ಟೀಚರ್ ಕೆನ್ನೆ ಮೇಲೆ ಕುಳಿತಿತ್ತು...!

ಮೈಸೂರು ಮಿತ್ರ

ಶುಕ್ರವಾರ, 28 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸಂಬಂಧಗಳು ಮುರಿಯಲು ಸಂಬಂಧಿಸಿದವರ ವರ್ತನೆ, ಅಹಂಕಾರ, ನಿರ್ಲಕ್ಷ್ಯತೆಯೇ ಕಾರಣ –ನುಡಿಮುತ್ತು

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು { ಪೀತಾಂಬರ ಉಟ್ಟರೂ / ಕೊತ್ತಂಬರಿ ಮಾರೋದು ತಪ್ಪಲಿಲ್ಲ

ನಿಮ್ಮ ಪತ್ರಗಳು

ನಂದಿನಿ ಹಾಲಿನ ಬೆಲೆ ಏರಿಕೆ ಸಲ್ಲ

ಮಾನ್ಯರೇ,



ರಾಜ್ಯ ಸರ್ಕಾರ ಈ ಬಾರಿ ಹಾಲಿನ ಬೆಲೆ ಏರಿಸಲು ಹೊಸ ನಮೂನೆಯ ಪ್ರಯೋಗಕ್ಕೆ ಕೈ ಹಾಕಿದೆ. ಕಳೆದ ಆಗಸ್ಟ್‌ನಲ್ಲಿ ಲೀಟರ್‌ಗೆ ರೂ. 3 ಏರಿಕೆ ಮಾಡಿದ ನಂತರ ಇದೀಗ ಕರ್ನಾಟಕ ಹಾಲು ಮಂಡಳಿ ಪ್ರತಿ ಹಾಲಿನ ಪ್ಯಾಕೆಟ್ಟಿಗೆ, ಅಂದರೆ ಅರ್ಧ ಲೀಟರ್ ಆಗಿರಬಹುದು ಅಥವಾ ಒಂದು ಲೀಟರ್ ಆಗಿರಬಹುದು. ಅದಕ್ಕೆ ರೂ. 2 ರಷ್ಟು ಏರಿಸಿ, ಹಾಲಿನ ಸಂಗ್ರಹಣೆ ಹೆಚ್ಚಿಸಿರುವುದರಿಂದ ಪ್ರತಿ ಪ್ಯಾಕೆಟ್ಟಿಗೆ 50 ಮಿಲಿ ಹೆಚ್ಚುವರಿ ಎಂದು ಹೊಸ ತರಹದ ಸಬೂಬು ಹೇಳಿ, ಇದು ದರ ಹೆಚ್ಚಳವಲ್ಲ ಎಂದು ಸಮಜಾಯಿಷಿ ನೀಡಿದೆ. ಮುಖ್ಯಮಂತ್ರಿಯವರೂ ಒಂದು ಹೆಜ್ಜೆ ಮುಂದೆ ಹೋಗಿ 50 ಮಿಲಿ ಹೆಚ್ಚುವರಿ ಹಾಲಿಗೆ ರೂ.2.10 ಆದರೂ ಹತ್ತು ಪೈಸೆ ಚಿಲ್ಲರೆ ಪರಿಗಣಿಸದೆ ಕೇವಲ ರೂ.2 ಅನ್ನು ಮಾತ್ರ ಹೆಚ್ಚಿಸಿದ್ದೇವೆ ಎಂಬ ಚಿಲ್ಲರೆ ಮಾತನ್ನೂ ಹೇಳಿದ್ದಾರೆ. ಹಾಲಿನ ಸುಗ್ಗಿಯ ಕಾಲದಲ್ಲಿ ಸಂಗ್ರಹಣೆ ಹೆಚ್ಚಾದಾಗ ಹಾಲಿನ ಶೇಖರಣೆ ದರವನ್ನು ಕಡಿತಗೊಳಿಸುತ್ತಿದ್ದ ಕರ್ನಾಟಕ ಹಾಲು ಮಂಡಳಿ ಇದೀಗ ಹೆಚ್ಚುವರಿ ಹಾಲನ್ನು ಗ್ರಾಹಕರಿಗೆ ನೀಡುವ ಸೋಗಿನೊಂದಿಗೆ ಬೆಲೆ ಏರಿಕೆಗೆ ಇಂಬು ಕೊಟ್ಟಿದೆ. ಹಾಲಿನ ಸಂಗ್ರಹಣೆ ಹೆಚ್ಚಾಗಿ, ಹಾಲನ್ನು ಪರಿವರ್ತನೆ ಮಾಡಲು ಆಗದೇ ಇದ್ದಾಗ ಅಥವಾ ಪರಿವರ್ತಿಸಿದ ಹಾಲಿಗೆ ಮಾರುಕಟ್ಟೆ ದೊರೆಯದೇ ಇದ್ದಾಗ, ರಾಜ್ಯದ ಉದ್ದಗಲಕ್ಕೂ ಹಾಲಿನ ಪುಡಿ ಪರಿವರ್ತನೆ ಘಟಕಗಳು ಏಕಿರಬೇಕು ಎಂಬ ಪ್ರಶ್ನೆ ಜನರನ್ನು ಕಾಡದೇ ಇರದು. ನಿಜಕ್ಕೂ ಸರ್ಕಾರ ಅಥವಾ ಕರ್ನಾಟಕ ಹಾಲು ಮಂಡಳಿ ಗ್ರಾಹಕರಿಗೆ ಒಳ್ಳೆಯದು ಮಾಡಲೇಬೇಕೆಂಬ ಇರಾದೆ ಇದ್ದಲ್ಲಿ, ಗ್ರಾಹಕರ, ಉತ್ಪಾದಕರ ಹಿತವನ್ನು ಕಾಪಾಡಲು ಪ್ರತಿ ಪ್ಯಾಕೆಟ್ಟಿಗೆ ನೂರು ಮಿಲಿ ಹಾಲನ್ನು ಯಥಾಸ್ಥಿತಿಯ ದರದಲ್ಲಿಯೇ ನೀಡಬಹುದಾಗಿತ್ತು. ಅವೆಲ್ಲವೂ ಹಾಗಿರಲಿ, ಯಾರಾದರೂ ಬೆಳಗ್ಗೆ ಮೂರು ಅರ್ಧ ಲೀಟರ್ ಪ್ಯಾಕೆಟ್ ಹಾಲನ್ನು ಪಡೆಯುತ್ತಿದ್ದಲ್ಲಿ, ಅವರಿಗೆ ಆರು ರೂಪಾಯಿ ದಿನಕ್ಕೆ ಹೆಚ್ಚಾಗುವುದಲ್ಲದೇ, ಒಂದು ಲೀಟರ್ ಪ್ಯಾಕೆಟ್ ತಂದು ಇಟ್ಟುಕೊಳ್ಳುವುದು ಸಮಂಜಸವಲ್ಲ. ಇಂತಹ ಸೂಕ್ಷ್ಮ ಸ್ಥಿತಿಗಳನ್ನು ಅರಿಯದೆ, ಬಿಟ್ಟಿ ಭಾಗ್ಯಗಳ ಸನ್ನಿಗೆ ಒಳಪಟ್ಟ ಸರ್ಕಾರಕ್ಕೆ ಬುದ್ಧಿ ಕಲಿಸುವವರಾರು ಎಂಬುದೇ ಯಕ್ಷಪ್ರಶ್ನೆಯಲ್ಲವೇ?!

–ವಿಜಯ್ ಹೆಮ್ಮಿಗೆ, ಮೈಸೂರು

ಮೈಸೂರು ಮಹಾನಗರಪಾಲಿಕೆ ಆಯುಕ್ತರಿಗೆ ಮನವಿ

ಮಾನ್ಯರೇ,

ಮೈಸೂರು ಮಹಾನಗರಪಾಲಿಕೆಯು ತನ್ನ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿರುವ ನಾಗರಿಕರಿಗೆ ಹತ್ತಾರು ಸವಲತ್ತುಗಳನ್ನೂ ಕಲ್ಪಿಸಿಕೊಟ್ಟಿದ್ದು, ಜನಮನ ಗೆದ್ದಿದೆ. ಈ ಜನಪರ ಕೆಲಸಗಳಲ್ಲಿ ಒಂದಾದ ಉದ್ಯಾನವನಗಳಲ್ಲಿ ಅಳವಡಿಸಿರುವ ವ್ಯಾಯಾಮ ಸಲಕರಣೆಗಳು (ಓಪನ್ ಜಿಮ್) ಹಾಗೂ ಮಕ್ಕಳ ಆಟೋಪಕರಣಗಳು ಒಂದು. ಇದು ಬಹಳ ಉತ್ತಮವಾದ ಸೌಲಭ್ಯವಾಗಿದ್ದು, ಮಕ್ಕಳು ಮತ್ತು ನಾಗರಿಕರು ಇದನ್ನು ತುಂಬಾ ಸದ್ಬಳಕೆ ಮಾಡಿಕೊಳ್ಳುತ್ತಾರೆ. ಅದರಲ್ಲೂ ಓಪನ್ ಜಿಮ್‌ನಲ್ಲಿನ ವ್ಯಾಯಾಮ ಸಲಕರಣೆಗಳಂತೂ ಬೆಳಗ್ಗೆ ಮತ್ತು ಸಂಜೆ ಹೆಚ್ಚು ಜನರು ಬಳಸಿ ತಮ್ಮ ಆರೋಗ್ಯ ಸುಧಾರಣೆಗೆ ಹೆಚ್ಚು ಒತ್ತು ನೀಡುತ್ತಿದ್ದು, ಆರೋಗ್ಯ ನಗರವಾಗಿಸುವಲ್ಲಿ ಇದು ಸಹ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ತಮ್ಮ ನಗರ ಪಾಲಿಕೆಯಿಂದ ಒಮ್ಮೆ ಉದ್ಯಾನಗಳಲ್ಲಿ ಇದನ್ನು ಅಳವಡಿಸಿ ಉದ್ಘಾಟನೆ ಮಾಡಿ ಕೈ ತೊಳೆದುಕೊಂಡರೆ ಆಯಿತು. ಇನ್ನು ಅದನ್ನು ತಿರುಗಿಯೂ ನೋಡುವವರಿಲ್ಲ. ಉದಾಹರಣೆಗೆ ಹೆಬ್ಬಾಳ್ ಒಂದನೇ ಹಂತ ಬಸವನಗುಡಿ ಪಾರ್ಕ್‌ನಲ್ಲಿ ಓಪನ್ ಜಿಮ್ ಸಲಕರಣೆಗಳು ಮುರಿದು ಮೂಲೆ ಸೇರಿ ವರ್ಷವೇ ಕಳೆದರೂ ಅದನ್ನು ದುರಸ್ತಿ ಮಾಡಿಸಿಲ್ಲ. ಅದು ಮಳೆ –ಬಿಸಿಲಿನಲ್ಲಿ ಒಣಗಿ ಮಣ್ಣಾಗಿ ಹೋಗುತ್ತಿವೆ. ದಿನನಿತ್ಯ ನೂರಾರು ಹಿರಿಯ ನಾಗರಿಕರು, ಯುವ ಜನರು, ಮಹಿಳೆಯರು ಇದರ ಸದುಪಯೋಗ ಪಡೆದುಕೊಂಡು ಬಳಸುವುದರಿಂದ ಇವು ಕಾಲ ಕಾಲಕ್ಕೆ ನಿರ್ವಹಣೆಗೆ ಬರುವುದು ಸಾಮಾನ್ಯ, ಬೇರಿಂಗ್ ಚೇಂಜ್, ಆಯಿಲ್ ಸರ್ವಿಸ್, painting, hand griping repair ಮಾಡಿಸಲು ಒಂದು ವ್ಯವಸ್ಥೆ ಮಾಡಿ ಹಾಗೆ ಮಕ್ಕಳ ಆಟದ ಸಾಮಗ್ರಿಗಳು ಸಹ ಮುರಿದು ಮೂಲೆಗುಂಪು ಆಗಿವೆ. ಇದರಿಂದ ಮಕ್ಕಳಿಗೂ ನಿರಾಶೆಯಾಗುತ್ತಿದೆ. ತಮ್ಮ ಪಾಲಿಕೆಯ ವಲಯ ಕಚೇರಿ ಹಿಂಭಾಗದಲ್ಲೇ ಈ ಪಾರ್ಕ್ ಇದ್ದರೂ ಸಹ ಇದರ ನಿರ್ವಹಣೆ ಆಗದೆ ಇರುವುದು ದುರಂತವೇ ಸರಿ. ಬೃಂದಾವನ ಬಡಾವಣೆಯ ಪಾರ್ಕ್‌ನಲ್ಲೂ ಇದೇ ಪರಿಸ್ಥಿತಿ ಇದ್ದು ತಾವು ಈ ಸಮಸ್ಯೆಗೊಂದು ಪರಿಹಾರ ಒದಗಿಸಿ ನಾಗರಿಕರ ಆರೋಗ್ಯ ಸುಧಾರಣೆಗೆ ಒತ್ತು ನೀಡಬೇಕಾಗಿ ಮನವಿ.

–ನಾಗೇಂದ್ರ ಕಿಲಗೆರೆ, ಮೈಸೂರು

ಶಿವರಾಂಪೇಟೆ ರಸ್ತೆಯಲ್ಲಿ ಅವ್ಯವಸ್ಥೆ



ಮಾನ್ಯರೆ,

ಮೈಸೂರಿನ ಶಿವರಾಂಪೇಟೆ ಜನನಿಬಿಡ ಪ್ರದೇಶ ಹಾಗೂ ದೇವರಾಜ ಅರಸ್ ರಸ್ತೆ, ದೇವರಾಜ ಮಾರುಕಟ್ಟೆ ಸನಿಹದಲ್ಲಿದ್ದು, ವಿವಿಧ ಬಡಾವಣೆ ಜನರು ತಮ್ಮ ವ್ಯಾಪಾರ, ವ್ಯವಹಾರಗಳಿಗೆ ಶಿವರಾಂಪೇಟೆಗೆ ಬರುವುದುಂಟು. ಶಿವರಾಂಪೇಟೆ ರಸ್ತೆ ಮತ್ತು ಚಿಕ್ಕ ಗಡಿಯಾರದ ಬಳಿ ಯಾವುದೇ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಇಲ್ಲದೆ ವ್ಯಾಪಾರಸ್ಥರು ಪರದಾಡ ಬೇಕಿದೆ. ಈ ರಸ್ತೆಯಲ್ಲಿ ವಾಹನ ದಟ್ಟಣೆಗೆ ಜನರು ನಡೆದಾಡಲೂ ಕಷ್ಟವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಶಿವರಾಂಪೇಟೆ ಮನ್ನಾರ್ಸ್ ಮಾರುಕಟ್ಟೆ ಹಾಗೂ ರಾಜಕಮಲ್ ಚಿತ್ರಮಂದಿರದವರೆಗೆ ಕೈಗಾಡಿಗಳು, ಹಣ್ಣು ಇನ್ನಿತರ ಗಾಡಿಗಳು ರಸ್ತೆ ಬದಿಯಲ್ಲಿ ನಿಂತು ವ್ಯಾಪಾರ ಮಾಡುತ್ತಿರುತ್ತಾರೆ. ಇದರಿಂದ ಜನರು ಓಡಾಡಲು ಆಗುತ್ತಿಲ್ಲ. ಪಾದಚಾರಿಗಳಿಗೆ ಫುಟ್‌ಪಾತ್‌ಗಳಲ್ಲೂ ಸಂಚರಿಸಲು ಆಗುತ್ತಿಲ್ಲ. ಟ್ರಾಫಿಕ್ ಪೊಲೀಸರು ಇದರ ಬಗ್ಗೆ ಗಮನಹರಿಸಿ ಕ್ರಮ ಕೈಗೊಳ್ಳಲು ಮನವಿ.

–ನೊಂದ ನಿವಾಸಿಗಳು, ಶಿವರಾಂಪೇಟೆ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಅವಶ್ಯಕತೆ ಇದ್ದಾಗಲೇ ಮೌಲ್ಯದ ಅರಿವಾಗುವುದು!!



> ನಾವು ಮನೆಯಲ್ಲಿ ಕೆಲವೊಂದು ಉಪಕರಣದ ದುರಸ್ತಿಗೆ ಸಂಬಂಧಿಸಿದಂತೆ ಕೆಲವು ವಸ್ತುಗಳನ್ನು ತಂದಿರುತ್ತೇವೆ. ಆದರೆ ಅವುಗಳು ನಿಯಮಿತವಾದ ಉಪಯೋಗಕ್ಕೆ ಬಾರದಿರುವುದರಿಂದ ಎಲ್ಲೋ ಇಟ್ಟಿರುತ್ತೇವೆ ಹಾಗೂ ಕ್ರಮೇಣ ಮರೆಯುತ್ತೇವೆ. ಮುಂದೆ ಒಂದು ದಿನ ಅದು ಬೇಕೆನಿಸಿದಾಗ ಸಿಗುವುದಿಲ್ಲ. ಆಗ ಪರದಾಡುತ್ತೇವೆ. ಇದು ಮಾನವನ ಸಹಜ ಗುಣ, ಯಾವುದಾದರೂ ವಸ್ತುವನ್ನು ಕಳೆದುಕೊಂಡಾಗಲೇ ನಮಗೆ ಅದರ ಮೌಲ್ಯ ಅರಿವಾಗುವುದು.

ಎಲ್ಲಾ ವಸ್ತುಗಳು ಸುಲಭವಾಗಿ, ಪುಕ್ಕಟ್ಟೆಯಾಗಿ ಸಿಗುವಾಗ ನಮಗೆ ಅದರ ಮೌಲ್ಯ ಅರ್ಥವಾಗುವುದಿಲ್ಲ. ಅದು ಲಭ್ಯವಿಲ್ಲದಿದ್ದಾಗ ಹಾಗೂ ಅದರ ಅವಶ್ಯಕತೆ ನಮಗೆ ಅನಿವಾರ್ಯವಾದಾಗಲೇ ನಮಗೆ ಆ ವಸ್ತುವಿನ ಮೌಲ್ಯ ಅರ್ಥವಾಗುತ್ತದೆ. ನಮ್ಮ ಜೀವನ ನಡೆಯುವುದು ಅವಶ್ಯಕತೆಗಳ ಆಧಾರದ ಮೇಲೆಯೆ. ಹಾಗಾಗಿ ಯಾವ ವಸ್ತು ಯಾವಾಗ ನಮಗೆ ಅಗತ್ಯವಾಗುವುದೋ ಎಂದು ಹೇಳಲಾಗುವುದಿಲ್ಲ. ಈ ಹಿಂದೆ ಮನೆಗಳನ್ನು ಕಟ್ಟಿಸುವಾಗ ಮನೆಗಳಲ್ಲಿ ಅಟ್ಟಗಳನ್ನು ನಿರ್ಮಿಸುತ್ತಿದ್ದರು. ಅಲ್ಲಿ ತಕ್ಷಣಕ್ಕೆ ಅಗತ್ಯವಿಲ್ಲ ಎನಿಸುವ ವಸ್ತುಗಳನ್ನು ಇಡುತ್ತಿದ್ದರು. ಅವು ದೈನಂದಿನ ಜೀವನಕ್ಕೆ ಅಗತ್ಯವಿಲ್ಲದಿದ್ದರೂ, ಆದರೆ ನಾಳೆ ಅದರ ಅಗತ್ಯತೆ ಬರಬಹುದು ಎಂದು ಅವುಗಳನ್ನು ಜೋಪಾನವಾಗಿ ಎತ್ತಿಡುತ್ತಿದ್ದರು. ಹಾಗೆಯೇ ಆಗುತ್ತಿತ್ತು, ಮುಂದೆ ಅವುಗಳ ಅಗತ್ಯತೆ ಕಂಡಾಗ ಅವುಗಳನ್ನು ಅಟ್ಟದಿಂದ ಇಳಿಸಿ ಉಪಯೋಗಿಸುತ್ತಿದ್ದರು. ಮತ್ತೆ ಸ್ವಚ್ಛ ಮಾಡಿ ಎತ್ತಿಡುತ್ತಿದ್ದರು. ಆದರೆ ಇಂದು ಆಧುನಿಕತೆಯ ಹೆಸರಿನಲ್ಲಿ ಮನೆಯಲ್ಲಿ ಈ ರೀತಿ ಹಳೆಯ ವಸ್ತುಗಳನ್ನು ಇಟ್ಟುಕೊಳ್ಳುವ ಅನಿವಾರ್ಯತೆ, ಮನಸ್ಥಿತಿ ಕಂಡುಬರುವುದಿಲ್ಲ. ಹಳೆಯದನ್ನು ಕೊಟ್ಟುಬಿಡಬೇಕು, ಮತ್ತೆ ಬೇಕಾದರೆ ಹೊಸದನ್ನು ತಂದರಾಯಿತು ಎಂಬ ಧೋರಣೆ. ಹಾಗಾಗಿ ಅಟ್ಟ ಬೇಡ ಎಂಬ ಮನೋಭಾವ ಸಹಜ.

ಇತ್ತೀಚೆಗೆ ಕೆಲವು ಸಾಹಿತ್ಯಾಸಕ್ತರನ್ನು ಒಟ್ಟಾಗಿ ಭೇಟಿಯಾಗುವ ಅವಕಾಶ ಒದಗಿಬಂತು. ಅವರಲ್ಲಿ ಕೆಲವರಿಗೆ ಪುಸ್ತಕಗಳನ್ನು ಕೊಂಡು ಕೊಳ್ಳುವ ಅಭ್ಯಾಸ ಮೊದಲಿನಿಂದಲೂ ಇದೆ. ಅವರು ಪ್ರತಿ ತಿಂಗಳೂ ಒಂದಷ್ಟು ಪುಸ್ತಕ ಖರೀದಿಸುತ್ತಾರೆ. ಆದರೆ ಕೊಂಡುಕೊಂಡಿದ್ದನ್ನೆಲ್ಲಾ ಓದಲಾಗುವುದಿಲ್ಲ. ಆದರೆ, ಮುಂದೆ ಸಮಯಾವಕಾಶ ಸಿಕ್ಕಾಗ, ಇಲ್ಲವೇ ಪುರುಷೊತ್ತು ಮಾಡಿಕೊಂಡು ಓದಬಹುದು ಎಂದು ಅವುಗಳನ್ನು ಜೋಪಾನವಾಗಿ ಇಟ್ಟುಕೊಂಡಿರುತ್ತಾರೆ. ಹಾಗಾಗಿ ಪುಸ್ತಕಾಭಿಮಾನ ಕಂಡಾಗಲೆಲ್ಲಾ ಪುಸ್ತಕ ಕೊಳ್ಳಲು ಪ್ರೇರೇಪಿಸುತ್ತದೆ. ಮತ್ತೆ ಮತ್ತೆ ಖರೀದಿಸುತ್ತಾರೆ. ಅವರಲ್ಲಿ ಬಹುತೇಕರಿಗೆ ಈಗ ವಯಸ್ಸಾಗಿದೆ. ಆದರೆ ಅವರ ಮಕ್ಕಳಿಗೆ ಪುಸ್ತಕದ ಬಗ್ಗೆ ವ್ಯಾಮೋಹವೂ ಇಲ್ಲ. ಆಸಕ್ತಿಯೂ ಇಲ್ಲ. ಎಲ್ಲವೂ ಗೂಗಲ್‌ನಲ್ಲಿ ಸಿಗುತ್ತದೆ. ಹಾಗಿರುವಾಗ ಹೀಗೆ ಪುಸ್ತಕ ಏಕೆ ಕೊಂಡುಕೊಳ್ಳಬೇಕು? ಇಷ್ಟೊಂದು ಪುಸ್ತಕಗಳನ್ನು ಇಟ್ಟುಕೊಳ್ಳುವುದರಿಂದ ಮನೆಯೆಲ್ಲಾ ಧೂಳು ತುಂಬುತ್ತದೆ. ಇಲಿ, ಜಿರಳೆ, ಹಲ್ಲಿಗಳೂ ಬರುತ್ತವೆ. ಹಾಗಾಗಿ ಅವುಗಳನ್ನು ತೂಕಕ್ಕೆ ಹಾಕಿಬಿಡಬೇಕು ಎಂಬುದು ಅವರ ಅಭಿಪ್ರಾಯ. ಈ ವಿಷಯವಾಗಿ ಆಗಾಗ್ಗೆ ಮನೆಯಲ್ಲಿ ಸಣ್ಣಪುಟ್ಟ ವಾಗ್ವಾದ, ಕಿರಿಕಿರಿ ಇದ್ದೇ ಇರುತ್ತದೆ.

ಮತ್ತೆ ಕೆಲವರಲ್ಲೂ ಒಂದಷ್ಟು ಪುಸ್ತಕಗಳಿವೆ. ಅವರಿಗೆ ತುಂಬಾ ಓದುವ ಹವ್ಯಾಸವಿದೆ. ದಿನಕ್ಕೆ ಐವತ್ತು ಪುಟವನ್ನಾದರೂ ಓದದಿದ್ದರೆ ಅವರಿಗೆ ನಿದ್ರೆ ಬರುವುದಿಲ್ಲ. ಆದರೆ ಅವರಿಗೆ ಈಗಿನ ಪುಸ್ತಕಗಳ ಬಗ್ಗೆ ವ್ಯಾಮೋಹ ವಿಲ್ಲ. ಹಳೆಯ ಪುಸ್ತಕಗಳೇ ಬೇಕು. ಹಾಗಾಗಿ ಅವರು ಸೆಕೆಂಡ್‌ಹ್ಯಾಂಡ್ ಪುಸ್ತಕ ಮಾರಾಟಗಾರರ ಹತ್ತಿರ ಹೋಗಿ ಹಳೆಯ ಪುಸ್ತಕ ಖರೀದಿಸುತ್ತಾರೆ. ಆದರೆ, ಅವರಿಗೆ ಇಷ್ಟವಾಗುವ ಪುಸ್ತಕ ಯಾವಾಗಲೂ ಸಿಗುವುದಿಲ್ಲ. ಅವರ ಈ ಅಭ್ಯಾಸಕ್ಕೆ ಮನೆಯವರ ಆಕ್ಷೇಪಣೆಯೂ ಇಲ್ಲ. ಆದರೆ ಬೇಕಾದ ಪುಸ್ತಕ ಸಿಗದೆ ಅವರಿಗೆ ಒಂದು ರೀತಿಯ ಚಡಪಡಿಕೆ, ನಿರಾಶೆ.

ಅಂದು ಅಲ್ಲಿದ್ದವರನ್ನೆಲ್ಲಾ ತಮ್ಮ ತಮ್ಮ ಸಾಹಿತ್ಯಾಸಕ್ತಿಯ ಬಗ್ಗೆ ಅಭಿಪ್ರಾಯ ಹಂಚಿಕೊಳ್ಳಲು ಕೇಳಲಾಯಿತು. ಪುಸ್ತಕ ಓದುವ ಅಭ್ಯಾಸ ಇರುವವರು ತಮಗೆ ಬೇಕಾದ ಪುಸ್ತಕ ಸಿಗದಿರುವ ಬಗ್ಗೆ ಹೇಳಿಕೊಂಡರು. ಅದನ್ನು ಕೇಳಿದ ಕೆಲವರು ತಮ್ಮ ಮನೆಯಲ್ಲಿದ್ದ ಪುಸ್ತಕಗಳನ್ನು ತೂಕಕ್ಕೆ ಹಾಕಿ ಎಂದು ಮಕ್ಕಳು ಹೇಳುತ್ತಿದ್ದಾರೆ. ಪುಸ್ತಕದ ಮೌಲ್ಯ ಎಷ್ಟೆಂದು ನಮ್ಮ ಮಕ್ಕಳಿಗೆ ಗೊತ್ತಿಲ್ಲ. ಇಲ್ಲಿ ಅನೇಕರು ಪುಸ್ತಕ ಸಿಗದೆ ಪರದಾಡುತ್ತಿರುವುದಾಗಿ ಹೇಳಿದ್ದಾರೆ. ನನ್ನಲ್ಲಿ ಪುಸ್ತಕಗಳಿವೆ. ಆದ್ದರಿಂದ ನಾನು ಮಕ್ಕಳ ವಿರೋಧ ಕಟ್ಟಿಕೊಂಡರೂ ಸರಿ ಪುಸ್ತಕಗಳನ್ನು ಮಾರುವುದಿಲ್ಲ. ನನ್ನಲ್ಲಿರುವ ಪುಸ್ತಕಗಳ ಪಟ್ಟಿ ಮಾಡುತ್ತೇನೆ. ನನ್ನ ಮನೆಯ ಕೊಠಡಿಯನ್ನು ಲೈಬ್ರರಿಯಾಗಿಸುತ್ತೇನೆ. ಪುಸ್ತಕ ಬೇಕಿದ್ದವರು ಬಂದು ತೆಗೆದುಕೊಂಡು ಹೋಗಿ, ಓದಿ ವಾಪಸು ಮಾಡಿ ಎಂದು ಮುಕ್ತ ಆಹ್ವಾನವಿತ್ತರು. ಅದು ಮತ್ತಷ್ಟು ಜನರಿಗೆ ಸ್ಫೂರ್ತಿ ನೀಡಿತು. ಅವರೂ ಹಾಗೇ ಮಾಡುವುದಾಗಿ ಹೇಳಿದರು. ಈಗ ಅವರ ಕೆಲಸ ಪ್ರಗತಿಯಲ್ಲಿದೆ. ಎಲ್ಲವೂ ಸರಿಯಾದರೆ ನನ್ನಲ್ಲಿರುವ ಪುಸ್ತಕ ನೀವು ಓದಿ, ನಿಮ್ಮಲ್ಲಿರುವ ಪುಸ್ತಕ ನಾವು ಓದುತ್ತೇವೆ ಎಂದು ಪುಸ್ತಕ ಪ್ರೀತಿಧಾರೆಯೆರೆಯಲು ಮುಂದಾಗಿದ್ದಾರೆ.

ಹೀಗೆ ನಾವು ಹಲವು ವಸ್ತುಗಳ ಅವು ತಕ್ಷಣಕ್ಕೆ ಬೇಡ ಎಂದು ಎತ್ತಿಟ್ಟಿರುತ್ತೇವೆ. ಮುಂದೆ ಅವು ಉಪಯೋಗಕ್ಕೆ ಬರುತ್ತವೆ. ಕೊನೆಗೆ ಅವು ನಮಗೆ ಉಪಯೋಗವಿಲ್ಲ ಎಂದರೂ ಮತ್ತೊಬ್ಬರಿಗೆ ಉಪಯೋಗಕ್ಕೆ ಬಂದೇ ಬರುತ್ತವೆ. ಇತ್ತೀಚೆಗೆ ಒಂದು ಬಹುರಾಷ್ಟ್ರೀಯ ನೂರಾರು ಮಳಿಗೆಯವರು ಒಂದು ಜಾಹೀರಾತು ನೀಡಿದ್ದರು. ನಾವು ನಿಮ್ಮಲ್ಲಿರುವ ಹಳೆಯ ವಸ್ತುಗಳನ್ನು ಹೆಚ್ಚಿನ ಬೆಲೆಗೆ ಕೊಂಡುಕೊಳ್ಳುತ್ತೇವೆ. ನಿಮ್ಮ ಮನೆಯಲ್ಲಿರುವ ಹಳೆಯ ಪತ್ರಿಕೆಗಳಿಗೆ ಮಾರುಕಟ್ಟೆಯಲ್ಲಿ ಕೆಜಿಗೆ ಮೂವತ್ತು ರೂಪಾಯಿಯಾದರೆ ನಾವು ಐವತ್ತು ರೂಪಾಯಿ ಕೊಟ್ಟು ಖರೀದಿಸುತ್ತೇವೆ. ಹಾಗೆಯೇ ಹಳೆಯ ಪಾತ್ರೆಗಳು, ಬಟ್ಟೆಗಳನ್ನು ಹೆಚ್ಚಿನ ಬೆಲೆಗೆ ಕೊಂಡುಕೊಳ್ಳುತ್ತೇವೆ ಎಂದು ದೊಡ್ಡದಾಗಿ ಜಾಹೀರಾತು ನೀಡಿದ್ದರು. ಜನ ಮುಗಿಬಿದ್ದರು. ಮನೆಯಲ್ಲಿರುವ ಹಳೇ ಪುಸ್ತಕ, ಕ್ರೀಪರ್, ಪಾತ್ರೆ–ಪಗಡ ಎಲ್ಲವನ್ನೂ ಕೂಡಿ ಹಾಕಿ ಕೊಂಡೊಯ್ದರು. ಅದರಲ್ಲಿ ಕೆಲವು ಅಗತ್ಯದ ವಸ್ತುಗಳೂ ಇದ್ದವು. ಆದರೆ ಹೆಚ್ಚಿನ ಬೆಲೆ ಬರುವುದರಿಂದ ಬೇಕಾದರೆ ಮತ್ತೊಂದು ಕೊಂಡುಕೊಳ್ಳಬಹುದು ಎಂಬುದು ಅವರ ವಿಶ್ವಾಸ. ಕಂಪನಿಯೂ ತನ್ನ ಮಾತಿನಂತೆ ತೂಕ ಮಾಡಿ ಮೌಲ್ಯ ನಿರ್ಧರಿಸಿತು. ಆದರೆ ಹಣ ಕೊಡಲಿಲ್ಲ. ಬದಲಾಗಿ ಕೂಪನ್ ನೀಡಿತು. ಈ ಕೂಪನ್ ಹಾಜರುಪಡಿಸಿ ತಮ್ಮ ಅಂಗಡಿಯಲ್ಲಿ ಶೇಕಡಾ 20ರ ರಿಯಾಯಿತಿ ದರದಲ್ಲಿ ಏನು ಬೇಕಾದರೂ ಕೊಳ್ಳಬಹುದು ಎಂದು ಹೇಳಿತು. ಜನ ಆ ಬಹುರಾಷ್ಟ್ರೀಯ ಕಂಪನಿಯ ಮಳಿಗೆಗೆ ಹೋದರು. ಅಲ್ಲಿ ಎಲ್ಲವೂ ಇತ್ತು. ಕೆಲವಕ್ಕೆ ಹೆಚ್ಚಿನ ಬೆಲೆಯನ್ನೂ ನಮೂದಿಸಲಾಗಿತ್ತು. ನೀವು ನೂರು ರೂಪಾಯಿಯ ಪದಾರ್ಥಕೊಂಡರೆ ಎಂಭತ್ತು ರೂಪಾಯಿ ಪಾವತಿಸಿದರೆ ಸಾಕು. ಆ ವಸ್ತು ನಿಮ್ಮದಾಗುತ್ತದೆ. ಕೈಯಲ್ಲಿ ಒಂದು ಸಾವಿರ ರೂ ಮೌಲ್ಯದ ಕೂಪನ್ ಇದ್ದರೆ ಅದರ ಲಾಭ ಪಡೆಯಲು ನೀವು ಸಾವಿರಾರು ರೂಪಾಯಿ ಖರ್ಚು ಮಾಡಬೇಕು. ನೀವು ಇಲ್ಲಿಗೆ ತಂದಾಕಿದ ವಸ್ತುವಿನಂತಹುದನ್ನೇ ಕೊಂಡುಕೊಳ್ಳಬೇಕಾದರೂ ನೀವು ಜೇಬಲ್ಲಿ ಹಣ ಇರಿಸಿಕೊಂಡು ಬಂದು ಕೊಂಡುಕೊಳ್ಳಬೇಕು.

ಬಡವರ ಮನಸ್ಥಿತಿಯನ್ನು ಆ ಕಂಪನಿ ಹೀಗೆ ನಗದೀಕರಿಸಿಕೊಂಡಿತು. ಜನ ಬೆಸ್ತುಬಿದ್ದರು. ಕೈಯಲ್ಲಿ ರಿಯಾಯಿತಿ ಕೂಪನ್ ಇದೆ. ಆದರೆ, ಅದರಲ್ಲಿ ಯಾವುದೂ ಉಡುಗೊರೆಯಾಗಿ ಸಿಗುವುದಿಲ್ಲ. ಮನೆ ಮುಂದೆ ಬರುವವರಿಗೆ ನೀಡಿದ್ದರೆ ಅಷ್ಟೋ ಇಷ್ಟೋ ಹಣವಾದರೂ ಬರುತ್ತಿತ್ತು. ಈಗ ಈ ಬಲೆಗೆ ಬಿದ್ದೆವು ಎಂದು ಬಹುತೇಕರು ತಮ್ಮನ್ನೆ ಶಪಿಸುತ್ತಾ ಮರಳುತ್ತಿದ್ದ ದೃಶ್ಯ ಕಂಡುಬಂದಿತು.

ಮನೆಗೆ ಅಗತ್ಯವಾದ ವಸ್ತುಗಳನ್ನು ಖರೀದಿಸುವ ಸಲುವಾಗಿ ಮಾರಾಟ ಮಳಿಗೆಗಳಿಗೆ ಹೋಗುತ್ತೇವೆ. ಅಲ್ಲಿ ಅವುಗಳ ಉಪಯೋಗದ ಬಗ್ಗೆ ವಿವರಿಸುತ್ತಾರೆ. ಉದಾಹರಣೆಗೆ ತರಕಾರಿ ಕತ್ತರಿಸುವ ಉಪಕರಣ ನೋಡಲು ಬಹಳ ಸಲೀಸು. ಹೆಚ್ಚುವ ಗೋಜಲಿಲ್ಲ, ಸಣ್ಣದಾಗಿ ಒಂದೇ ಅಳತೆಯಲ್ಲಿ ಕತ್ತರಿಸುವ ಯಂತ್ರಕ್ಕೆ ಹೆಂಗಸರು ಮಾರುಹೋಗುತ್ತಾರೆ. ಅದನ್ನು ಕೊಂಡು ಮನೆಗೆ ತರುತ್ತಾರೆ. ಆದರೆ ಅದನ್ನು ಉಪಯೋಗಿಸಲು ಮುಂದಾದರೆ ಅಂಗಡಿಯವನಂತೆ ಸಲೀಸಾಗಿ ಕತ್ತರಿಸಲು ಆಗುವುದಿಲ್ಲ. ಕೊಂಡು ತಂದಾಗಿದೆ, ವಾಪಸ್ಸು ಕೊಡುವಂತಿಲ್ಲ. ಕೊನೆಗೆ ಅದು ಮೂಲೆ ಸೇರುತ್ತದೆ. ನಂತರ ಅನ್ನಿಸುವುದು ನಾವು ಅನುಸರಿಸಿಕೊಂಡು ಬಂದಿರುವ ಪದ್ಧತಿಯೇ ಸರಿ. ಇನ್ನು ಮುಂದೆ ಹೀಗೆ ಮೋಸಹೋಗಬಾರದು ಎಂದು, ಆದರೆ ಮತ್ತೆಮತ್ತೆ ಅಂತಹ ವಸ್ತುಗಳನ್ನು ಕೊಂಡು ತಂದು ಅಟ್ಟದಲ್ಲಿ ಅದಕ್ಕೆ ಹೇಗೋ ಜಾಗ ಕಲ್ಪಿಸುವುದು ನಡೆದೇ ಇರುತ್ತದೆ.

ಇದು ವಸ್ತುವಿನ ವಿಚಾರವಾಯಿತು. ಕೊಂಡು ತಂದಿದ್ದು ಉಪಯೋಗವಾಗದಿದ್ದಲ್ಲಿ ಒಂದಷ್ಟು ಹಣ ಮಾತ್ರ ವ್ಯರ್ಥವಾಗಬಹುದು. ಆದರೆ ನಾವು ವ್ಯಕ್ತಿಗಳ ವಿಚಾರದಲ್ಲೂ ಹೀಗೆ ತಪ್ಪು ಮಾಡುತ್ತೇವೆ. ಮನೆಯಲ್ಲಿ ಎಲ್ಲರಿಗೂ ಒಂದೊಂದು ಜವಾಬ್ದಾರಿ ಇರುತ್ತದೆ. ಅವರು ಅದನ್ನು ನಿಭಾಯಿಸಿಕೊಂಡು ಹೋಗುತ್ತಿದ್ದಾಗ ಸಂಸಾರ ಸರಾಗವಾಗಿ ನಡೆದುಕೊಂಡು ಹೋಗುತ್ತದೆ. ಆದರೆ ಅದರಲ್ಲಿ ಒಬ್ಬ ಇಲ್ಲವೆಂದಾದಾಗ ನಮಗೆ ಒಂದಷ್ಟು ಕಿರಿಕಿರಿ–ಪಿರಿಪಿರಿ ಆರಂಭವಾಗುತ್ತದೆ. ಆಗ ಅಯ್ಯೋ! ಅವರು ಇದ್ದಾಗ ನಾವು ಸರಿಯಾಗಿ ನೋಡಿಕೊಳ್ಳಲಿಲ್ಲ. ಈಗ ಅವರ ಅನುಪಸ್ಥಿತಿಯಲ್ಲಿ ಅವರ ಬೆಲೆ ಅರಿವಾಗುತ್ತಿದೆ ಎಂದು ಹೇಳುತ್ತಾರೆ. ಇದ್ದಾಗ ಅವರನ್ನು ಅಷ್ಟೇ ಅಸಡ್ಡೆಯಿಂದ ನೋಡಿಕೊಂಡಿರುತ್ತಾರೆ. ತಾಯಿ–ತಂದೆಯ ಬಗ್ಗೆ, ಅವರ ನಿಧನದ ನಂತರ ಹಲವರು ಈ ರೀತಿ ಹೇಳಿಕೊಂಡು ಕಣ್ಣೀರು ಹಾಕುತ್ತಾರೆ. ತಾಯಿಯ ಪ್ರೀತಿ ಹಾಗೂ ತ್ಯಾಗ ಆಕೆ ಇರುವವರೆಗೆ ಗೊತ್ತೇ ಆಗುವುದಿಲ್ಲ. ಅವರ ನಿಧನದ ನಂತರ ತಂದೆ–ತಾಯಿ ಮೌಲ್ಯ ಅರಿವಾಗುತ್ತದೆ. ಆದರೆ ಕಾಲ ಮಿಂಚಿರುತ್ತದೆ.

ನಾವು ಮನೆಯಲ್ಲಿ ಕೆಲವೊಂದು ಉಪಕರಣದ ದುರಸ್ತಿಗೆ ಸಂಬಂಧಿಸಿದಂತೆ ಕೆಲವು ವಸ್ತುಗಳನ್ನು ತಂದಿರುತ್ತೇವೆ. ಆದರೆ ಅವುಗಳು ನಿಯಮಿತವಾದ ಉಪಯೋಗಕ್ಕೆ ಬಾರದಿರುವುದರಿಂದ ಎಲ್ಲೋ ಇಟ್ಟಿರುತ್ತೇವೆ ಹಾಗೂ ಕ್ರಮೇಣ ಮರೆಯುತ್ತೇವೆ. ಮುಂದೆ ಒಂದು ದಿನ ಅದು ಬೇಕೆನಿಸಿದಾಗ ಸಿಗುವುದಿಲ್ಲ. ಆಗ ಪರದಾಡುತ್ತೇವೆ. ಇದು ಮಾನವನ ಸಹಜ ಗುಣ, ಯಾವುದಾದರೂ ವಸ್ತುವನ್ನು ಕಳೆದುಕೊಂಡಾಗಲೇ ನಮಗೆ ಅದರ ಮೌಲ್ಯ ಅರಿವಾಗುವುದು.

ನಮ್ಮ ಆಯುರ್ವೇದ ಪದ್ಧತಿಯಲ್ಲಿ ಎಲ್ಲ ಗಿಡಮರಗಳಲ್ಲಿ ಏನಾದರೂ ಔಷಧೀಯ ಗುಣ ಇದ್ದೇ ಇರುತ್ತದೆ. ಆದರೆ ಎಲ್ಲರಿಗೂ ಆ ಜ್ಞಾನವಿಲ್ಲ. ಅದನ್ನು ಸರಿಯಾಗಿ ತಿಳಿದವರು ಈ ಗಿಡಗಳಲ್ಲಿರುವ ಔಷಧದ ಗುಣದಿಂದ ಸಂಬಂಧಿಸಿದ ರೋಗ–ರುಜಿನ ವಾಸಿ ಮಾಡಬಲ್ಲರು. ಈ ಹಿಂದೆ ಹಳ್ಳಿಗಳಲ್ಲಿ ಹಾಗೂ ಕೆಲವು ನಗರ ಪ್ರದೇಶಗಳಲ್ಲೂ ಇಂತಹ ಜ್ಞಾನವಿದ್ದವರು ಇರುತ್ತಿದ್ದರು. ಅವರಿಗೆ ಹಣದಾಸೆಯೂ ಇರುತ್ತಿರಲಿಲ್ಲ. ತಮ್ಮಲ್ಲಿಗೆ ಆರೋಗ್ಯ ಸಮಸ್ಯೆ ಹೇಳಿಕೊಂಡು ಬಂದವರಿಗೆ ಚಿಕಿತ್ಸೆ ನೀಡುತ್ತಿದ್ದರು. ಅಂತಹ ತಲೆಮಾರು ಈಗ ಕಡಿಮೆಯಾಗುತ್ತಿದ್ದು, ಗಿಡಮರಗಳಲ್ಲಿರುವ ಔಷಧೀಯ ಗುಣ ಅರಿವೇ ಬಾರದು. ಹೀಗೆ ಜ್ಞಾನವಿದ್ದವರು ನೀಡಿದ ಔಷಧಿ ಪಡೆದು ಖಾಯಿಲೆಯಿಂದ ಗುಣಮುಖರಾದವರು ಅವರನ್ನು ದೇವರೆಂದೇ ಸ್ಮರಿಸುತ್ತಾರೆ. ಈಗ ನಮಗೆ ಎಲ್ಲದಕ್ಕೂ ರಾಸಾಯನಿಕದ ಮಾತ್ರೆಗಳಿವೆ. ನಮಗೆ ಆ ಗಿಡಮರಗಳ ಜ್ಞಾನವೇ ಬೇಡ ಎಂದು ಭಾವಿಸುವವರ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಇದರ ಪರಿಣಾಮ ಇಂದು ಖಾಯಿಲೆ ಬಂದರೆ ಜೀವಮಾನಪೂರ್ತಿ ಮಾತ್ರೆ ನುಂಗಬೇಕು, ಇಂಜೆಕ್ಷನ್ ಚುಚ್ಚಿಸಿಕೊಳ್ಳಬೇಕು ಎಂಬಂತಾಗಿದೆ.

ಇಂದಿಗೂ ನಮ್ಮಲ್ಲಿ ಕೆಲವು ಪನ್ಸಾರಿ ಅಂಗಡಿಗಳಿವೆ. ಅಲ್ಲಿ ನೂರಾರು ಖಾಯಿಲೆಗಳಿಗಾಗುವ ಔಷಧಿಗಳಿವೆ. ಅಂಗಡಿ ನಡೆಸುವವರಿಗೂ ಆ ಬಗ್ಗೆ ಜ್ಞಾನವೂ ಇದೆ. ಆದರೆ ಆ ಅಂಗಡಿಗೆ ಹೋಗಿ ಯಾವ ವಸ್ತು ಕೊಳ್ಳಬೇಕು ಎಂಬ ಜ್ಞಾನ ಇಲ್ಲವಾಗಿದೆ. ಈ ಹಿಂದೆ ಅಳಲೆ ಕಾಯಿ ಪಂಡಿತರು ಎಂದು ಕರೆಸಿಕೊಳ್ಳುವ ಪಂಡಿತರಿರುತ್ತಿದ್ದರು. ಎಲ್ಲದಕ್ಕೂ ಔಷಧ ಅಳಲೇ ಕಾಯಿ ಎಂದು ಅವರು ಸಾಧಿಸಿ ತೋರಿಸಿದ್ದರು. ಆದರೆ ಆಧುನಿಕತೆ ನಮ್ಮನ್ನು ಮುಂದಕ್ಕೆ ಕೊಂಡೊಯ್ಯುವ ಬದಲು ಹಿಂದಕ್ಕೆ ಕೊಂಡೊಯ್ಯುತ್ತಿದೆ ಎಂಬುದೇ ನಮಗೆ ಗೊತ್ತಾಗುತ್ತಿಲ್ಲ. ಕಳೆದುಕೊಂಡಾಗಲೇ ಯಾವುದೇ ಪದಾರ್ಥ ಇಲ್ಲವೆ ವ್ಯಕ್ತಿಯ ಮೌಲ್ಯ ಅರಿವಾಗುವುದು.

ಔದ್ಯೋಗಿಕ ಕ್ರಾಂತಿಗೆ ನಮ್ಮೆಲ್ಲರ ಮನಸ್ಥಿತಿ ಬದಲಾಗಬೇಕು

ಜೆಎಸ್‌ಎಸ್ ಕಾಲೇಜಿನಲ್ಲಿ ಆಯೋಜಿಸಿದ್ದ ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ಉದ್ಯಮಿ ಪವನ್ ರಂಗ ಅಭಿಮತ



ಮೈಸೂರಿನ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಿದ್ದ ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮವನ್ನು ಸೈಕಲ್ ಅಗರ್‌ಬತ್ತಿ ಮತ್ತು ರಂಗಸನ್ಸ್ ಏರೋಸ್ಪೇಸ್ ಪ್ರೈ.ಲಿ. ನಿರ್ದೇಶಕ ಪವನ್‌ರಂಗ ಉದ್ಘಾಟಿಸಿದರು.

ಮೈಸೂರು, ಜೂ.27– ಭಾರತ ದೇಶವು ಅಭಿವೃದ್ಧಿಯ ದಾರಿಯಲ್ಲಿ ಸಾಕಷ್ಟು ಬದಲಾವಣೆಗಳೊಂದಿಗೆ ಮುನ್ನಡೆಯುತ್ತಿದೆ. ದೇಶದ ಅಭಿವೃದ್ಧಿಗೆ ಸ್ವಾವಲಂಬನೆಯ ಮಹತ್ವವನ್ನು ಇಂದು ನಾವು ಅರಿತಿದ್ದೇವೆ. ಆತ್ಮನಿರ್ಭರ್ ಭಾರತ್ ಪರಿಕಲ್ಪನೆ ಇದಕ್ಕೆ ಸಾಕ್ಷಿ. ದೇಶದ ಔದ್ಯೋಗಿಕ ಕ್ಷೇತ್ರದಲ್ಲಿನ ಇಂದಿನ ಸ್ಥಿತಿಗಿಂತ ಅತ್ಯುತ್ತಮವಾದ ಬದಲಾವಣೆಯನ್ನು ಕಾಣಬೇಕಾದರೆ ಮೊದಲು ನಮ್ಮೆಲ್ಲರ ಮನಸ್ಥಿತಿ ಮತ್ತು ಮನೋಭಾವಗಳು ಬದಲಾಗಬೇಕು. ನಮ್ಮನ್ನು ನಾವು ಬದಲಾಯಿಸಿಕೊಂಡು ಔದ್ಯೋಗಿಕ ಕ್ಷೇತ್ರದಲ್ಲಿ ಮತ್ತು ಹೊಸ ಅನ್ವೇಷಣೆ–ಆವಿಷ್ಕಾರಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮೈಸೂರಿನ ಸೈಕಲ್ ಅಗರ್‌ಬತ್ತಿ ಮತ್ತು ರಂಗಸನ್ಸ್ ಏರೋಸ್ಪೇಸ್ ಪ್ರೈ.ಲಿ. ನಿರ್ದೇಶಕ ಪವನ್‌ರಂಗ ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮೈಸೂರು ವಿಭಾಗದ ಭಾರತೀಯ ಉದ್ಯಮದ ಒಕ್ಕೂಟ, ಉದ್ಯಮ ಸಂಸ್ಥೆ ಸಂವಹನ ಮತ್ತು ಉನ್ನತ ಶಿಕ್ಷಣ ಸಮಿತಿ ಸಹಕಾರದೊಂದಿಗೆ ಹಮ್ಮಿಕೊಂಡಿದ್ದ 'ಭವಿಷ್ಯವನ್ನು ಸಶಕ್ತಗೊಳಿಸುವ ಕೌಶಲಗಳು: ಉದ್ಯಮದ ಪ್ರವೃತ್ತಿಗಳು, ಉದ್ಯಮಶೀಲತೆ ಮತ್ತು ವೃತ್ತಿಮಾರ್ಗಗಳು' ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಜ್ಞಾನ ಎಂಬುದು ಸರ್ವಶ್ರೇಷ್ಠವಾದದ್ದು ಮತ್ತು ಅತ್ಯುತ್ತಮ ಸಾಧನ ಎಂಬುದನ್ನು ಮರೆಯಬಾರದು. ಅದನ್ನು ಸರಿಯಾದ ರೀತಿಯಲ್ಲಿ ಪಡೆದು ಬಳಸಬೇಕು. ನಾವು ಹೇಗೆ ಎಲ್ಲಾ ರೀತಿಯಲ್ಲಿಯೂ ಸಶಕ್ತರಾಗುವುದು ಮತ್ತು ಸ್ವಾವಲಂಬಿಗಳಾಗುವುದು ಎಂಬುದನ್ನು ಯೋಚಿಸುತ್ತಿರಬೇಕು. ಸಶಕ್ತ ಮತ್ತು ಸ್ವಾವಲಂಬಿ ಜೀವನಕ್ಕೆ ಹಲವು ಕೌಶಲಗಳು ತುಂಬಾ ಅಗತ್ಯ. ಅವುಗಳನ್ನು ಪರಿಪೂರ್ಣಗೊಳಿಸಿಕೊಳ್ಳುವುದರ ಕಡೆ ನಮ್ಮ ಶೈಕ್ಷಣಿಕ ಚಟುವಟಿಕೆ ಗಳಿರಬೇಕು. ಸ್ನಾತಕೋತ್ತರ ಪದವಿ ಎಂಬುದು ಕಲಿಕೆಗೆ ಒಂದು ವೇದಿಕೆಯಿದ್ದಂತೆ. ಇಲ್ಲಿ ನಿಮ್ಮ ಭವಿಷ್ಯದ ಗುರಿಯನ್ನು ಮುಟ್ಟುವುದಕ್ಕೆ ಅಗತ್ಯವಾದ ಶಿಕ್ಷಣ ಮತ್ತು ಕೌಶಲವನ್ನು ಪೂರ್ವಯೋಜಿತವಾಗಿ ಪಡೆದುಕೊಳ್ಳಬೇಕು ಎಂದರು.

ಸಂವಾದ ಕಾರ್ಯಕ್ರಮದ ಆಶಯ ನುಡಿಗಳನ್ನಾಡಿದ ಮೈಸೂರಿನ ಪ್ರೊಸೆಟ್ಟಾ ಬಯೋಕಾನ್ಫಾರ್ಮ್ಯಾಟಿಕ್ಸ್ ಪ್ರೈ.ಲಿ.ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಪ್ರಧಾನ ವಿಜ್ಞಾನಿ ಡಾ.ಎಂ. ಧರ್ಮಪ್ರಸಾದ್, ಕೈಗಾರಿಕ ಕ್ರಾಂತಿ ಹಂತಹಂತವಾಗಿ ಬೆಳೆಯುತ್ತಿದೆ. ಈ ಬೆಳವಣಿಗೆಯ ಇತಿಹಾಸವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ವಿಜ್ಞಾನ ಮತ್ತು ತಂತ್ರಜ್ಞಾನಗಳು ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಹೊಂದುತ್ತಾ ಬಂದಿವೆ. ಈ ಬದಲಾವಣೆಯ ಸ್ವರೂಪವನ್ನು ಅರ್ಥಮಾಡಿಕೊಂಡು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ ಮಾತನಾಡುತ್ತಾ, ಭಾರತ ಸರ್ಕಾರದ ಆಶಯದಂತೆ ಕೌಶಲಾಭಿವೃದ್ಧಿಯ ಸಾಧ್ಯತೆಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ಹಲವು ಪ್ರಯತ್ನಗಳು ನಡೆಯುತ್ತಿವೆ. ಭಾರತವು ಹಲವು ಆಯಾಮಗಳಲ್ಲಿ ಅತ್ಯುನ್ನತ ಗುಣಮಟ್ಟವನ್ನು ಮತ್ತು ದೊಡ್ಡ ಪ್ರಮಾಣದ ಕೌಶಲವನ್ನು ಹೊಂದುವ ಗುರಿಯನ್ನು ಹೊಂದಿದೆ. ಕೆಲಸ ಮಾಡುವ ವಯಸ್ಸಿನವರಲ್ಲಿ ಶೇ.65 ಯುವ ಜನಾಂಗವನ್ನು ಹೊಂದಿರುವ ಭಾರತ ದೇಶವು ಕೌಶಲಾಭಿವೃದ್ಧಿಯನ್ನು ಸಾಧಿಸುವ ಮೂಲಕ ಮಾನವ ಸಂಪನ್ಮೂಲವನ್ನು ಸದ್ಬಳಕೆ ಮಾಡುವ ಯೋಜನೆಯನ್ನು ಹೊಂದಿದೆ. ಇದು ರಾಷ್ಟ್ರೀಯ ಆರ್ಥಿಕ ಬೆಳವಣಿಗೆಗೆ ಪ್ರಯೋಜನಕಾರಿಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 550 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಂವಾದದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಬಿ.ಎಸ್.ಪ್ರಶಾಂತ್, ಶಿವಶಂಕರ್ ಬಿ, ವಿಜಯಾನಂದ, ಡಾ. ಶಿಲ್ಪ ಜ್ಞಾನೇಶ್, ರಶ್ಮಿ ಶಂಕರ್ ಹಾಗೂ ಮಧುಕುಮಾರ್ ಭಾಗವಹಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಶುಕ್ರವಾರ 28 ಜೂನ್ 2024

ಕೆಂಪೇಗೌಡರ ಭವ್ಯ ಮೆರವಣಿಗೆ



ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಪ್ರಾರಂಭವಾದ ಭವ್ಯ ಮೆರವಣಿಗೆಯಲ್ಲಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಭಾಗವಹಿಸಿದ್ದರು. ಈ ವೇಳೆ ಅಸಂಘಟಿತ ಕಾರ್ಮಿಕರ ಘಟಕದ ಅಧ್ಯಕ್ಷ ವಿನಯ್‌ಕುಮಾರ್, ಮರ್ಚೆಂಟ್ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಮಹೇಶ್, ಮುಖಂಡರಾದ ಕುಮಾರ್‌ಗೌಡ, ರಾಜಕೀಯ ರವಿ, ಲತಾ ರಂಗನಾಥ್, ಹೋಟೇಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಇತರರು ಉಪಸ್ಥಿತರಿದ್ದರು.

ಜಯಂತಿ ಆಚರಣೆ: ಹೋಳಿಗೆ ವಿತರಣೆ



ನಾಡಪ್ರಭು ಕೆಂಪೇಗೌಡ ಜಯಂತಿ ಹಿನ್ನೆಲೆಯಲ್ಲಿ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಜೀವಧಾರ ರಕ್ತನಿಧಿ ಕೇಂದ್ರ ಹಾಗೂ ಕೆಎಂಪಿಕೆ ಟ್ರಸ್ಟ್ ವತಿಯಿಂದ ಹೋಳಿಗೆ ವಿತರಿಸಲಾಯಿತು. ಈ ವೇಳೆ ಮುಡಾ ಅಧ್ಯಕ್ಷ ಕೆ.ಮರೀಗೌಡ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಹಲವು ರಾಜಕೀಯ ಮುಖಂಡರು ಉಪಸ್ಥಿತರಿದ್ದರು.

ತಾಲೂಕು ಒಕ್ಕಲಿಗರ ಸಂಘದ ಕಚೇರಿಯಲ್ಲಿ ಆಚರಣೆ



ನಾಡಪ್ರಭು ಕೆಂಪೇಗೌಡರ 515ನೇ ಜಯಂತಿಯನ್ನು ತಾಲೂಕು ಒಕ್ಕಲಿಗರ ಸಂಘದ ಕಚೇರಿಯಲ್ಲಿ ಆಚರಿಸಲಾಯಿತು. ಈ ವೇಳೆ ಸಂಘದ ಖಜಾಂಚಿ ಡಾ.ಎಚ್.ಸಿ. ಕೃಷ್ಣಕುಮಾರ್ ಸಾಗರ್, ಕೂರ್ಗಳ್ಳಿ ಮಾದೇವ, ಅರುಣ್‌ಕುಮಾರ್, ಶ್ರೀನಿವಾಸ್, ಕೃಷ್ಣೇಗೌಡ, ಪುಟ್ಟೇಗೌಡ ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಮೈಸೂರು ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಆಚರಣೆ



ಮೈಸೂರು ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಕೆಂಪೇಗೌಡರ ಜಯಂತಿ ಆಚರಿಸಲಾಯಿತು. ಈ ಸಂದರ್ಭ ವಿಭಾಗೀಯ ಸಂಚಲನಾಧಿಕಾರಿ ಹೆಚ್.ಡಿ. ದಿನೇಶ್‌ಕುಮಾರ್, ಅಧಿಕಾರಿಗಳು, ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

ಪರಿಸರಸ್ನೇಹಿಯಾಗಿ ಕೆಂಪೇಗೌಡರ ಜಯಂತಿ



ನಾಡಪ್ರಭು ಕೆಂಪೇಗೌಡರ 515ನೇ ಜಯಂತಿಯನ್ನು ಕೆಎಸ್‌ಆರ್‌ಟಿಸಿ ಗ್ರಾಮಾಂತರ ಘಟಕ-1ರಲ್ಲಿ ಗಿಡ ನೆಡುವ ಮೂಲಕ ಆಚರಿಸಲಾಯಿತು. ಘಟಕದ ವ್ಯವಸ್ಥಾಪಕಿ ಗೀತಾ, ಮೇಲ್ವಿಚಾರಕಿ ವೇದಾವತಿ, ನಿರ್ವಾಹಕ ಶಿವಣ್ಣ, ಚಾಲಕ ರಮೇಶ್, ಸಹಾಯಕ ಲೋಕೇಶ್, ಮೆಕ್ಯಾನಿಕ್ ರಾಜಣ್ಣ, ದಯಾನಂದ್, ಕಿರಣ್, ಸುರೇಂದ್ರನಾಥ್ ಇದ್ದರು.



ಮೈಸೂರಿನ ಅರಮನೆ ಮುಂಭಾಗ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಕೆಂಪೇಗೌಡರ ಜಯಂತ್ಯುತ್ಸವದ ಮೆರವಣಿಗೆಗೆ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ನಂದಿ ಕಂಬಕ್ಕೆ ಪೂಜೆ ಸಲ್ಲಿಸಿ, ನಾಡಪ್ರಭು ಕೆಂಪೇಗೌಡರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ, ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಜಿ.ಡಿ. ಹರೀಶ್‌ಗೌಡ, ಕೆ.ವಿವೇಕಾನಂದ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್, ಮೈಸೂರು-ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿಕಟಪೂರ್ವ ಅಧ್ಯಕ್ಷ ಜಿ.ಮಂಜುಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಪದಾಧಿಕಾರಿಗಳು ಹಾಗೂ ಸಮುದಾಯದ ಮುಖಂಡರು, ಯುವಕರು, ಮಹಿಳೆಯರು ಭಾಗವಹಿಸಿದ್ದರು.

ಇಂದು ಕಲಾಕೃತಿ ಲೋಕಾರ್ಪಣೆ

ಮೈಸೂರು, ಜೂ. 27 -ಕಲಾವಿದ ಹಾ.ಪು.ರಂಗಸ್ವಾಮಿ ಅವರು ನಿರ್ಮಿಸಿರುವ ನಿಸರ್ಗದ ಮಡಿಲಲ್ಲಿ ಶ್ರೀ ಸರಸ್ವತಿದೇವಿ ಕಲಾಕೃತಿಯನ್ನು ನಾಳೆ ಮಧ್ಯಾಹ್ನ 12.30ಕ್ಕೆ ಹೆಬ್ಬಾಳು ಒಂದನೇ ಹಂತದ ಶ್ರೀ ಜ್ಞಾನೇಶ್ವರಿ ವಿದ್ಯಾಸಂಸ್ಥೆಯಲ್ಲಿ ಎಸ್.ಶಂಕರರಾವ್ ಲೋಕಾರ್ಪಣೆ ಮಾಡುವರು. ಭರಣಿ ಆರ್ಟ್ ಗ್ಯಾಲರಿಯ ಸಂಸ್ಥಾಪಕ ಎನ್.ಬಿ.ಕಾವೇರಪ್ಪ ಅತಿಥಿಯಾಗಿರುವರು.

ಮೈಸೂರಿನಲ್ಲಿ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಅದ್ಧೂರಿ ಆಚರಣೆ

ಮಹನೀಯರ ಜಯಂತಿಗೆ ನೀಡುವ ಸರ್ಕಾರಿ ರಜೆ ರದ್ದು ಮಾಡಿ

● ಸರ್ಕಾರಕ್ಕೆ ಶಾಸಕ ಜಿ.ಟಿ.ದೇವೇಗೌಡರ ಆಗ್ರಹ ● ಸರ್ಕಾರಿ ಕಚೇರಿಗಳು ವಾರಕ್ಕೆ ಎರಡು ದಿನ ನಡೆಯೋದೇ ಕಷ್ಟ! ● ಕೆಲಸ ಕಾರ್ಯಗಳ ವಿಳಂಬದಿಂದ ಜನರಿಗೆ ತೀವ್ರ ತೊಂದರೆ ● ಅರ್ಥಪೂರ್ಣವಾಗಿ ಜಯಂತಿ ಆಚರಿಸಿ; ಆದರೆ ರಜೆ ಮಜಾ ಬೇಡಿ

ಮೈಸೂರು, ಜೂ.27(ಬಿಎಲ್‌ಯು)- ಮಹನೀಯರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಬೇಕು. ಆದರೆ ಜಯಂತಿ ಆಚರಣೆಗಾಗಿ ನೀಡುವ ಸರ್ಕಾರಿ ರಜೆಯನ್ನು ಮೊದಲು ರದ್ದು ಮಾಡಬೇಕು ಎಂದು ಶಾಸಕ ಜಿ.ಟಿ. ದೇವೇಗೌಡರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಇಂದು ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತವಾಗಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 515 ನೇ ಜಯಂತಿ ಆಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಮಹನೀಯರ ಜಯಂತಿ ದಿನದಂದು ಶಾಲಾ-ಕಾಲೇಜುಗಳಲ್ಲಿ ಬೆಳಿಗ್ಗೆ ಒಂದು ಗಂಟೆ ಕಾರ್ಯಕ್ರಮಕ್ಕಾಗಿ ಮೀಸಲಿಡಬೇಕು. ಆ ವೇಳೆ ಸಂಬಂಧಿಸಿದ ಮಹನೀಯರ ಕೊಡುಗೆ, ತತ್ವಾದರ್ಶವನ್ನು ಸ್ಮರಿಸಿ, ವಿದ್ಯಾರ್ಥಿಗಳಿಗೆ ತಿಳಿಹೇಳಬೇಕು. ಸರ್ಕಾರಿ ಕಚೇರಿಗಳು ವಾರದಲ್ಲಿ ಎರಡು ದಿನ ನಡೆಯುವುದೇ ಕಷ್ಟವಾಗಿದೆ. ಶನಿವಾರ ರಜೆ, ಭಾನುವಾರ ರಜೆ, ಜಯಂತಿಗಳಂದು ರಜೆ ನೀಡಲಾಗುತ್ತಿದೆ. ಇದರಿಂದ ಸರ್ಕಾರಿ ಕಚೇರಿಗಳಲ್ಲಿ ಆಗಬೇಕಾದ ಕಾರ್ಯಗಳು ತುಂಬಾ ವಿಳಂಬವಾಗುತ್ತಿದೆ. ಇದರ ಪರಿಣಾಮ ಜನರು ಸರ್ಕಾರಿ ಕಚೇರಿಗಳಿಗೆ ಅಲೆಯಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ಜಿ.ಟಿ.ದೇವೇಗೌಡರು ಜನರಿಗಾಗುತ್ತಿರುವ ತೊಂದರೆಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. ಸರ್ಕಾರದ ಮಟ್ಟದಲ್ಲಿ ಜಯಂತಿ ಕಾರ್ಯಕ್ರಮ ನಡೆಯಬೇಕು, ರಾಜಕೀಯ ಪಕ್ಷಗಳು ಕೂಡ ಜಯಂತಿ ಕಾರ್ಯಕ್ರಮ ಆಯೋಜಿಸಬೇಕು, ಮಂತ್ರಿಗಳು ಸೇರಿದಂತೆ ರಾಜಕಾರಣಿಗಳು ಆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಜಯಂತಿ ಆಚರಿಸುತ್ತಿರುವ ಮಹನೀಯರ ಕೊಡುಗೆಗಳನ್ನು ಸ್ಮರಿಸಬೇಕು. ಈ ಮೂಲಕ ಮುಂದಿನ ಪೀಳಿಗೆ ಇದನ್ನು ಅನುಸರಿಸುವಂತೆ ಮನದಟ್ಟು ಮಾಡಬೇಕು ಎಂದು ಹೇಳಿದರು.

ಅದು ಬಿಟ್ಟು ಜಯಂತಿ ಆಚರಣೆ ಹೆಸರಿನಲ್ಲಿ ರಜೆ ಕೊಡಬಾರದು. ಇದರಿಂದ ಸರ್ಕಾರದ ಮಟ್ಟದಲ್ಲಿ ಕೆಲಸ ಕಾರ್ಯಗಳು ಆಗದೆ ಜನರಿಗೆ ತುಂಬಾ ತೊಂದರೆ ಆಗುತ್ತದೆ. ತುರ್ತಾಗಿ ಆಗಬೇಕಾದ ಕೆಲಸಗಳು ಕೂಡ ಆಗದೆ ಜನರು ಬದುಕು ಕಟ್ಟಿಕೊಳ್ಳಲು ಕಷ್ಟ ಪಡುತ್ತಿದ್ದಾರೆ ಎಂದರು. ಮೊದಲಿಗೆ 2016 ರಲ್ಲಿ ಮೈಸೂರಿನಲ್ಲಿ ಕೆಂಪೇಗೌಡರ ಜಯಂತಿ ಆಚರಣೆ ಮಾಡಲಾಯಿತು. ತರುವಾಯ ಅದು ರಾಜ್ಯ ಹಾಗೂ ರಾಷ್ಟ್ರ ಮಟ್ಟಕ್ಕೂ ವಿಸ್ತರಣೆಯಾಯಿತು. ಮೈಸೂರಿನಲ್ಲಿ ಆದ ಕೆಂಪೇಗೌಡರ ಜಯಂತಿ ಆಚರಣೆಯ ದಾಖಲೆಯನ್ನು ಯಾರೂ ಮುರಿಯಲು ಸಾಧ್ಯವಿಲ್ಲ ಎಂದು ಹೇಳಿದರು.

ಕೆಂಪೇಗೌಡರು ಬೆಂಗಳೂರು ಕಟ್ಟಿದರು, ಕೆರೆ, ಕಾಲುವೆ ನಿರ್ಮಾಣ ಮಾಡಿದರು, ಒಂದೊಂದು ಸಮುದಾಯಕ್ಕೂ ಒಂದೊಂದು ಪೇಟೆಗಳನ್ನು ಕೊಡುಗೆಯಾಗಿ ನೀಡಿದರು. ಮಾರುಕಟ್ಟೆಗಳನ್ನು ನಿರ್ಮಿಸಿದರು, ಗುಡಿ, ಗೋಪುರ, ದೇವಾಲಯಗಳನ್ನು ನಿರ್ಮಾಣ ಮಾಡಿದರು. ಇಂದು ಬೆಂಗಳೂರು ವಿಶ್ವಮಟ್ಟದಲ್ಲಿ ಪ್ರಖ್ಯಾತಿ ಪಡೆಯಲು ಕೆಂಪೇಗೌಡರು ನೀಡಿದ ಕೊಡುಗೆ ಪ್ರಮುಖ ಕಾರಣ. ಬೆಂಗಳೂರಿನ ಆರ್ಥಿಕ ವಹಿವಾಟಿನ ಲಾಭದಲ್ಲಿ ರಾಜ್ಯ ನಿರ್ವಹಣೆಯಾಗುತ್ತಿದೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, 16ನೇ ಶತಮಾನದಲ್ಲಿ ಕೆಂಪೇಗೌಡರು ಬೆಂಗಳೂರು ಕಟ್ಟಿ ಮಹಾನ್ ಕೊಡುಗೆ ನೀಡಿದ್ದಾರೆ. ಯಾವುದೇ ತಂತ್ರಜ್ಞಾನ ಇಲ್ಲದ ಅಂದಿನ ದಿನದಲ್ಲೇ ಯೋಜನಾಬದ್ಧವಾದ ಒಳಚರಂಡಿ ನಿರ್ಮಾಣ ಮಾಡಿದ್ದರು. ಕೆರೆ, ಕಟ್ಟೆ, ರಾಜಕಾಲುವೆ, ಮಾರುಕಟ್ಟೆ ನಿರ್ಮಿಸಿದರು ಎಂದು ಹೇಳಿದರು.

ತರುವಾಯ ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಡಾ.ರಾಜೇಂದ್ರ, ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದ ಮಾದರಿಯಲ್ಲಿ ಬೆಂಗಳೂರು ಕಟ್ಟುವ ಕನಸು ಕಂಡಿದ್ದರು. ಇದರಿಂದ ಬೆಂಗಳೂರಿನಲ್ಲಿ ಅವರ ಪರಿಕಲ್ಪನೆಯ ಹಲವು ಯೋಜನೆಗಳು ಸಾಕಾರಗೊಂಡಿತು. ಆದರೆ ಕೆಂಪೇಗೌಡರು ನಿರ್ಮಾಣ ಮಾಡಿದ ಹಲವು ಕೆರೆಗಳು ಇಂದು ಮಾಯವಾಗಿ ಅಲ್ಲೆಲ್ಲಾ ಬಡಾವಣೆ ನಿರ್ಮಾಣ ಆಗಿರುವುದು ಬೇಸರದ ಸಂಗತಿ ಎಂದರು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶಾಸಕರಾದ ಸಿ.ಎನ್.ಮಂಜೇಗೌಡ, ವಿವೇಕಾನಂದ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಒಕ್ಕಲಿಗ ಸಂಘದ ಪದಾಧಿಕಾರಿಗಳಾದ ರವಿ, ಚೇತನ್ ಕುಮಾರ್ ಸೇರಿದಂತೆ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಕಲಾಮಂದಿರದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡರು ಗುರುವಾರ ಉದ್ಘಾಟಿಸಿದರು.

ಒಕ್ಕಲಿಗರ ಪ್ರತಿ ಮನೆಯಲ್ಲೂ ಕೆಂಪೇಗೌಡರ ಫೋಟೋ ಇಡಿ

ಸಿ.ಎನ್.ಮಂಜೇಗೌಡ

ಒಕ್ಕಲಿಗ ಸಮುದಾಯದ ಪ್ರತಿ ಮನೆಯಲ್ಲೂ ನಾಡಪ್ರಭು ಕೆಂಪೇಗೌಡರ ಫೋಟೋ ಇಡಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸಲಹೆ ನೀಡಿದರು.

ಪ್ರತಿಯೊಂದು ಜಯಂತಿಯಲ್ಲಿ ಆಯಾ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ. ಆದರೆ ಕೆಂಪೇಗೌಡರ ಜಯಂತಿ ಆಚರಣೆಯಲ್ಲಿ ಬೆರಳೆಣಿಕೆಯಷ್ಟು ಸಂಖ್ಯೆಯ ಜನರಿದ್ದೀರಾ. ಒಕ್ಕಲಿಗ ಸಮುದಾಯದಲ್ಲಿ ಒಗ್ಗಟ್ಟಿನ ಕೊರತೆ ಇದೆ ಎಂಬುದು ಇದನ್ನು ತೋರಿಸುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆಂಪೇಗೌಡರು ಒಕ್ಕಲಿಗ ಸಮುದಾಯಕ್ಕೆ ಮಾತ್ರ ಸೇರಿದವಲ್ಲ. ಜಾತ್ಯಾತೀತವಾಗಿ ಎಲ್ಲಾ ಸಮುದಾಯಕ್ಕೆ ಕೊಡುಗೆ ನೀಡಿದ್ದಾರೆ. ಆದರೆ ಕೆಂಪೇಗೌಡರ ಜಯಂತಿ ವೇಳೆ ಒಕ್ಕಲಿಗ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಸೇರಬೇಕಿತ್ತು ಎಂದು ಅಭಿಪ್ರಾಯಪಟ್ಟರು. ಕೆಂಪೇಗೌಡರು ಬೆಂಗಳೂರಿನಲ್ಲಿ ಬಹಳಷ್ಟು ಕೆರೆಗಳನ್ನು ನಿರ್ಮಾಣ ಮಾಡಿದರು. ಆದರೆ ಬಡಾವಣೆ ನಿರ್ಮಾಣದಿಂದ ಆ ಕೆರೆಗಳು ಮಾಯವಾಗಿವೆ. ಈ ಹಿನ್ನೆಲೆಯಲ್ಲಿ ಕೆಂಪೇಗೌಡರು ಕೊಟ್ಟ ಕೊಡುಗೆಗಳನ್ನು ನಾವು ಉಳಿಸಿಕೊಳ್ಳಬೇಕು ಎಂದು ಮಂಜೇಗೌಡರು ಸಲಹೆ ನೀಡಿದರು.

ನಾಡಪ್ರಭು ಕೆಂಪೇಗೌಡರ ಜಯಂತಿಯ ವರ್ಣರಂಜಿತ ಮೆರವಣಿಗೆ

ನಾಡಪ್ರಭು ಕೆಂಪೇಗೌಡರ 515 ನೇ ಜಯಂತಿ ಆಚರಣೆ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಇಂದು ನಾಡಪ್ರಭು ಕೆಂಪೇಗೌಡರ ವರ್ಣರಂಜಿತ ಮೆರವಣಿಗೆ ನಡೆಯಿತು.

ಮೈಸೂರು ಅರಮನೆಯ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಶಾಸಕರಾದ ಕೆ.ಹರೀಶ್ ಗೌಡ, ಜಿ.ಡಿ.ಹರೀಶ್ ಗೌಡ, ವಿವೇಕಾನಂದ, ಮುಡಾ ಅಧ್ಯಕ್ಷ ಕೆ. ಮರಿಗೌಡ, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಬಿಜೆಪಿ ನಗರಾಧ್ಯಕ್ಷ ಎಲ್. ನಾಗೇಂದ್ರ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, ಒಕ್ಕಲಿಗ ಸಂಘದ ಕಾರ್ಯಾಧ್ಯಕ್ಷ ಗಂಗಾಧರ್, ಕೆ.ವಿ.ಶ್ರೀಧರ್ ಸೇರಿದಂತೆ ಹಲವರು ಹಾಜರಿದ್ದರು. ನವಿಲು ಕುಣಿತ, ಲಿಂಗಧೀರ ಕುಣಿತ, ಡೊಳ್ಳು ಕುಣಿತ, ಬೆದರು ಬೊಂಬೆ, ಯಕ್ಷಗಾನ, ವೀರಗಾಸೆ, ಕಂಸಾಳೆ ಸೇರಿದಂತೆ ಹಲವು ಜಾನಪದ ಕಲಾತಂಡಗಳು ಹಾಗೂ ಗ್ರಾಮೀಣ ಸೊಗಡಿನ ಎತ್ತಿನ ಗಾಡಿಗಳು ಮೆರವಣಿಗೆಗೆ ಮೆರುಗು ನೀಡಿದವು. ನಾಡಪ್ರಭು ಕೆಂಪೇಗೌಡರ ಪ್ರತಿಮೆಯ ರಥದ ಮೆರವಣಿಗೆಯು ಚಾಮರಾಜೇಂದ್ರ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್. ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ, ವಿನೋಬಾ ರಸ್ತೆ ಮೂಲಕ ಕಾರ್ಯಕ್ರಮದ ಸ್ಥಳ ಕಲಾಮಂದಿರ ತಲುಪಿತು. ತುಂತುರು ಮಳೆ ಇದ್ದರೂ ಸಾವಿರಾರು ಜನರು ಉತ್ಸಾಹದಿಂದ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.



ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಗುರುವಾರ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಮೆರವಣಿಗೆಯನ್ನು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಉದ್ಘಾಟಿಸಿದರು





ನಗರದ ಪ್ರಮುಖ ರಸ್ತೆಯಲ್ಲಿ ಜಾನಪದ ಕಲಾ ತಂಡಗಳ ವರ್ಣರಂಜಿತ ಮೆರವಣಿಗೆಯನ್ನು ಕಾಣಬಹುದು.

ಕರ್ನಾಟಕಕ್ಕೆ ನಾಡಪ್ರಭು ವಿಶ್ವಮಾನ್ಯತೆ ತಂದುಕೊಟ್ಟರು: ಸಿಪಿಕೆ

ಮೈಸೂರು, ಜೂ. 27- ಕರ್ನಾಟಕಕ್ಕೆ ನಾಡಪ್ರಭು ಕೆಂಪೇಗೌಡರು ವಿಶ್ವಮಾನ್ಯತೆ ತಂದು ಕೊಟ್ಟವರು ಎಂದು ಒಕ್ಕಲಿಗರ ಮಹಾಸಭಾದ ಗೌರವಾಧ್ಯಕ್ಷ ಹಾಗೂ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅಭಿಪ್ರಾಯಪಟ್ಟರು.

ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ಹಾಗೂ ಅಲೆಯನ್ಸ್ ಕ್ಲಬ್ ಆಫ್ ಮೈಸೂರ್ ನಾಲ್ವಡಿ ವತಿಯಿಂದ ಮೈಸೂರಿನ ಶಿವರಾಮಪೇಟೆಯಲ್ಲಿರುವ ಸಂಘದ ಕಚೇರಿಯಲ್ಲಿ ನಾಡಪ್ರಭು ಕೆಂಪೇಗೌಡರ 515ನೇ ಜನ್ಮದಿನಾಚರಣೆಯಲ್ಲಿ ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡುತ್ತಾ, ಕೆಂಪೇಗೌಡರು ಯುದ್ಧಪ್ರಿಯರಾಗಿರಲಿಲ್ಲ, ಧರ್ಮಪ್ರಭುವಾಗಿದ್ದರು. ಸಮಾಜ ಸೇವೆಯಿಂದಲೇ ನಾಡಿನಾದ್ಯಂತ ಮನೆಮಾತಾದವರು. ಬೆಂಗಳೂರು ಇಂದು ಅಪಾರ ಸಂಪತ್ತನ್ನು ಹೊಂದಿ, ರಾಜಧಾನಿಯಾಗಿ ಕೋಟಿ ಜನರಿಗೆ ನೆರಳು ನೀಡಲು ಕೆಂಪೇಗೌಡರ ಶ್ರಮ ಕಾರಣವಾಗಿದೆ. ರಾಜ್ಯದ ಜನತೆ ಅವರನ್ನು ಎಂದಿಗೂ ಮರೆಯಬಾರದು. ಕೆಂಪೇಗೌಡರು ಶ್ರೇಷ್ಠ ಸಾಧಕರು, ಉತ್ತಮ ರಾಜತಾಂತ್ರಿಕರು ಆಗಿದ್ದರು ಎಂದರು.

ಅಲಯನ್ಸ್ ಕ್ಲಬ್ ಆಫ್ ಇಂಟರ್‌ನ್ಯಾಷನಲ್ ನಿರ್ದೇಶಕ ಡಾ.ನಾಗ ರಾಜ ವಿ.ಭೈರಿ ಮಾತನಾಡಿ, ನಾಡಪ್ರಭು, 1537ರಲ್ಲಿ ಬೆಂಗಳೂರಿಗೆ ಅಡಿಗಲ್ಲು ಇಟ್ಟರು. ಇನ್ನು 15 ವರ್ಷ ಕಳೆದರೆ ಬೆಂಗಳೂರಿಗೆ 500 ವರ್ಷ ತುಂಬುತ್ತದೆ. ಅವತ್ತಿನ ಕಾಲದಲ್ಲಿ ಎಲ್ಲಾ ವರ್ಗದ ದುಡಿಮೆ ಉದ್ಯಮಗಳಿಗೆ ಪೇಟೆಗಳನ್ನು ನಿರ್ಮಿಸಿದರು. ಆಗಿನ ಕಾಲದಲ್ಲಿ ಗಡಿಗಳನ್ನು ಗುರುತಿಸಿ, ಸಾವಿರಾರು ಕೆರೆ-ಕಟ್ಟೆಗಳನ್ನು ನಿರ್ಮಿಸಿದರು ಎಂದರು.

ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಮಾತನಾಡಿ, ಕಳೆದ ಮೂರ್ನಾಲ್ಕು ವರ್ಷಗಳಿಂದ ಆರಂಭವಾದ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ನಾಡಪ್ರಭು ಕೆಂಪೇಗೌಡರ ಸಾಧನೆಗಳನ್ನು ಮುಂದಿನ ಪೀಳಿಗೆಗೆ ತಿಳಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದರು.

ಕಸಾಪ ನಿಕಟಪೂರ್ವ ಅಧ್ಯಕ್ಷ ಚಂದ್ರಶೇಖರ್, ಮಹಾಸಭಾದ ಪ್ರಧಾನ ಕಾರ್ಯದರ್ಶಿ ಡಾ. ಇ.ಸಿ. ನಿಂಗರಾಜ್‌ಗೌಡ, ಅಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಮೈಸೂರು ಜಿಲ್ಲಾ ರಾಜ್ಯಪಾಲರಾದ ಸಿರಿ ಬಾಲು ಇತರರು ಮಾತನಾಡಿದರು. ಕಾರ್ಯಕ್ರಮದಲ್ಲಿ ಮಹಾಸಭಾದ ಕೋಶಾಧ್ಯಕ್ಷ ಎಂ.ಎನ್.ಚಂದ್ರಶೇಖರ್, ಎರಡೂ ಸಂಸ್ಥೆಗಳ ಅಧ್ಯಕ್ಷ ಬೆಟ್ಟೇಗೌಡ, ಉಪಾಧ್ಯಕ್ಷೆ ಲಕ್ಷ್ಮಿದೇವಿ, ಮೈಸೂರು ಜಿಲ್ಲಾ ಜೆಡಿಎಸ್ ಅಧ್ಯಕ್ಷ ನರಸಿಂಹಸ್ವಾಮಿ, ಮಹಾಸಭಾ ನಿರ್ದೇಶಕರಾದ ರವಿಕುಮಾರ್, ಅನಂತನಾರಾಯಣ, ಅಣ್ಣಾಜಿಗೌಡ, ಸಮಾಜ ಸೇವಕ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ ಪಡುವಾರಹಳ್ಳಿ ರಾಮಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.



ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ಹಾಗೂ ಅಲಯನ್ಸ್ ಕ್ಲಬ್ ಆಫ್ ಮೈಸೂರ್ ನಾಲ್ವಡಿ ವತಿಯಿಂದ ಶಿವರಾಮಪೇಟೆಯಲ್ಲಿರುವ ಸಂಘದ ಕಚೇರಿಯಲ್ಲಿ ನಾಡಪ್ರಭು ಕೆಂಪೇಗೌಡರ 515ನೇ ಜನ್ಮದಿನ ಆಚರಿಸಲಾಯಿತು.

ಗಣೇಶಪುರ ಗ್ರಾಮಕ್ಕೆ ಮೈಸೂರು ಜಿಪಂ ಸಿಇಓ ಭೇಟಿ


ಮೈಸೂರು, ಜೂ.27- ಮೈಸೂರು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಕೆ.ಎಂ.ಗಾಯತ್ರಿ ಕೃಷಿ ಇಲಾಖೆಯ ದ್ವೈಮಾಸಿಕ ಕಾರ್ಯಾಗಾರದ ಕ್ಷೇತ್ರ ಭೇಟಿಗಾಗಿ ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಹೋಬಳಿಯ ಗಣೇಶಪುರ ಗ್ರಾಮದ ಪ್ರಗತಿಪರ ರೈತೋದ್ಯಮಿ ಜಯಶಂಕರ ಅವರ ಕ್ಷೇತ್ರಕ್ಕೆ ಭೇಟಿ ನೀಡಿದರು. ಪ್ರಗತಿಪರ ರೈತೋದ್ಯಮಿಯಾದ ಜಯಶಂಕರ ಅವರು ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಔಪಚಾರೀಕರಣ ಯೋಜನೆಯಡಿ ರೂ.14,26,325 ಗಳ ಸಹಾಯಧನದೊಂದಿಗೆ ಒಟ್ಟು ಯೋಜನಾ ವೆಚ್ಚ ರೂ. 28,52,650 ಗಳ ಜೇನುತುಪ್ಪ ಸಂಸ್ಕರಣಾ ಘಟಕದ ಜೊತೆಗೆ ವಿವಿಧ ರೀತಿಯ ಎಣ್ಣೆ ತೆಗೆಯುವ ಘಟಕವನ್ನು ಅಳವಡಿಸಿಕೊಂಡಿದ್ದು, ಉತ್ತಮ ಲಾಭವನ್ನು ಗಳಿಸುತ್ತಿದ್ದಾರೆ. ಸದರಿ ರೈತರ ಉದ್ಯಮಶೀಲತೆ ಮತ್ತು ಪ್ರಗತಿಯನ್ನು ಕಂಡ ಸಿಇಓ ಗಾಯತ್ರಿ ಉತ್ತಮ ಸಲಹೆಗಳನ್ನು ನೀಡಿದರು. ಕ್ಷೇತ್ರ ಭೇಟಿಗೆ ಮೈಸೂರಿನ ಜಂಟಿ ಕೃಷಿ ನಿರ್ದೇಶಕರು, ಮೈಸೂರು ಉಪ ವಿಭಾಗದ ಉಪ ಕೃಷಿ ನಿರ್ದೇಶಕರು-1, ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ವಿಸ್ತರಣಾ ನಿರ್ದೇಶಕರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಶುಕ್ರವಾರ 28 ಜೂನ್ 2024

ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆ

ಕೆಆರ್‌ಎಸ್‌ನಲ್ಲಿ ಒಳಹರಿವು ಹೆಚ್ಚಳ

ನೀರಿನ ಮಟ್ಟ 85ರಿಂದ 88.40 ಅಡಿಗೆ ಏರಿಕೆ



ಮಂಡ್ಯ,ಜೂ.27– ಕಾವೇರಿ ನದಿಯ ಉಗಮ ಸ್ಥಾನ ಕೊಡಗು ಜಿಲ್ಲೆಯಲ್ಲಿ ವ್ಯಾಪಕ ಮಳೆ ಸುರಿಯುತ್ತಿರುವುದರಿಂದ ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರ ಅಣೆಕಟ್ಟೆಯ ಒಳ ಹರಿವಿನಲ್ಲಿ ಭಾರಿ ಹೆಚ್ಚಳವಾಗಿದೆ.

ಕಳೆದ ಮೂರು ದಿನಗಳಿಂದ 85 ಅಡಿ ಆಸುಪಾಸಿನಲ್ಲಿದ್ದ ಕೇಆರ್‌ಎಸ್‌ನಲ್ಲಿ ಇಂದು 88.40ಕ್ಕೇರಿದ್ದು ರೈತರಲ್ಲಿ ಮಂದ ಹಾಸ ಮೂಡಿಸಿದೆ. ಅದರಂತೆ ಒಳ ಹರಿವು 3856ಕ್ಕೇರಿದೆ. ಮಳೆಯ ಪರಿಣಾಮ ಇದೇ ರೀತಿ ಮುಂದುವರೆದರೆ ಜುಲೈ ಅಂತ್ಯದ ವೇಳೆಗೆ ಅಣೆಕಟ್ಟೆ ಭರ್ತಿಯಾಗುವ ಸಾಧ್ಯತೆ ಇದೆ.

ಕಳೆದ ಹಲವು ವರ್ಷಗಳಿಂದ ಬರದ ಹಿನ್ನೆಲೆಯಲ್ಲಿ ಸಮಯಕ್ಕೆ ಸರಿಯಾಗಿ ಅಣೆಕಟ್ಟೆ ಭರ್ತಿಯಾಗುತ್ತಿರಲಿಲ್ಲ. ಈ ವರ್ಷವಂತೂ ಬರ ಬಹಳ ಕಾಡಿದ್ದ ಹಿನ್ನೆಲೆಯಲ್ಲಿ ಅಣೆಕಟ್ಟೆ ಭರ್ತಿಯಾಗುವುದು ಅನುಮಾನ ಎಂದು ಹೇಳಲಾಗಿತ್ತು. ಆದರೆ ತಲಕಾವೇರಿ, ಮಡಿಕೇರಿ ಹಾಗೂ ಕಾವೇರಿ ಜಲಾನಯನ ಪ್ರದೇಶದಲ್ಲಿ ಕಳೆದ ನಾಲ್ಕೈದು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿರುವ ಪರಿಣಾಮ ಅಣೆಕಟ್ಟೆ ಭರ್ತಿಯಾಗುವ ಲಕ್ಷಣಗಳು ಕಾಣುತ್ತಿದೆ.

ಸಮರ್ಪಕ ರೀತಿಯ ನೀರಿಲ್ಲದೇ, ಜೊತೆಗೆ ತಮಿಳುನಾಡಿಗೆ ನೀರು ಹರಿಸಿದ ಪರಿಣಾಮ ಅಣೆಕಟ್ಟೆ ಖಾಲಿಯಾಗಿ ಬೆಳೆಯುವ ಬೆಳೆಗೂ ನೀರಿಲ್ಲದೇ ಭಾರಿ ಸಮಸ್ಯೆ ಉಂಟಾಗಿತ್ತು ಅಷ್ಟೇ ಅಲ್ಲದೇ ಕುಡಿಯುವ ನೀರಿಗೂ ತತ್ವಾರ ಉಂಟಾಗಿ, ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಲ್ಲದೇ ಜನರ ಪರಿತಪಿಸುವಂತಾಗಿತ್ತು.

ಇದೀಗ 88 ಅಡಿಯಷ್ಟು ನೀರಿನ ಪ್ರಮಾಣ ಏರಿರುವುದರಿಂದ ಕೆಆರ್‌ಎಸ್ ಭರ್ತಿಯಾಗುವ ಮುನ್ಸೂಚನೆ ಸಿಕ್ಕಿದೆ. ಒಂದು ವೇಳೆ ಅಣೆಕಟ್ಟೆ ಭರ್ತಿಯಾದರೆ ಮಂಡ್ಯ ಜಿಲ್ಲೆಯ ಕೃಷಿ ಬೆಳೆಗಳಿಗೆ, ಮಂಡ್ಯ, ಮೈಸೂರು, ರಾಮನಗರ ಹಾಗೂ ಬೆಂಗಳೂರಿನ ಜನಕ್ಕೆ ಕುಡಿಯುವ ನೀರಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂಬುದು ಲೆಕ್ಕಾಚಾರವಾಗಿದೆ.

ಪ್ರಸ್ತುತ ಅಣೆಕಟ್ಟೆಯಲ್ಲಿ 88.40 ಅಡಿಯಷ್ಟು ನೀರಿದ್ದು, ಒಳ ಅರಿವು 3856 ಕ್ಯೂಸೆಕ್ ಇದ್ದು, ಹೊರ ಅರಿವು 472 ಕ್ಯೂಸೆಕ್ ಇದೆ. ಒಂದು ವೇಳೆ ಜುಲೈ ಅಂತ್ಯದ ವೇಳೆಗೆ ಅಣೆಕಟ್ಟೆ ಭರ್ತಿಯಾದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಗಿನ ಅರ್ಪಿಸುವ ಸಾಧ್ಯತೆ ಇದೆ.

ವಿದ್ಯುತ್ ಸ್ಪರ್ಶದಿಂದ ರೈತ ಸಾವು



ಪಾಂಡವಪುರ, ಜೂ.27– ಜಮೀನಿನ ಬಳಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ವಿದ್ಯುತ್ ತಂತಿ ತಗುಲಿ ರೈತ ನೋರ್ವ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಅಮೃತಿ ಗ್ರಾಮದಲ್ಲಿ ಗುರುವಾರ ಬೆಳಿಗ್ಗೆ ನಡೆದಿದೆ.

ಅಮೃತಿ ಗ್ರಾಮದ ಕುಮಾರ್(40) ಮೃತ ರೈತ. ಕುಮಾರ್ ಅವರು ಗುರುವಾರ ಬೆಳಿಗ್ಗೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದ್ದಾರೆ. ವಿದ್ಯುತ್ ಸ್ಪರ್ಶವಾಗಿ ಸ್ಥಳದಲ್ಲಿಯೇ ರೈತ ಕುಮಾರ್ ಸಾವನ್ನಪ್ಪಿದ್ದಾರೆ. ಜಮೀನಿನ ಬಳಿ ಹೋದಂತಹ ಅಕ್ಕಪಕ್ಕದ ರೈತರು ಕುಮಾರ್ ಮೃತಪಟ್ಟಿರುವುದನ್ನು ನೋಡಿದ್ದಾರೆ. ಬಳಿಕ ಮೃತ ದೇಹವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದ್ದಾರೆ.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಬಳಿಗೆ ಆಗಮಿಸಿದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್.ತ್ಯಾಗರಾಜು ಮೃತ ಕುಟುಂಬಸ್ಥರಿಗೆ ಸಾಂತ್ವಾನ ಹೇಳಿದರು. ಬಳಿಕ ಮೃತ ರೈತ ಕುಮಾರ್ ಅವರು ಕುಟುಂಬಕ್ಕೆ ಸೂಕ್ತಪರಿಹಾರ ದೊರಕಿಸಿ ಕೊಡುವುದಾಗಿ ಒತ್ತಾಯಿಸಿದ್ದರು.

ಮೃತ ಕುಮಾರ್ ಅವರಿಗೆ ಪತ್ನಿ ರೇಖಾ, ಇಬ್ಬರು ಮಕ್ಕಳಿದ್ದಾರೆ. ಮೇಲುಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಆರ್‌ಎಸ್ ಹಿನ್ನೀರಿನಲ್ಲಿ ಅತಿಕ್ರಮಣ ತೆರವು

ತಡೆಗೋಡೆ ನಿರ್ಮಿಸಲು ತೆರೆದಿದ್ದ 100 ಅಡಿ ಗುಂಡಿ ಮುಚ್ಚಿಸಿದ ಅಧಿಕಾರಿಗಳು



ಶ್ರೀರಂಗಪಟ್ಟಣ,ಜೂ.27– ಕೆಆರ್‌ಎಸ್ ಹಿನ್ನಿರಿನಲ್ಲಿನ ನದಿ ಪಾತ್ರವನ್ನು ಒತ್ತುವರಿ ಮಾಡಿಕೊಂಡು ಅಕ್ರಮವಾಗಿ ತಡೆಗೋಡೆ ನಿರ್ಮಿಸಲು ತೆಗೆದಿದ್ದ 100 ಅಡಿ ಉದ್ದದ ಗುಂಡಿ ಯನ್ನು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಬುಧವಾರ ಸಂಜೆ ಮುಚ್ಚಿಸಿ ಅತಿಕ್ರಮಣ ತೆರವುಗೊಳಿಸಿದ್ದಾರೆ.

ಕೃಷ್ಣರಾಜಸಾಗರ ಅಣೆಕಟ್ಟೆಯ ಉತ್ತರ ಭಾಗದ ಜಮೀನಿನ ಮಾಲೀಕ ತನ್ನ ಜಮೀನಿಗೆ ಸೇರಿದಂತೆ ಇರುವ ಕೆ.ಆರ್. ಸಾಗರ ಹಿನ್ನಿರಿನ ಪಾತ್ರದ ಸುಮಾರು 30 ಅಡಿ ಉದ್ದ 100 ಅಡಿ ಅಗಲದಷ್ಟು ಜಾಗ ತನಗೆ ಸೇರಿದ್ದು ಎಂದು ಅಕ್ರಮವಾಗಿ ಆಕ್ರಮಿಸಿ ಗುಂಡಿ ತೋಡಿ ಕಲ್ಲುಗಳನ್ನು ಹಾಕಿ ತಡೆಗೋಡೆ ನಿರ್ಮಿಸುವ ಕಾಮಗಾರಿ ಮಾಡುತ್ತಿರುವ ಬಗ್ಗೆ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿದ ಕಾರ್ಯಪಾಲಕ ಅಭಿಯಂತರ ಜಯಂತ್ ಕೆ.ಆರ್.ಸಾಗರ ಹಿನ್ನರಿನಲ್ಲಿ ಯಾವುದೇ ಕಾಮಗಾರಿ ಮಾಡದಂತೆ ಸೂಚಿಸಿದ್ದರು.

ನಮ್ಮ ಇಲಾಖೆಗೆ ತಿಳಿಸದೆ ಕೇವಲ ಏಕ ಪಕ್ಷಿಯವಾಗಿ ಸರ್ವೇ ನಡೆಸಲಾಗಿದೆ, ಜಂಟಿ ಸರ್ವೇ ನಡೆಸುವ ತನಕ ಕಾನೂನು ಮೀರಿ ಕೆಲಸ ಮಾಡಿದರೆ ಕ್ರಮ ಜರುಗಿಸುವುದಾಗಿ ತಿಳಿಸಿ ಎಚ್ಚರಿಕೆ ನೀಡಿದ್ದರು.

ಸುದ್ದಿವಾಹಿನಿಗಳಲ್ಲಿ ಪ್ರಕಟವಾದ ಹಿನ್ನೆಲೆಯಲ್ಲಿ ಅಕ್ರಮ ತಡೆಗೋಡೆ ನಿರ್ಮಾಣ ಕಾಮಗಾರಿ ಬಗ್ಗೆ ಮಾಹಿತಿ ಪಡೆದ ಕಾವೇರಿ ನೀರಾವರಿ ನಿಗಮದ ಇಲಾಖೆ ಎಂ.ಡಿ ಮತ್ತು ಹಿರಿಯ ಅಧಿಕಾರಿಗಳು ಹಿನ್ನಿರಿನಲ್ಲಿ ಗುಂಡಿ ತೋಡಿರುವರ ವಿರುದ್ದ ಕ್ರಮ ಕೈಗೊಳ್ಳುವಂತೆ ಹಾಗೂ ಗುಂಡಿ ಮುಚ್ಚಿಸಲು ಸೂಚನೆ ನೀಡಿದದ್ದರ ಹಿನ್ನೆಲೆಯಲ್ಲಿ ಕೆ.ಆರ್.ಸಾಗರ ಕಾ.ನೀ. ನಿಗಮ ಅಭಿಯಂತರ ಸುರೇಶ್ ಬಾಬು ನೇತೃತ್ವದಲ್ಲಿ ಸುಮಾರು 100 ಅಡಿಯಷ್ಟು ತೋಡಿದ್ದ ಗುಂಡಿಯನ್ನು ಜೆಸಿಬಿ ಮೂಲಕ ಮಣ್ಣು ಹಾಕಿ ಮುಚ್ಚಿಸಲಾಯಿತು.

ಇದೇ ಸಂದರ್ಭದಲ್ಲಿ ಗುಂಡಿ ತೋಡಿದ್ದ ಖಾಸಗಿ ಜಮೀನು ಮಾಲೀಕರಿಗೆ ಸರ್ವೇ ಇಲಾಖೆಯಿಂದ ಜಂಟಿ ಸರ್ವೇ ನಡೆಸಿದಾಗ ಕಾನೂನು ಉಲ್ಲಂಘನೆಯಾಗಿರುವುದು ಕಂಡು ಬಂದಲ್ಲಿ ಕಠಿಣ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಲಾಯಿತು.

ಜಿಲ್ಲೆಯಾದ್ಯಂತ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ

ಗುರುವಾರ ನಾಡಪ್ರಭು ಕೆಂಪೇಗೌಡರ 515ನೇ ಜಯಂತ್ಯುತ್ಸವ. ಮಂಡ್ಯ ಜಿಲ್ಲೆಯ ವಿವಿಧೆಡೆ ತಾಲೂಕು ಆಡಳಿತ ಮತ್ತು ಸಂಘ–ಸಂಸ್ಥೆಗಳು ಅವರ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಿದವು. ಈ ವೇಳೆ ಕೆಂಪೇಗೌಡರ ದೂರದೃಷ್ಟಿಯ ಕಾರ್ಯಕ್ರಮಗಳನ್ನು ಸ್ಮರಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು.

ಪಾಂಡವಪುರದಲ್ಲಿ ವಿಜೃಂಭಣೆಯಿಂದ ಆಚರಣೆ



ಪಾಂಡವಪುರ, ಜೂ.27– ತಾಲೂಕು ಆಡಳಿತ ಹಾಗೂ ಅಖಿಲ ಕರ್ನಾಟಕ ಒಕ್ಕಲಿಗರ ಒಕ್ಕೂಟ ಮತ್ತು ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಪಟ್ಟಣದ ಐದುದೀಪ ಹಾಗೂ ತಾಪಂ ಕಚೇರಿ ಆವರಣದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ವಿಜೃಂಭಣೆದಿಂದ ಆಚರಣೆ ಮಾಡಲಾಯಿತು.

ಐದು ದೀಪ ವೃತ್ತದಲ್ಲಿ ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸೇರಿದಂತೆ ಅನೇಕ ಗಣ್ಯರು ಪುಷ್ಪಾರ್ಚನೆ ಮಾಡಿದರು. ನಂತರ ತಾಪಂ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ವನ್ನು ತಹಶೀಲ್ದಾರ್ ಶ್ರೇಯಸ್ ಉದ್ಘಾಟಿಸಿದರು.

ತಹಶೀಲ್ದಾರ್ ಶ್ರೇಯಸ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್.ತ್ಯಾಗರಾಜು, ಸಮಾಜ ಸೇವಕ ಬಿ.ರೇವಣ್ಣ ಮಾತನಾಡಿದರು. ಸಾಹಿತಿ ಡಾ.ಬೋರೇಗೌಡ ಚಿಕ್ಕಮರಳಿ ಅವರು ನಾಡಪ್ರಭು ಕೆಂಪೇಗೌಡರ ಕುರಿತು ಪ್ರಧಾನ ಭಾಷಣ ಮಾಡಿದರು. ಕೆಂಪೇಗೌಡರ ಕುರಿತು ಪ್ರಬಂಧ ಬರೆದ ವಿದ್ಯಾರ್ಥಿಗಳು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಹಾಗೂ ಸರಕಾರಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ಸಾಧಕರನ್ನು ಅಭಿನಂಧಿಸಲಾಯಿತು.

ಈ ಸಂದರ್ಭದಲ್ಲಿ ತಾಪಂ ಇಓ ಲೋಕೇಶ್ ಮೂರ್ತಿ, ಬಿಇಓ ಚಂದ್ರಶೇಖರ್, ಸರ್ಕಲ್ ಇನ್ಸ್‌ಪೆಕ್ಟರ್ ವಿವೇಕ್, ಪುರಸಭೆ ಮುಖ್ಯಾಧಿಕಾರಿ ವೀಣಾ, ಅಖಿಲ ಕರ್ನಾಟಕ ಒಕ್ಕಲಿಗರ ಒಕ್ಕೂಟದ ಅಧ್ಯಕ್ಷ ಯೋಗೇಶ್, ಒಕ್ಕಲಿಗರ ವಿಕಾಸ ವೇದಿಕೆ ಅಧ್ಯಕ್ಷ ಜನತಾಬಂಡಾರ ರಾಮಕೃಷ್ಣೇಗೌಡ ಉಪಸ್ಥಿತರಿದ್ದರು.

ಕೆಂಪೇಗೌಡರ ದೂರದೃಷ್ಟಿಯಿಂದ ಬೆಂಗಳೂರು ಬೆಳೆದಿದೆ



ಮಳವಳ್ಳಿ,ಜೂ.27– ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ನಾಡಪ್ರಭು ಕೆಂಪೇಗೌಡರುವರ 515ನೇ ಜಯಂತೋತ್ಸವ ಕಾರ್ಯಕ್ರಮವು ಮಳವಳ್ಳಿ ಪಟ್ಟಣದ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ನಡೆಯಿತು.

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ನಾಡಪ್ರಭು ಕೆಂಪೇಗೌಡರ ದೂರದೃಷ್ಠಿಯ ಫಲದಿಂದಲೇ ಬೆಂಗಳೂರು ಇಷ್ಟೊಂದು ದೊಡ್ಡ ನಗರವಾಗಿ ಬೆಳೆಯಲು ಕಾರಣವಾಗಿದೆ, ಎಲ್ಲಾ ಸಮುದಾಯದವರಿಗೆ ಉದ್ಯೋಗ ಹಾಗೂ ಮಾರುಕಟ್ಟೆ ಕಲ್ಪಿಸಬೇಕೆಂದ ಉದ್ದೇಶದಿಂದ ಪೇಟೆಗಳನ್ನು ನಿರ್ಮಿಸಿದರು. ಕೆಂಪೇಗೌಡರ ಅದರ್ಶ ಗುಣಗಳನ್ನು ಪ್ರತಿಯೊಬ್ಬರು ಮೈಗೂಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಶಿಕ್ಷಣ ಇಲಾಖೆಯ ಸಿದ್ದರಾಜು ಮಾತನಾಡಿ, ನಾಡಪ್ರಭು ಕೆಂಪೇಗೌಡರು ಕೆರೆ ಕಟ್ಟೆಗಳ ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡಿದರು. ದೊಡ್ಡ ನಗರವನ್ನಾಗಿ ಸ್ಥಾಪಿಸಿ ಎಲ್ಲಾ ಸಮುದಾಯದ ಜನರ ಹಿತ ಕಾಯುವಲ್ಲಿ ಬದ್ಧರಾಗಿದ್ದರು. ಅವರ ಅಪಾರ ಸಾಧನೆ ಮತ್ತು ಸೇವೆಯಿಂದಾಗಿ ಕೆಂಪೇಗೌಡರು ಎಂದೆಂದಿಗೂ ಜೀವಂತವಾಗಿರುತ್ತಾರೆಂದು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರು ಹಾಗೂ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಲೋಕೇಶ್, ಡಿವೈಎಸ್ಪಿ ಕೃಷ್ಣಪ್ಪ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಕಾರ್ಯಕ್ರಮಕ್ಕೂ ಮುನ್ನಾ ನಾಡ ಪ್ರಭು ಕೆಂಪೇಗೌಡರ ಭಾವಚಿತ್ರವನ್ನು ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿ ಜಾನಪದ ಕಲಾ ಮೇಳದೊಂದಿಗೆ ಮೆರವಣಿಗೆ ನಡೆಸಲಾಯಿತು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ವಿವಿಧ ಸಂಘ ಸಂಸ್ಥೆ ಆಶ್ರಯದ ಅಡಿಯಲ್ಲಿ ರಕ್ತದಾನ ಶಿಬಿರ ನಡೆಯಿತು.

ಜೂ.30ರಂದು ಕೆಂಪೇಗೌಡ ಜಯಂತಿ

ಮಂಡ್ಯ,ಜೂ.27– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಂಡ್ಯ ನಗರಸಭೆ ಸಂಯುಕ್ತಾಶ್ರಯದಲ್ಲಿ ನಾಡಪ್ರಭು ಕೆಂಪೇಗೌಡರ 515 ಜಯಂತಿ ಕಾರ್ಯಕ್ರಮವನ್ನು ಮಂಡ್ಯ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜೂನ್ 30ರಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ರವಿಕುಮಾರ್ ಗೌಡ ತಿಳಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಶಿಕ್ಷಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ ಅವರ ದಿವ್ಯ ಸಾನಿಧ್ಯ ಹಾಗೂ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಘನ ಉಪಸ್ಥಿತಿಯಲ್ಲಿ ಕಾರ್ಯಕ್ರಮವನ್ನು ಕೃಷಿ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಲಿದ್ದಾರೆ ಎಂದರು.

ನಕ್ಷೆ ಉಲ್ಲಂಘಿಸಿ ನಿರ್ಮಿಸಿದ ಮನೆಗಳ ಬಡವರಿಗೆ ನೀಡುವ ಕಾನೂನು ತರಬೇಕು

ಮೈಸೂರು, ಜೂ.27(ಆರ್‌ಕೆ)– ಅನುಮೋದನೆಗೊಂಡ ನಕ್ಷೆ ಉಲ್ಲಂಘಿಸಿ ಅಪಾರ್ಟ್‌ಮೆಂಟ್‌ಗಳಲ್ಲಿ ಹೆಚ್ಚುವರಿಯಾಗಿ ನಿರ್ಮಿಸಿದ ಮನೆಗಳನ್ನು ಸರ್ಕಾರದ ವಸತಿ ಯೋಜನೆಯಡಿ ಬಡವರಿಗೆ ಬಿಟ್ಟುಕೊಡಬೇಕೆಂಬ ಕಾನೂನು ಜಾರಿಗೆ ತಂದರೆ, ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಬ್ರೇಕ್ ಹಾಕಬಹುದು ಎಂದು ಪ್ರಜ್ಞಾವಂತ ನಾಗರಿಕರು ಅಭಿಪ್ರಾಯಪಟ್ಟಿದ್ದಾರೆ.

5 ಮಹಡಿಗಳಲ್ಲಿ ಇಂತಿಷ್ಟು ಮನೆಗಳನ್ನು ನಿರ್ಮಾಣ ಮಾಡುತ್ತೇವೆಂದು ನಕ್ಷೆ ತಯಾರಿಸಿ 6 ಅಥವಾ 7 ಮಹಡಿ ಕಟ್ಟಡ ನಿರ್ಮಿಸಿದರೆ ಸಂಬಂಧಪಟ್ಟ ಪ್ರಾಧಿಕಾರಿಗಳು ಅಂತಹ ಕಟ್ಟಡಗಳಿಗೆ ಸಿಆರ್ ಕೊಡುವುದಿಲ್ಲ. ಆದರೆ, ಅಷ್ಟರಲ್ಲಿ ಎಲ್ಲಾ ಮಹಡಿಗಳ ಮನೆಗಳನ್ನೂ ಮಾರಾಟ ಮಾಡಿರುತ್ತಾರೆ. ಸಿಆರ್ ಇಲ್ಲದ ಕಾರಣ ಇಡೀ ಅಪಾರ್ಟ್‌ಮೆಂಟ್‌ನ ಮನೆಯವರೆಲ್ಲಾ ದುಪ್ಪಟ್ಟು ಆಸ್ತಿ ತೆರಿಗೆ ಪಾವತಿಸಬೇಕಾಗುತ್ತದೆ. ಅಮಾಯಕರಿಗೆ ಇದರಿಂದ ತೀವ್ರ ತೊಂದರೆಯಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ನಿಯಮ ಉಲ್ಲಂಘಿಸಿ ನಿರ್ಮಾಣ ಮಾಡಿದ ಕಟ್ಟಡವನ್ನು ಸುಲಭವಾಗಿ ಕೆಡವಲು ಸಾಧ್ಯವಿಲ್ಲ. ಆದರೆ, ಪ್ರತೀ ವರ್ಷ ಎರಡು ಪಟ್ಟು ಆಸ್ತಿ ತೆರಿಗೆಯನ್ನು ಪಾವತಿಸಲೇಬೇಕು. ಆದ್ದರಿಂದ ನಕ್ಷೆ ಉಲ್ಲಂಘಿಸಿ ಹೆಚ್ಚುವರಿ ಮಹಡಿಗಳಲ್ಲಿ ನಿರ್ಮಿಸಿದ ಅಷ್ಟೂ ಮನೆಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು. ಅವುಗಳನ್ನು ಸೂರಿಲ್ಲದ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡುವ ನೀತಿಯನ್ನು ಜಾರಿಗೊಳಿಸಿದ್ದಲ್ಲಿ ಯಾರೂ ಹೆಚ್ಚುವರಿ ಮಹಡಿಗಳನ್ನು ನಿರ್ಮಿಸುವ ಸಾಹಸಕ್ಕೆ ಕೈಹಾಕುವುದಿಲ್ಲ ಎಂದು ರಿಯಲ್ ಎಸ್ಟೇಟ್ ಕ್ಷೇತ್ರದ ಹಲವರು ಅಭಿಪ್ರಾಯ ಪಟ್ಟಿದ್ದಾರೆ. ನಿಯಮ ಉಲ್ಲಂಘಿಸಿ ದುಬಾರಿ ವೆಚ್ಚದಲ್ಲಿ ನಿರ್ಮಿಸಿದ ಹೆಚ್ಚುವರಿ ಮನೆಗಳನ್ನು ಸರ್ಕಾರದ ವಸತಿ ಯೋಜನೆಗೆ ಕೊಟ್ಟರೆ ಇಡೀ ಅಪಾರ್ಟ್‌ಮೆಂಟ್‌ನ ಸ್ವರೂಪವೇ ಬದಲಾಗಿ ಕಡೆಗೆ ಅಲ್ಲಿ ಫ್ಲಾಟ್ ಖರೀದಿಸಲು ಯಾರೂ ಮುಂದೆ ಬರುವುದಿಲ್ಲ ಎಂಬ ಭಯದಿಂದ ಅನುಮೋದಿತ ನಕ್ಷೆಗನುಗುಣವಾಗಿಯೇ ಅಪಾರ್ಟ್‌ಮೆಂಟ್, ಗುಂಪು ಮನೆಗಳನ್ನು ಬಿಲ್ಡರ್‌ಗಳು ನಿರ್ಮಿಸುತ್ತಾರೆ ಎಂಬ ಸಾಮಾನ್ಯ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಒಂದನೇ ಪುಟದಿಂದ

ದುಪ್ಪಟ್ಟು ಆಸ್ತಿ ತೆರಿಗೆ ಬರೆ!

ಯೋಜನೆಯಡಿ ತೆರಿಗೆ ಪಾವತಿಸುವಾಗ ಸಿಆರ್ ಇಲ್ಲದ ಆಸ್ತಿಗಳಿಗೆ ಡಬಲ್ ಟ್ಯಾಕ್ಸ್ ವಿಧಿಸಲಾಗುತ್ತದೆ. ಇದಕ್ಕೆ ಯಾರು ಹೊಣೆ ಎಂದು ಶ್ರೀವತ್ಸ ಪ್ರಶ್ನಿಸಿದ್ದಾರೆ.

ಸಿಟಿ ಪ್ಲಾನಿಂಗ್ ನಿಯಮ ಉಲ್ಲಂಘನೆ: ನಗರ ಯೋಜನಾ ನಿಯಮ ಮತ್ತು ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಕಾಯ್ದೆಯಂತೆ ಯಾವುದೇ ರೀತಿಯ ಕಟ್ಟಡ ನಿರ್ಮಿಸಬೇಕಾದರೆ, ಮೊದಲು ಲಭ್ಯವಿರುವ ಜಾಗದಲ್ಲಿ ಉದ್ದೇಶಿತ ಕಟ್ಟಡದ ನಕ್ಷೆಗೆ ಸಂಬಂಧಪಟ್ಟ ಪಾಲಿಕೆ, ಪ್ರಾಧಿಕಾರ, ಪಟ್ಟಣ ಪಂಚಾಯ್ತಿ, ನಗರಸಭೆಗಳು, ನಗರ ಮತ್ತು ಜಿಲ್ಲಾ ಯೋಜನಾ ಇಲಾಖೆ ಯಿಂದ ಅನುಮೋದನೆ ಪಡೆಯಬೇಕು. ಆದರೆ, ಪ್ಲಾನ್ ಅಪ್ರೂವ್ ಆದ ನಂತರ ಅದರಲ್ಲಿ ನಮೂದಿಸಿರುವ ನಿಯಮ, ಷರತ್ತುಗಳನ್ನು ಗಮನಿಸುವುದೇ ಇಲ್ಲ. 6 ಮಹಡಿಗಳಿಗೆ ಅನುಮತಿ ಪಡೆದಿದ್ದರೆ, 8, 10 ಮಹಡಿಗಳನ್ನು ನಿರ್ಮಿಸುತ್ತಾರೆ. 2 ಅಥವಾ 3 ಮಹಡಿ ಹೆಚ್ಚುವರಿಯಾಗಿ ನಿರ್ಮಿಸಿದ್ದೂ ಇಡೀ ಕಟ್ಟಡದ ಎಲ್ಲಾ ಮಹಡಿಗಳ ಫ್ಲಾಟ್‌ಗಳಲ್ಲಿ ವಾಸಿಸುವವರು ದುಪ್ಪಟ್ಟು ಆಸ್ತಿ ತೆರಿಗೆ ಕಟ್ಟ ಬೇಕಾಗುತ್ತದೆ. ಯಾರೋ ಮಾಡಿದ ತಪ್ಪಿಗೆ ಇನ್ನಾರೋ ದಂಡ ತೆರಬೇಕಾಗಿದೆ. ಬಿಲ್ಡರ್ ನಕ್ಷೆಯಂತೆ ಕಟ್ಟಡ ನಿರ್ಮಿಸಿದ್ದರೆ ಸಿಆರ್ ಪಡೆದು ಮಾಮೂಲಿ ತೆರಿಗೆ ಪಾವತಿಸಬಹುದಾಗಿತ್ತು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ನಿವೃತ್ತಿ ನಂತರ, ಇಳಿ ವಯಸ್ಸಿನಲ್ಲಿ ತಮ್ಮ ಸುರಕ್ಷಿತ ಜೀವನಕ್ಕೆ ಅಪಾರ್ಟ್‌ಮೆಂಟ್‌ಗಳಲ್ಲಿ ಮನೆಗಳನ್ನು ಖರೀದಿಸುವ ಹಿರಿಯರು ದುಪ್ಪಟ್ಟು ತೆರಿಗೆಯಿಂದ ಕಂಗಾಲಾಗಿದ್ದಾರೆ. ಕಟ್ಟಡ ನಿರ್ಮಿಸಿದ ಮೇಲೆ ಉಲ್ಲಂಘನೆಯಾಗಿರುವ ಭಾಗವನ್ನು ಕೆಡವಲು ಸಾಧ್ಯವಿಲ್ಲವಾದ್ದರಿಂದ ನಿರ್ಮಾಣ ಹಂತದಲ್ಲೇ ಸ್ಥಳಕ್ಕೆ ನಕ್ಷೆಯೊಂದಿಗೆ ಭೇಟಿ ನೀಡಿ ತಡೆಯಬೇಕಾಗಿರುವುದು, ಆಯಾ ಯೋಜನಾ ಪ್ರಾಧಿಕಾರದ ಕರ್ತವ್ಯ ಎಂದು ಶ್ರೀವತ್ಸ ತಿಳಿಸಿದರು. ಕಾಲಕಾಲಕ್ಕೆ ಸ್ಥಳ ಪರಿಶೀಲಿಸಿ ನಕ್ಷೆ ಉಲ್ಲಂಘನೆಯಾಗದಂತೆ ತಡೆಯಬಹುದು. ನಕ್ಷೆ ಮಂಜೂರು ಮಾಡಿಕೊಟ್ಟ ನಂತರ ನಮಗೆ ಸಂಬಂಧವೇ ಇಲ್ಲ ಎಂಬಂತೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿರುವುದು ಈ ಸಮಸ್ಯೆ ಉದ್ಭವವಾಗಲು ಪ್ರಮುಖ ಕಾರಣ ಎಂದು ಶಾಸಕರು ನುಡಿದರು.

ಹಲ್ಲಿಲ್ಲದ ರೇರಾ: ರಿಯಲ್ ಎಸ್ಟೇಟ್ ರೆಗ್ಯುಲೇಟರಿ ಅಥಾರಿಟಿಯೂ ಸಹ ಸಕಾಲಿಕ ತಪಾಸಣೆ ಮಾಡದಿರುವುದರಿಂದ ರೇರಾದವರೂ ಈ ಬಗೆಯ ನಿಯಮ ಉಲ್ಲಂಘಿಸಿದಂತಹ ಪ್ರಕರಣಗಳಲ್ಲಿ ಎಚ್ಚರಿಕೆ ನೀಡದೇ ಮೌನ ವಹಿಸುತ್ತಿರುವುದರಿಂದ ಈ ಸಮಸ್ಯೆ ವ್ಯಾಪಕಗೊಂಡಿದೆ ಎಂದು ಶ್ರೀವತ್ಸ ಅಭಿಪ್ರಾಯಪಟ್ಟಿದ್ದಾರೆ.

ಬಡಾವಣೆಗಳಲ್ಲೂ ಇದೇ ಸಮಸ್ಯೆ: ನಕ್ಷೆ ಉಲ್ಲಂಘನೆ ಕೇವಲ ಅಪಾರ್ಟ್‌ಮೆಂಟ್‌ಗಳು, ಮನೆಗಳಿಗೆ ಮಾತ್ರ ಸೀಮಿತವಾಗಿರದೆ, ಮೈಸೂರು ನಗರದಲ್ಲಿ ಅಭಿವೃದ್ಧಿಪಡಿಸಿರುವ ಬಹುತೇಕ ಖಾಸಗಿ ವಸತಿ ಬಡಾವಣೆಗಳ ನಿವಾಸಿಗಳೂ ದುಪ್ಪಟ್ಟು ತೆರಿಗೆ ಹೊರೆಯಿಂದ ಕಂಗಾಲಾಗಿದ್ದಾರೆ ಎಂದು ಶಾಸಕರು ತಿಳಿಸಿದ್ದಾರೆ.

ಲ್ಯಾಂಡ್ ಡೆವಲಪರ್‌ಗಳು, ಬಿಲ್ಡರ್‌ಗಳು ಸಂಬಂಧಪಟ್ಟ ಪ್ರಾಧಿಕಾರಗಳಿಂದ ನಕ್ಷೆಗೆ ಅನುಮೋದನೆ ಪಡೆದು ವಸತಿ ಬಡಾವಣೆ ಅಭಿವೃದ್ಧಿಪಡಿಸುತ್ತಾರೆ. ಆದರೆ, ರಸ್ತೆ, ದೀಪ, ಕುಡಿಯುವ ನೀರು, ಒಳ ಚರಂಡಿ, ಎಸ್‌ಟಿಪಿ, ಉದ್ಯಾನವನಗಳಂತಹ ಮೂಲ ಸೌಲಭ್ಯಗಳನ್ನು ಸಂಪೂರ್ಣವಾಗಿ ಒದಗಿಸುವುದಿಲ್ಲ. ಕೆಲವರು ಸಾರ್ವಜನಿಕ ಉದ್ದೇಶಕ್ಕಾಗಿ ನಿಗದಿಪಡಿಸಿದ ಜಾಗದಲ್ಲೂ ನಿವೇಶನ ಮಾಡಿ ಮಾರಾಟ ಮಾಡುತ್ತಾರೆ. ನಿವೇಶನಗಳು ಪ್ರಾಧಿಕಾರದಿಂದ ಬಿಡುಗಡೆ (CD ಪಟ್ಟಿ)ಯಾಗದಿದ್ದರೂ, ಹಂಚಿಕೆ ಅಥವಾ ಮಾರಾಟ ಮಾಡಿದ ನಿವೇಶನ ಗಳನ್ನು ಉಪ ನೋಂದಣಾಧಿಕಾರಿಗಳು ನೋಂದಣಿ ಮಾಡಿಕೊಡುತ್ತಾರೆ. ಏನೂ ತಿಳಿಯದೇ ನಿವೇಶನ ಖರೀದಿಸಿದವರಿಗೆ ಖಾತೆಯಾಗಲೀ, ಕ್ರಯಪತ್ರವಾಗಲೀ ಸಿಗುವುದಿಲ್ಲ ಎಂದು ಶ್ರೀವತ್ಸ ಅವರು ತಿಳಿಸಿದ್ದಾರೆ.

ಖರೀದಿಸುವ ಮುನ್ನ ಪರಿಶೀಲಿಸಿ: ಅಪಾರ್ಟ್‌ಮೆಂಟ್‌ನ ಫ್ಲಾಟ್, ಮನೆ, ನಿವೇಶನ ಅಥವಾ ಯಾವುದೇ ರೀತಿಯ ಆಸ್ತಿ ಖರೀದಿಸುವ ಮುನ್ನ ಸಂಬಂಧ ಪಟ್ಟ ಪ್ರಾಧಿಕಾರಗಳ ಕಚೇರಿಗಳಿಗೆ ಖುದ್ದು ಭೇಟಿ ನೀಡಿ ಆಸ್ತಿಯ ದಾಖಲಾತಿ ಪರಿಶೀಲಿಸಿ ನಕ್ಷೆ ಅನುಮೋದನೆ, ಸಿಆರ್, ಕ್ರಯಪತ್ರ, ಕಂದಾಯ ಪಾವತಿ, ಇಸಿ ಸರಿ ಇದೆಯೇ ಎಂಬುದನ್ನು ದೃಢಪಡಿಸಿಕೊಳ್ಳುವುದು ಅತ್ಯಗತ್ಯ.

ಮುಖ್ಯಮಂತ್ರಿ ಮಾಡಿ

ಮಾಡಲೇಬೇಕು ಎನ್ನುವುದಾದರೆ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದು ವಿಭಜಿಸಿ, ಆಗ, ಆ ಭಾಗವೂ ಅಭಿವೃದ್ಧಿಯಾಗುತ್ತದೆ ಎಂದು ಸಲಹೆ ಮಾಡಿದರು.

ಕೆಂಪೇಗೌಡರು ನಿಜವಾಗಿಯೂ ಜಾತ್ಯತೀತರು: ಕೆಂಪೇಗೌಡ ಜಯಂತಿ ಸಮಾರಂಭ ಉದ್ಘಾಟಿಸಿದ ನಂತರ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಡಪ್ರಭು ಕೆಂಪೇಗೌಡರು ಯಾವುದೇ ಜಾತಿಗೆ ಸೀಮಿತವಾದವರಲ್ಲ. ಜಾತ್ಯತೀತರಾಗಿ ಅವರು ಬದುಕಿ ದಂತೆ ಸಮಾಜದ ಎಲ್ಲಾ ಜನರು ಬದುಕಬೇಕು ಎಂದು ಕರೆ ನೀಡಿದರು. ಕೆಂಪೇಗೌಡರು ಸಮಾಜಮುಖಿಯಾಗಿ ಕೆಲಸ ಮಾಡಿದಂತೆ ಪ್ರತಿಯೊಬ್ಬರೂ ಸಮಾಜಮುಖಿಯಾಗಿ, ವಿಶ್ವಮಾನವರಾಗಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು. ಕೆಂಪೇಗೌಡರು ನಾಡಿನ ದೊರೆಯಾಗಿ ಮಾದರಿ ಆಡಳಿತ ನೀಡಿದರು, ರೈತ ಸಮುದಾಯದಲ್ಲಿ ಜನಿಸಿದರೂ ಅವರ ಆಡಳಿತಾವಧಿಯಲ್ಲಿ ಜಾತಿ, ಧರ್ಮ ಎಂಬ ವಿಂಗಡಣೆ ಮಾಡಲಿಲ್ಲ, ಎಲ್ಲಾ ಜನಾಂಗ, ಜಾತಿಯವರನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸಿದರು. ಅವರ ಆಡಳಿತ ಕಾಲದಲ್ಲಿ ಕೈಗೊಂಡ ಅಭಿವೃದ್ಧಿ ಗಮನಿಸಿದರೆ ಅವರೊಬ್ಬ ಜಾತ್ಯತೀತ ವ್ಯಕ್ತಿಯಾಗಿದ್ದರು ಎಂದು ತಿಳಿಯುತ್ತದೆ. ಕೆಂಪೇಗೌಡರು ಕೃಷ್ಣ ದೇವರಾಯರ ಕಾಲದಲ್ಲಿ ಬೆಂಗಳೂರು ಪ್ರಾಂತ್ಯದ ಆಡಳಿತಗಾರರಾಗಿದ್ದರು.

ಇತಿಹಾಸ ಮರೆತವರು ಇತಿಹಾಸ ಸೃಷ್ಟಿ ಮಾಡಲಾರರು ಎಂಬುದಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದರು, ಇತಿಹಾಸ ಅರಿತು ತಪ್ಪುಗಳನ್ನು ತಿದ್ದಿಕೊಂಡು ಮನುಷ್ಯರಾಗಿ ಬಾಳುವ ಪ್ರಯತ್ನ ಮಾಡಬೇಕು. ಬೆಂಗಳೂರು ಈ ಮಟ್ಟಕ್ಕೆ ಬೆಳೆಯಲು ಕೆಂಪೇಗೌಡರು ಕಾರಣ, ದೂರದೃಷ್ಟಿ ಇಟ್ಟು ಕೊಂಡು ಆರ್ಥಿಕ, ಸಾಮಾಜಿಕ ಬೆಳವಣಿಗೆ ಯಾವ ರೀತಿ ಆಗಬೇಕೆಂದು ಅರಿತು, ಎಲ್ಲರಿಗೂ ಆರ್ಥಿಕ, ಸಾಮಾಜಿಕ ಶಕ್ತಿ ತುಂಬುವ ಪ್ರಯತ್ನ ಮಾಡಿದರು. ಬೆಂಗಳೂರು ಬೆಳೆಯಬೇಕೆಂದು ಕೆರೆಗಳು, ದೇವಾಲಯಗಳು, ಪೇಟೆಗಳನ್ನು ನಿರ್ಮಾಣ ಮಾಡಿದರು ಎಂದರು.

ಸರ್ಕಾರ ಬೇಷರತ್ ಕ್ಷಮೆಯಾಚನೆ: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸೇರಿದಂತೆ ಸಮಾಜದ ಮುಖಂಡರನ್ನು ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮಕ್ಕೆ ಆಹ್ವಾನಿಸದಿರುವುದು ಹಾಗೂ ಕಾರ್ಯಕ್ರಮ ಪಟ್ಟಿಯಲ್ಲಿ ಹೆಸರು ಸೇರಿಸದಿರುವುದಕ್ಕೆ ಸರ್ಕಾರ ಬೇಷರತ್ ಕ್ಷಮೆ ಯಾಚಿಸಿದೆ.

ಈಜಲು ನೀರಿಗಿಳಿದ ಯುವಕ ಜಲಸಮಾಧಿ

ಶ್ರೀರಂಗಪಟ್ಟಣ, ಜೂ.27– ಕಾವೇರಿ ನದಿಯಲ್ಲಿ ಈಜಲು ನೀರಿಗಿಳಿದಿದ್ದ ಯುವಕನೋರ್ವ ಸಾವನ್ನಪ್ಪಿರುವ ಘಟನೆ ಪಟ್ಟಣ ಹೊರವಲಯದ ಕಾವೇರಿ ಕನ್ಯಾ ಗುರುಕುಲದ ಬಳಿ ನಡೆದಿದೆ.

ಚಿಕ್ಕಮಂಗಳೂರು ನಿವಾಸಿ ಶಿವಮೂರ್ತಿ ಅವರ ಪುತ್ರ ಬಿ.ಎಸ್ ಸಂದೀಪ್‌ಕುಮಾರ್ (29) ಮೃತ ಯುವಕ. ಈತ ಚಿಕ್ಕಬಳ್ಳಾಪುರದ ಇಷಾ ಫೌಂಡೇಷನ್ ಸ್ವಯಂಸೇವಕರಾಗಿ ಕೆಲಸ ಮಾಡುತ್ತಿದ್ದು, ತನ್ನ 20 ಸ್ವಯಂ ಸೇವಕ ಸ್ನೇಹಿತರೊಂದಿಗೆ ಕಳೆದ 2–3 ದಿನಗಳ ಹಿಂದೆ ಕಾವೇರಿ ಕನ್ಯಾಗುರುಕುಲಕ್ಕೆ ಆಗಮಿಸಿ ವಾಸ್ತವ್ಯ ಹೂಡಿದ್ದರು. ಗುರುವಾರ ಮಧ್ಯಾಹ್ನ ಐದಾರು ಸ್ನೇಹಿತರೊಂದಿಗೆ ಕಾವೇರಿ ನದಿಗಿಳಿದು ಈಜಾಡುತ್ತಿದ್ದ ವೇಳೆ ನೀರಲ್ಲಿ ಮುಳುಗಿ ಮೃತಪಟ್ಟಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಮನೆಗೆ ಬೆಂಕಿ

ಲಕ್ಷಾಂತರ ರೂ ನಗದು ಚಿನ್ನಾಭರಣ, ಬಟ್ಟೆ-ಬರೆ, ದವಸಧಾನ್ಯಗಳು ಭಸ್ಮ

ಕೆ.ಆರ್.ಪೇಟೆ,ಜೂ.27– ತಾಲೂಕಿನ ಶೀಳನೆರೆ ಹೋಬಳಿಯ ಬೇಲದಕೆರೆ ಗ್ರಾಮದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಮನೆಯಲ್ಲಿ ಅಗ್ನಿ ಅವಘಡ ಸಂಭವಿಸಿದೆ.

ಬೇಲದಕೆರೆ ಗ್ರಾಮದ ಲತಾ–ಚನ್ನೇಗೌಡ ದಂಪತಿಗಳಿಗೆ ಸೇರಿದ ಮನೆಯಲ್ಲಿ ಈ ಅನಾಹುತ ನಡೆದಿದ್ದು ಘಟನೆಯಿಂದ ಲಕ್ಷಾಂತರ ರೂ. ನಷ್ಟವಾಗಿದೆ. ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡು ಮನೆಯೊಳಗಿದ್ದ ಬಟ್ಟೆ ಬರೆ, ದಿನಸಿ ಸಾಮಗ್ರಿಗಳು, ಒಡವೆಗಳು ಸುಟ್ಟು ಕರಕಲಾಗಿವೆ. ಹೊಸ ಮನೆ ಕಟ್ಟಲೆಂದು ಕುರಿಗಳನ್ನು ಮಾರಿ ಬೀರುವಿನಲ್ಲಿ ಇಟ್ಟಿದ್ದ ಲಕ್ಷಾಂತರ ರೂ. ನಗದು ಸಹ ಬೆಂಕಿಗಾಹುತಿಯಾಗಿದೆ. ಬೆಂಕಿ ಬಿದ್ದಿರುವ ವಿಚಾರ ತಿಳಿದು ಕೆ.ಆರ್.ಪೇಟೆ ಅಗ್ನಿಶಾಮಕ ದಳದವರು ಕೂಡಲೇ ದೌಡಾಯಿಸಿ ಬೆಂಕಿಯನ್ನು ನಂದಿಸಿದ್ದಾರೆ.



ಘಟನಾ ಸ್ಥಳಕ್ಕೆ ಶಾಸಕ ಹೆಚ್.ಟಿ.ಮಂಜು, ತಹಸೀಲ್ದಾರ್ ನಿಸರ್ಗಪ್ರಿಯ, ರಾಜಸ್ವ ನಿರೀಕ್ಷಕ ರಾಜಮೂರ್ತಿ ಹಾಗೂ ಗ್ರಾಮ ಲೆಕ್ಕಾಧಿಕಾರಿ, ವಿದ್ಯುತ್ ಇಲಾಖೆಯ ಅಧಿಕಾರಿಗಳು ಹಾಗೂ ಬೇಟಿ ನೀಡಿ ಶೀಲನೆ ನಡೆಸಿದರು. ಘಟನೆ ಕುರಿತು ಪ್ರತಿಕ್ರಿಯೆ ನೀಡಿರುವ ಶಾಸಕ ಹೆಚ್.ಟಿ.ಮಂಜು ಹಾಗೂ ತಹಸೀಲ್ದಾರ್ ನಿಸರ್ಗಪ್ರಿಯ ಘಟನೆಯಿಂದ ನೊಂದ ಲತಾ ಚನ್ನೇಗೌಡ ಅವರ ಕುಟುಂಬಕ್ಕೆ ಸರ್ಕಾರದ ವತಿಯಿಂದ ಸೂಕ್ತ ಪರಿಹಾರ ದೊರಕಿಸಿಕೊಡುವ ಭರವಸೆ ನೀಡಿದರು. ಘಟನೆ ಕುರಿತು ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಲ್ವಡಿ ಗೋಪುರದ ದುರಸ್ತಿ



ಮೈಸೂರಿನ ಕೆ.ಆರ್.ವೃತ್ತದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಗೋಪುರದ ಚಿನ್ನದ ಬಣ್ಣ ಲೇಪಿತ ಲೋಹದ ತಗಡು ತುಂಡಾಗಿ ಇತ್ತೀಚೆಗೆ ಬಿದ್ದಿತ್ತು. ಇದರ ಬಗ್ಗೆ 'ಮೈಸೂರು ಮಿತ್ರ' ಮಂಗಳವಾರ (ಜೂ.25) ವರದಿ ಮಾಡಿತ್ತು. ಎಚ್ಚೆತ್ತ ಮೈಸೂರು ನಗರ ಪಾಲಿಕೆ ಅಧಿಕಾರಿ ವರ್ಗ ಈಗ ದುರಸ್ತಿ ಕಾರ್ಯ ಆರಂಭಿಸಿದೆ.

'ಮೈಸೂರು ಮಿತ್ರ' ವರದಿ ಫಲಶ್ರುತಿ

ವಿಶ್ವೇಶ್ವರಯ್ಯ ಭವನ ಸ್ವಚ್ಛತಾ ಕಾರ್ಯ



ಮೈಸೂರು ಹೃದಯ ಭಾಗದ ಕೆ.ಆರ್.ವೃತ್ತದ ಭವ್ಯ ವಿಶ್ವೇಶ್ವರಯ್ಯ ಭವನದ ಅವ್ಯವಸ್ಥೆ ಬಗ್ಗೆ 'ಮೈಸೂರು ಮಿತ್ರ'ನಲ್ಲಿ ಜೂ.26 (ಬುಧವಾರ) ರಂದು ಪ್ರಕಟವಾಗಿತ್ತು. ಮೈಸೂರು ಮಹಾನಗರ ಪಾಲಿಕೆ ಎಚ್ಚೆತ್ತು ಸ್ವಚ್ಛತಾ ಕಾರ್ಯ ಆರಂಭಿಸಿದೆ.

ಮೈಸೂರು ಮಿತ್ರ

ಶುಕ್ರವಾರ 28 ಜೂನ್ 2024

ದೇಶ - ವಿದೇಶ

ನೇಪಾಳದಲ್ಲಿ ಭಾರಿ ಮಳೆಗೆ ಭೂಕುಸಿತ: 14 ಮಂದಿ ಸಾವು

ನವದೆಹಲಿ: ನೇಪಾಳದಲ್ಲಿ ಭಾರಿ ಮಳೆ, ಭೂಕುಸಿತ ಹಾಗೂ ಸಿಡಿಲಿಗೆ 14 ಮಂದಿ ಸಾವನ್ನಪ್ಪಿದ್ದಾರೆ. ಮತ್ತೊಂದೆಡೆ ಮಳೆಯಿಂದಾಗಿ ಮನೆ ನೆಲಸಮವಾಗಿ ನೂರಾರು ಜನರು ನಿರಾಶ್ರಿತರಾಗಿದ್ದಾರೆ. ನೇಪಾಳದ ರಾಷ್ಟ್ರೀಯ ವಿಪತ್ತು ಅಪಾಯ ಮತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ ದೇಶದ ವಿವಿಧ ಪ್ರದೇಶಗಳಲ್ಲಿ ಭಾರೀ ಮಳೆಯಾಗಿದೆ. ಭೂಕುಸಿತದಿಂದ 8 ಮಂದಿ ಸಾವನ್ನಪ್ಪಿದ್ದರೆ, ಸಿಡಿಲು ಬಡಿದು 5 ಮಂದಿ ಸಾವನ್ನಪ್ಪಿದ್ದಾರೆ. ಇದೇ ವೇಳೆ ಪ್ರವಾಹದಿಂದಾಗಿ ಒಬ್ಬರು ಸಾವನ್ನಪ್ಪಿದ್ದಾರೆ. ಹಲವರು ನಾಪತ್ತೆಯಾಗಿದ್ದಾರೆ. ಜೂ.26ರಂದು ಒಟ್ಟು 44 ಘಟನೆಗಳು ದಾಖಲಾಗಿವೆ ಎಂದು ಎನ್‌ಡಿಆರ್‌ಎಂಎ ವಕ್ತಾರ ಡಿಜನ್ ಹೇಳಿದ್ದಾರೆ. ಆ ಘಟನೆಗಳಲ್ಲಿ 14 ಮಂದಿ ಪ್ರಾಣ ಕಳೆದುಕೊಂಡಿದ್ದು, ಈ ಪೈಕಿ 8 ಮಂದಿ ಭೂಕುಸಿತದಿಂದ ಮತ್ತು 5 ಮಂದಿ ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ. ಇದೇ ವೇಳೆ ಪ್ರವಾಹದಿಂದಾಗಿ ಒಬ್ಬರು ಪ್ರಾಣ ಕಳೆದುಕೊಂಡಿದ್ದಾರೆ. ಭಾರಿ ಮಳೆಯಿಂದಾಗಿ ಲಾಮ್‌ಜಂಗ್‌ನಲ್ಲಿ ಬುಧವಾರ ಸಂಭವಿಸಿದ ಭೂಕುಸಿತದಲ್ಲಿ 5 ಮಂದಿ ಸಾವನ್ನಪ್ಪಿದ್ದಾರೆ. ಅದೇ ಸಮಯದಲ್ಲಿ, ಕಸ್ಕಿಯಲ್ಲಿ ಇಬ್ಬರು ಮತ್ತು ಓಖಲ್‌ದುಂಗಾದಲ್ಲಿ ಒಬ್ಬರು ಪ್ರಾಣ ಕಳೆದುಕೊಂಡರೆ, ಪ್ರವಾಹದಲ್ಲಿ ಒಬ್ಬರು ಸಾವನ್ನಪ್ಪಿದ್ದಾರೆ. ಗೃಹ ಸಚಿವಾಲಯದ ಪ್ರಕಾರ ಕಳೆದ 17 ದಿನಗಳಲ್ಲಿ ನೇಪಾಳದಲ್ಲಿ ಒಟ್ಟು 28 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.



ಮಳೆಯಲ್ಲಿ ರೀಲ್ಸ್ ಮಾಡುತ್ತಿದ್ದಾಗಲೇ ಬಡಿದ ಸಿಡಿಲು: ಸ್ವಲ್ಪದರಲ್ಲಿ ಪಾರಾದ ಯುವತಿ

ಸೀತಾಮರ್ಹಿ: ಬಿಹಾರದ ಸೀತಾಮರ್ಹಿ ಜಿಲ್ಲೆಯಲ್ಲಿ ಸಿಡಿಲು ಬಡಿತದರೂ ಯುವತಿ ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿರುವ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ.



ಇಲ್ಲಿನ ಹುಡುಗಿಯೊಬ್ಬಳು ಮಳೆಯಲ್ಲಿ ರೀಲ್ಸ್ ಮಾಡುತ್ತಿದ್ದಳು. ಆಗ ಏಕಾಏಕಿ ಸಿಡಿಲು ಬಡಿದಿದೆ. ಆದರೆ ಅದೃಷ್ಟವಶಾತ್ ಆ ಹುಡುಗಿಗೆ ಯಾವುದೇ ಅಪಾಯ ಆಗಿಲ್ಲ. ಸದ್ಯ ಹುಡುಗಿಯ ಡ್ಯಾನ್ಸ್ ರೀಲ್‌ಗಿಂತಲೂ ರೀಲ್ ಮಾಡುವ ವೇಳೆ ಹುಡುಗಿಯ ಹಿಂದೆ ಸಿಡಿಲು ಬಡಿದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ವೈರಲ್ ಆಗುತ್ತಿದೆ. ಮಾಹಿತಿಯ ಪ್ರಕಾರ, ಸೀತಾಮರ್ಹಿಯ ಬೇಲಾ ಪೊಲೀಸ್ ಠಾಣೆ ವ್ಯಾಪ್ತಿಯ ಸಿರ್ಸಿಯಾ ಗ್ರಾಮದಲ್ಲಿ ಈ ಘಟನೆ ನಡೆದಿದೆ. ಈ ಗ್ರಾಮದಲ್ಲಿ ಮಳೆ ಸುರಿಯುತ್ತಿದ್ದ ವೇಳೆ ಅದನ್ನು ಎಂಜಾಯ್ ಮಾಡಲು ಹುಡುಗಿಯೊಬ್ಬಳು ಟೆರೇಸ್ ಮೇಲೆ ನೃತ್ಯ ಮಾಡುತ್ತಿದ್ದಳು ಮತ್ತು ಅವಳ ಸ್ನೇಹಿತರೊಬ್ಬರು ಅವಳ ಡ್ಯಾನ್ಸ್ ಅನ್ನು ರೀಲ್ ಮಾಡುತ್ತಿದ್ದಳು. ಅಷ್ಟರಲ್ಲಿ ಏಕಾಏಕಿ ಸಿಡಿಲು ಬಡಿದ್ದಿದ್ದು, ಹುಡುಗಿ ಸ್ವಲ್ಪದರಲ್ಲೇ ಪಾರಾಗಿದ್ದಾಳೆ. ಸದ್ಯ ಭಾರಿ ಸದ್ದಿನೊಂದಿಗೆ ಸಿಡಿಲು ಬಡಿದ ದೃಶ್ಯ ಕ್ಯಾಮರಾದಲ್ಲಿ ಸೆರೆಯಾಗಿದೆ. ಸಿಡಿಲು ಬಡಿದ ಹಿನ್ನೆಲೆ ಯುವತಿ ಹೆದರಿ ಓಡಿ ಹೋಗುತ್ತಿರುವುದು ಸ್ಪಷ್ಟವಾಗಿ ವೀಡಿಯೊದಲ್ಲಿ ಗೋಚರಿಸುತ್ತಿದೆ. ಈ ಘಟನೆಯಿಂದ ಯುವತಿ ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಈ ವಿಡಿಯೋದಲ್ಲಿ ಇರುವ ಹುಡುಗಿಯ ಹೆಸರು ಸಾನಿಯಾ ಕುಮಾರಿ.

ಪ್ರೇಯಸಿಯನ್ನು ಹಣದ ಕಂತೆಗಳ ಮೇಲೆ ನಡೆಸಿಕೊಂಡು ಬಂದ ಪ್ರಿಯತಮ!

ಮಾಸ್ಕೋ: ರಷ್ಯಾದ ಯುವ ಉದ್ಯಮಿಯೊಬ್ಬ ತನ್ನ ಪ್ರೇಯಸಿ ಹೆಲಿಕಾಪ್ಟರ್‌ನಿಂದ ಹಣದ ಕಂತೆಗಳ ಮೇಲೆ ಕಾಲಿಟ್ಟುಕೊಂಡು ಕೆಳಗಿಳಿಯುವಂತೆ ಮಾಡಿದ್ದ. ಮೆಟ್ಟಿಲುಗಳಂತೆ ಜೋಡಿಸಲಾಗಿದ್ದ ಆ ಹಣದ ಕಂತೆಗಳ ಮೇಲೆ ಆಕೆ ನಡೆದುಕೊಂಡು ಬರುವುದರ ವಿಡಿಯೋ ಮಾಡಿ ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದ.



ಆ ಪ್ರಿಯಕರನ ಹೆಸರು ಸರ್ಗಿ ಕೊಸೆಂಕೊ. ಇನ್‌ಸ್ಟಾಗ್ರಾಂನಲ್ಲಿ ಸಖತ್ ಫೇಮಸ್ ಆಗಿರುವ ಆತ ಮಿಸ್ಟರ್ ಥ್ಯಾಂಕ್ಯು ಎಂದೇ ಚಿರಪರಿಚಿತ. ವಿಡಿಯೋದ ಆರಂಭದಲ್ಲೇ ಆತನ ಪ್ರಿಯತಮೆ ಹೆಲಿಕಾಪ್ಟರ್‌ನ ಡೋರ್ ತೆಗೆದುಕೊಂಡು ತನ್ನ ಕಾಲುಗಳನ್ನು ಹೊರಕ್ಕೆ ಇಡುತ್ತಾರೆ. ಆಕೆಯ ಪಾದದಡಿಯಲ್ಲಿ ಕಂತೆ ಕಂತೆ ನೋಟುಗಳು ಮೆಟ್ಟಿಲುಗಳ ರೀತಿಯಲ್ಲಿ ಜೋಡಿಸಿರುವುದನ್ನು ನೋಡಿ ಅಚ್ಚರಿಗೊಳ್ಳುತ್ತಾಳೆ.

ಹೆಲಿಕಾಪ್ಟರ್‌ನಿಂದ ಇಳಿಯುವಾಗ ತನ್ನ ಪ್ರಿಯಕರನ ಕೈ ಹಿಡಿದು, ಹಣದ ಕಂತೆಗಳ ಮೇಲೆ ನಡೆದುಕೊಂಡು ಇಳಿದು ಬರುತ್ತಾಳೆ. ಈ ವಿಡಿಯೋಗೆ ಕ್ಯಾಪ್ಷನ್ ಇಲ್ಲ. ಆದರೆ, ವಿಶೇಷ ಎಮೋಜಿಗಳನ್ನು ಬಳಸಿಕೊಂಡು ವಿಡಿಯೋವನ್ನು ಸರ್ಗಿ ಅಪ್ಲೋಡ್ ಮಾಡಿದ್ದರು. ಇದಕ್ಕೆ ಸಾಮಾಜಿಕ ಜಾಲತಾಣದಲ್ಲಿ ಮಿಶ್ರ ಪ್ರತಿಕ್ರಿಯೆ ಮೂಡಿಬಂದಿವೆ. ಹಲವಾರು ನೆಟ್ಟಿಗರು, ತಮ್ಮ ವಿಲಾಸಿ ಜೀವನದ ಅತಿ ಕೆಟ್ಟದಾದ ಪ್ರದರ್ಶನ ಎಂದು ಹೇಳಿದ್ದರೆ, ಇನ್ನೂ ಕೆಲವರು, ಬ್ಯಾಂಕ್ ನೋಟುಗಳ ಕಂತೆಗಳ ಮೇಲೆ ಹೀಗೆ ಕಾಲಿಟ್ಟು ನಡೆಯುವುದು ದುರಹಂಕಾರದ ಪರಮಾವಧಿ ಎಂದಿದ್ದಾರೆ.

ರ್ಯಾಗಿಂಗ್: ಕಿಡ್ನಿ ಕಳೆದುಕೊಂಡ ವೈದ್ಯ ವಿದ್ಯಾರ್ಥಿ


ನವದೆಹಲಿ: ಹಿರಿಯ ವಿದ್ಯಾರ್ಥಿಗಳ ರ್ಯಾಗಿಂಗ್‌ನಿಂದ ಪ್ರಥಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿ ಕಿಡ್ನಿ ವೈಫಲ್ಯಕ್ಕೆ ಒಳಗಾಗಿದ್ದು, ನಾಲ್ಕು ಬಾರಿ ಡಯಾಲಿಸಿಸ್ ಮೊರೆ ಹೋಗಬೇಕಾದ ಘಟನೆ ಡುಂಗರಪುರ ವೈದ್ಯಕೀಯ ಕಾಲೇಜಿನಲ್ಲಿ ವರದಿಯಾಗಿದೆ. ರ್ಯಾಗಿಂಗ್‌ಗೆ ಒಳಗಾಗಿದ್ದ ವಿದ್ಯಾರ್ಥಿಯ ಕಿಡ್ನಿಗೆ ಸೋಂಕು ತಗುಲಿತ್ತು. ಡುಂಗರಪುರ ಪೊಲೀಸ್ ಠಾಣೆಯ ಎಸ್‌ಹೆಚ್‌ಒ ಗಿರ್ಧಾರಿ ಸಿಂಗ್ ಮಾಹಿತಿಯ ಪ್ರಕಾರ, ಮೇ 15 ರಂದು ದ್ವಿತೀಯ ವರ್ಷದ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು 300 ಸಿಟ್ ಅಪ್ಸ್ ಮಾಡುವಂತೆ ವಿದ್ಯಾರ್ಥಿಗೆ ರ್ಯಾಗಿಂಗ್ ಮಾಡಿದ್ದಾರೆ. ಪರಿಣಾಮ ಆತನ ಮೂತ್ರಪಿಂಡಗಳ ಮೇಲೆ ತೀವ್ರವಾದ ಒತ್ತಡ ಉಂಟಾಗಿದ್ದು, ಸೋಂಕು ತಗುಲಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.



ಸಂತ್ರಸ್ತನನ್ನು ಅಹಮದಾಬಾದ್‌ನಲ್ಲಿ ಒಂದು ವಾರದವರೆಗೆ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಈ ಸಮಯದಲ್ಲಿ ನಾಲ್ಕು ಬಾರಿ ಡಯಾಲಿಸಿಸ್ ಮಾಡಲಾಗಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ, ವಿದ್ಯಾರ್ಥಿಯು ಈಗ ಸ್ಥಿರವಾಗಿದ್ದಾನೆ. ವಿದ್ಯಾರ್ಥಿ ಮರಳಿ ಕಾಲೇಜಿಗೆ ಬರಲು ಆರಂಭಿಸಿದ್ದಾನೆ. ಸಂಸ್ಥೆಯ ರ್ಯಾಗಿಂಗ್ ವಿರೋಧಿ ಸಮಿತಿಯ ವಿಚಾರಣೆಯಲ್ಲಿ ತಪ್ಪಿತಸ್ಥರೆಂದು ಸಾಬೀತಾದ ನಂತರ ಕಾಲೇಜು ಪ್ರಾಂಶುಪಾಲರು 7 ಆರೋಪಿಗಳ ವಿರುದ್ಧ ದೂರು ನೀಡಿದ್ದು ಎಫ್‌ಐಆರ್ ದಾಖಲಿಸಲಾಗಿದೆ ಎಂದು ಎಸ್‌ಎಚ್‌ಒ ಹೇಳಿದ್ದಾರೆ.

ಖ್ಯಾತ ಲೇಖಕಿ ಅರುಂಧತಿ ರಾಯ್‌ಗೆ ಪೆನ್ ಪಿಂಟರ್ ಪ್ರಶಸ್ತಿ

ನವದೆಹಲಿ: ಬೂಕರ್ ಪ್ರಶಸ್ತಿ ವಿಜೇತ ಲೇಖಕಿ, ಹೋರಾಟಗಾರ್ತಿ ಅರುಂಧತಿ ರಾಯ್ ಅವರು ತಮ್ಮ ಬರಹಗಳಿಗಾಗಿ 2024ನೇ ಸಾಲಿನ ಪ್ರತಿಷ್ಠಿತ ಪೆನ್ ಪಿಂಟರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.



ನೊಬೆಲ್ ಪ್ರಶಸ್ತಿ ಪುರಸ್ಕೃತ ನಾಟಕಕಾರ ಹೆರಾಲ್ಡ್ ಪಿಂಟರ್ ಅವರ ನೆನಪಿಗಾಗಿ ಇಂಗ್ಲಿಷ್ PEN 2009 ರಲ್ಲಿ ಸ್ಥಾಪಿಸಿದ ವಾರ್ಷಿಕ ಪ್ರಶಸ್ತಿ ಇದಾಗಿದ್ದು, ಇದನ್ನು ಸಾಹಿತ್ಯದಲ್ಲಿ ಅಪರಿಮಿತ ಸಾಧನೆಗೈದವರಿಗೆ ನೀಡಲಾಗುತ್ತಿದೆ. 62 ವರ್ಷದ ಅರುಂಧತಿ ರಾಯ್ ಅಕ್ಟೋಬರ್ 10ರಂದು ಬ್ರಿಟಿಷ್ ಲೈಬ್ರರಿ ಆಯೋಜನೆ ಮಾಡುವ ಸಮಾರಂಭದಲ್ಲಿ ಪೆನ್ ಪಿಂಟರ್ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಅರುಂಧತಿ ರಾಯ್ ಅನ್ಯಾಯದ ತುರ್ತು ಕಥೆಗಳನ್ನು ಬುದ್ಧಿವಂತಿಕೆಯಿಂದ ಮತ್ತು ಚಂದವಾಗಿ ಹೇಳುತ್ತಾರೆ ಎಂದು ಇಂಗ್ಲಿಷ್ ಪೆನ್ ಅಧ್ಯಕ್ಷ ರುತ್ ಬೊರ್ತ್‌ವಿಕ್ ಶ್ಲಾಘಿಸಿದ್ದಾರೆ. ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಕ್ಕೆ ಸಂತೋಷ ವ್ಯಕ್ತಪಡಿಸಿದ ಅರುಂಧತಿ ರಾಯ್, ಇದೀಗ ಜಗತ್ತು ತೆಗೆದುಕೊಳ್ಳುತ್ತಿರುವ ಬಹುತೇಕ ತಿರುವಿನ ಬಗ್ಗೆ ಬರೆಯಲು ಹೆರಾಲ್ಡ್ ಪಿಂಟರ್ ಇಂದು ನಮ್ಮೊಂದಿಗೆ ಇರಬೇಕಿತ್ತು ಎಂದು ಅನ್ನಿಸುತ್ತದೆ. ಅವರು ಇಲ್ಲದ ಕಾರಣ, ಅವರಂತೆ ಕೆಲಸ ಮಾಡಲು ನಮ್ಮಲ್ಲಿರುವವರು ತಮ್ಮ ಕೈಲಾದಷ್ಟು ಪ್ರಯತ್ನಿಸಬೇಕು ಎಂದು ಹೇಳಿದ್ದಾರೆ.

ಪ್ರೊ.ಕಮಲಾ ಹಂಪನಾರಿಗೆ ಮೈಸೂರು ಸಾಹಿತ್ಯ ಬಳಗ ನುಡಿನಮನ

ಮೈಸೂರು, ಜೂ.27(ಎಸ್‌ಪಿಎನ್)– ಪ್ರೊ.ಕಮಲಾ ಹಂಪನಾ ಅಪರೂಪದ ಸಾಹಿತಿ, ವ್ಯಕ್ತಿತ್ವದ ದೃಷ್ಟಿಯಿಂದ ಮಹಾ ಮಹಿಳೆ. ಅವರಲ್ಲಿನ ಜೀವಪರತೆ, ಸಾಮಾಜಿಕ ಬದ್ಧತೆ, ಕಳಕಳಿ ಅಪರೂಪದಲ್ಲೇ ಅಪರೂಪದ್ದು ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಜಿಲ್ಲಾ ಕಸಾಪ, ಕನ್ನಡ ಸಾಹಿತ್ಯ ಕಲಾಕೂಟ, ಕನ್ನಡ ಲೇಖಕಿಯರ ಟ್ರಸ್ಟ್ ಹಾಗೂ ಪದ್ಮಶ್ರೀ ಜೈನ ಮಹಿಳಾ ಸಮಾಜದ ಸಹಯೋಗದೊಂದಿಗೆ ನಡೆದ ಪ್ರೊ.ಕಮಲಾ ಹಂಪನಾ ಅವರ ಭಾವಚಿತ್ರಕ್ಕೆ ಪುಷ್ಪ ನಮನದೊಂದಿಗೆ ನುಡಿನಮನ ಸಲ್ಲಿಸಿದರು.

ಪ್ರೊ.ಕಮಲಾ ಹಂಪನಾ ದಂಪತಿ ಬದುಕು ಒಂದು ಸಾಹಸ ಗಾಥೆ, ಕೆಳಹಂತದಿಂದ ಉನ್ನತ ಮಟ್ಟಕ್ಕೆ ಏರಿದ ಸೀಮೋಲಂಘನದ ಕಥೆ ಎಂದ ಅವರು, ಕಮಲಾ ಹಂಪನಾ ಜೈನಾ ಸಾಹಿತ್ಯ, ಅವರ ಸಮಗ್ರ ಸಾಹಿತ್ಯದ ಸಂಪುಟಗಳ ಹೊರತರುವಲ್ಲಿನ ಅವರ ಕೆಲಸ ಕಿರಿಯರಿಗೆ ಮೇಲ್ಪಂಕ್ತಿ ಎಂದರು.

ಈ ಹಿಂದೆ ಪುಸ್ತಕ ಖರೀದಿ ಸಮಿತಿಯಲ್ಲಿ ಇಬ್ಬರೂ ಒಟ್ಟಿಗೆ ಕಾರ್ಯ ನಿರ್ವಹಿಸುತ್ತಿದ್ದ ಪ್ರಸಂಗ ವಿವರಿಸಿ, ಓರ್ವ ಮಹಿಳಾ ಬರಹಗಾರ್ತಿಯ ಪುಸ್ತಕ ಖರೀದಿಗೆ ಒತ್ತಡ ಬಂತು. ಈ ವೇಳೆ ಆ ಪುಸ್ತಕ ಮುಖಪುಟ ಸರಿಯಾಗಿಲ್ಲ ಎಂದು ನನ್ನ ಅಭಿಪ್ರಾಯ ತಿಳಿಸಿದ್ದೆ. ಮಹಿಳೆ ವಿಚಾರದಲ್ಲಿ ಅವರ ನಿಲುವಿನಲ್ಲಿ ಸೈದ್ಧಾಂತಿಕ ಸ್ಪಷ್ಟತೆಯಿತ್ತು. ಮಹಿಳೆ ಎಂಬ ಕಾರಣಕ್ಕಷ್ಟೇ ಅವರು ಬೆಂಬಲಿಸುತ್ತಿರಲಿಲ್ಲ. ಬೇರೆ ಬೇರೆ ಆಯಾಮಗಳಲ್ಲಿ ಪುಸ್ತಕ ಖರೀದಿಸುವಂತೆ ಮನವರಿಕೆ ಮಾಡಿದ್ದ ಸನ್ನಿವೇಶವನ್ನು ವಿವರಿಸಿದರು.



ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ವಿವಿಧ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ಪ್ರೊ.ಕಮಲಾ ಹಂಪನಾ ಅವರ ಭಾವಚಿತ್ರಕ್ಕೆ ಪುಷ್ಪ ನಮನದೊಂದಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಮಲಾ ಹಂಪನಾ ನನಗಿಂತ ಒಂದು ವರ್ಷ ಹಿರಿಯರು. ಬರವಣಿಗೆಯಲ್ಲಿ ನನಗಿಂತ ಸಾಧಕರು. ಸತಿ–ಪತಿ ಇಬ್ಬರು ಸಮಾಜದಲ್ಲಿ ಆದರ್ಶ ದಂಪತಿಯಾಗಿ ಬಾಳಿದ್ದಾರೆ. ಅಲ್ಲದೆ, ಮಹಿಳೆಯ ವಿಚಾರದಲ್ಲಿ ಅಧ್ಯಯನ ನಡೆಸಿ ಸ್ಪಷ್ಟತೆಯಿಂದ ಮಾತನಾಡುವ ಎದೆಗಾರಿಕೆ ಅವರಲ್ಲಿತ್ತು. 60ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ, ನಾಡಿನ ಸಾರಸ್ವತ ಲೋಕದಲ್ಲಿ ಹೊಳೆಯುವ ನಕ್ಷತ್ರವಾಗಿದ್ದಾರೆ. ಜೈನಾ ಸಾಹಿತ್ಯ ರಚನೆಯಲ್ಲಿ ವಿಶೇಷ ಆಸಕ್ತಿ ವಹಿಸಿದ್ದರು. ಅವರ ಬರಹಗಳು ಸಮಗ್ರ ಸಂಪುಟದಲ್ಲಿ ಪ್ರಕಟಗೊಂಡಿದ್ದು, ಇಂದಿನ ಪೀಳಿಗೆ ಅವರ ಪುಸ್ತಕಗಳನ್ನು ಅಧ್ಯಯನ ನಡೆಸಬೇಕು ಎಂದು ಕಿವಿಮಾತು ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ನುಡಿನಮನ ಸಲ್ಲಿಸುತ್ತಾ, ಕಮಲಾ ಮತ್ತು ಹಂಪ ನಾಗರಾಜಯ್ಯ ದಂಪತಿ ಬದುಕು ಇಂದಿನ ಪೀಳಿಗೆಗೆ ಆದರ್ಶಪ್ರಾಯವಾಗಿದೆ. ಗಂಡು–ಹೆಣ್ಣಿನ ಮನಸ್ಸುಗಳ ಸಮೀಕರಣವನ್ನು ಅವರಲ್ಲಿ ಕಾಣಬಹುದಿತ್ತು. ಬದುಕಲ್ಲಿ ಪ್ರೀತಿ ಕಡಿಮೆಯಾದರೂ ನೀತಿ ಕಡಿಮೆಯಾಗಬಾರದು ಎಂಬ ನಿಲುವು ಅವರದಾಗಿತ್ತು. ಇದು ಅವರ ಯಶಸ್ವಿ ಜೀವನದ ಗುಟ್ಟಾಗಿತ್ತು ಎಂದು ಕಮಲಾ ಹಂಪನಾ ಅವರ ವೈವಾಹಿಕ ಜೀವನದ ಬಗ್ಗೆ ಬೆಳಕು ಚೆಲ್ಲಿದರು.

ಪ್ರೊ.ಸಿ.ನಾಗಣ್ಣ ಮಾತನಾಡುತ್ತಾ, ಹಲವು ತಿಂಗಳಿಂದ ಅನೇಕ ಸಾಹಿತ್ಯಾಸಕ್ತರನ್ನು ಕಳೆದುಕೊಳ್ಳುತ್ತಿದ್ದೇವೆ. ಮಾಜಿ ಶಾಸಕ ವಾಸು, ಸಂಸದ ವಿ.ಶ್ರೀನಿವಾಸ ಪ್ರಸಾದ್, ಹಿರಿಯ ರಂಗಕರ್ಮಿ ನ.ರತ್ನ ಸೇರಿದಂತೆ ಅನೇಕರನ್ನು ಕಳೆದುಕೊಂಡಿದ್ದೇವೆ. ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೆ, ವೈಯಕ್ತಿಕ ಬದುಕಿನ ಬಗ್ಗೆ ಕೇರ್ ತೆಗೆದುಕೊಳ್ಳುವವರು ಇರಬೇಕು. ಕಮಲಾ ಹಂಪನಾ, 60 ಕೃತಿಗಳನ್ನು ರಚಿಸಿದ್ದಾರೆ. ಹಂಪನಾ ಸಹ ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇವರಿಬ್ಬರು ಪರಸ್ಪರ ಅರಿತು ಬಾಳಿದರು. ಡಾ.ಪದ್ಮಾಶೇಖರ್ ಅವರಿಗೇ ತಿಳಿದಿಯಂತೆ. ಸಂಸಾರವನ್ನು ನಿಭಾಯಿಸಿ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಮಹಿಳೆಯ ಕಷ್ಟ ಅವರಿಗೆ ತಿಳಿದಿರುದಂತೆ. ಇವೆಲ್ಲವನ್ನೂ ಮೀರಿ ಪ್ರೊ.ಕಮಲಾ ಹಂಪನಾ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿ ತೋರಿದ್ದಾರೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ, ಪ್ರೊ.ಪದ್ಮಾಶೇಖರ್, ಪ್ರೊ.ನೀಲಗಿರಿ ತಳವಾರ, ಎಂ.ಎಸ್.ಪದ್ಮಾ, ಲತಾ ಸುದರ್ಶನ್ ಸೇರಿದಂತೆ ಇತರರು ನುಡಿನಮನ ಸಲ್ಲಿಸಿದರು.

ತುರ್ತು ಪರಿಸ್ಥಿತಿ ಹೇರಿಕೆ, ಬೆಲೆ ಏರಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ



ಮೈಸೂರಿನ ಅಗ್ರಹಾರ ವೃತ್ತದಲ್ಲಿ ತುರ್ತು ಪರಿಸ್ಥಿತಿ ಹೇರಿಕೆ ಹಾಗೂ ಬೆಲೆ ಏರಿಕೆ ವಿರೋಧಿಸಿ ಕೆ.ಆರ್.ಯುವ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ಜೂ.27(ಎಂಟಿವೈ)– ತುರ್ತು ಪರಿಸ್ಥಿತಿ ಹೇರಿಕೆ, ಬೆಲೆ ಏರಿಕೆ ಖಂಡಿಸಿ ಬಿಜೆಪಿ ಯುವಮೋರ್ಚಾ ಕೃಷ್ಣರಾಜ ಕ್ಷೇತ್ರದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಅಗ್ರಹಾರ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ರಾಜ್ಯ ಸರ್ಕಾರ ಹಾಗೂ ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ, ಪೋಸ್ಟರ್ ಅಂಟಿಸುವ ಮೂಲಕ ಬೆಲೆ ಏರಿಕೆ ಹಾಗೂ ತುರ್ತು ಪರಿಸ್ಥಿತಿ ವಿರುದ್ಧ ಜಾಗೃತಿ ಮೂಡಿಸಿದರು.

ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ತನ್ನ ಸ್ವಾರ್ಥಕ್ಕಾಗಿ ಕಾಂಗ್ರೆಸ್ ಸರ್ಕಾರವು ದೇಶದ ಜನರ ಮೇಲೆ ತುರ್ತು ಪರಿಸ್ಥಿತಿ ಹೇರಿದ್ದು, ಸಂವಿಧಾನ ವಿರೋಧಿ ಕೃತ್ಯವಾಗಿದೆ. ಆದರೆ, ಇಂದು ಸಂವಿಧಾನ ಕುರಿತು ಪಾಠ ಮಾಡುತ್ತಿದೆ. ಕಾಂಗ್ರೆಸ್ ಈ ರೀತಿಯ ಇಬ್ಬಗೆಯ ನೀತಿಯನ್ನು ಬಿಡಬೇಕು. ಕೂಡಲೇ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಇತರೆ ಕಾಂಗ್ರೆಸ್ ನಾಯಕರು ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ತುರ್ತು ಪರಿಸ್ಥಿತಿಯ ಕರಾಳ ನೆನಪಿಗೆ 50 ವರ್ಷವಾಯಿತು. 1975ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದರು. ಬರೋಬ್ಬರಿ 21 ತಿಂಗಳ ಕಾಲ ತುರ್ತುಪರಿಸ್ಥಿತಿ ಅಸ್ತಿತ್ವದಲ್ಲಿತ್ತು. ಇದು ಇತಿಹಾಸದಲ್ಲಿ ಕರಾಳ ಅಧ್ಯಾಯ. ಪ್ರಜಾಪ್ರಭುತ್ವದಲ್ಲಿ ಕಪ್ಪು ಚುಕ್ಕೆ ಎಂದು ಕಿಡಿಕಾರಿದರು.

ತುರ್ತುಪರಿಸ್ಥಿತಿಯ ಕರಾಳ ದಿನವನ್ನು ಆಚರಿಸುತ್ತಿದ್ದರೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅದನ್ನು ಸಂಭ್ರಮಿಸುವಂತೆ ವರ್ಷದಲ್ಲಿ 2ನೇ ಬಾರಿಗೆ ಹಾಲಿನ ದರ ಏರಿಕೆ ಮಾಡಿರುವುದು ಖಂಡನೀಯ ಎಂದರು.

ಈ ಸಂದರ್ಭದಲ್ಲಿ ಯುವ ಮೋರ್ಚಾ ನಗರಾಧ್ಯಕ್ಷ ರಾಕೇಶ್‌ಗೌಡ, ಕೆ.ಆರ್. ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್ ರಾಜು ಅರಸ್, ಯುವ ಮೋರ್ಚಾ ಅಧ್ಯಕ್ಷ ಕೆ.ಎಂ.ನಿಶಾಂತ್, ನಗರ ಉಪಾಧ್ಯಕ್ಷ ಜೋಗಿಮಂಜು, ವಿಶ್ವನಾಥ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಬಾಲಕೃಷ್ಣ, ಶೈಲೇಂದ್ರ, ಸರ್ವಮಂಗಳ, ನಾಗರಾಜ್ ಬಿಲ್ಲಯ್ಯ, ವಿನಯ್ ಪಾಂಚಜನ್ಯ, ಪಾರ್ಥಸಾರಥಿ, ಓಂ ಶ್ರೀನಿವಾಸ್, ಟಿವಿಎಸ್ ನಾಗರಾಜ್, ಪ್ರದೀಪ್, ಕೆ.ಜೆ.ರಮೇಶ್, ಉಮೇಶ್, ಕಾವೇರಿ, ಸೋಮಶೇಖರ್, ಸಂತೋಷ್, ಅನ್ನಪೂರ್ಣ, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಅಕ್ಷಯ್, ಮಧು, ನಿತೇಶ್, ಶ್ರೀಕಂಠ, ಕಿಶೋರ್, ಕೀರ್ತಿ, ಪ್ರತೀಕ್, ಪ್ರಶೀಕ್, ಚರಣ್, ವಿನೀತ್ ಇನ್ನಿತರರು ಉಪಸ್ಥಿತರಿದ್ದರು.

ಫಾಕ್ಸ್‌ಕಾನ್ ಫ್ಯಾಕ್ಟರಿಯಲ್ಲಿ ವಿವಾಹಿತ ಮಹಿಳೆಯರಿಗೆ ಕೆಲಸವಿಲ್ಲ

ಚೆನ್ನೈ: ಆಪಲ್ ಐಫೋನ್‌ಗಳನ್ನು ತಯಾರಿಸುವ ಫಾಕ್ಸ್‌ಕಾನ್ ಇಂಡಿಯಾದ ಕಾರ್ಖಾನೆಯಲ್ಲಿ ವಿವಾಹಿತ ಮಹಿಳೆಯರಿಗೆ ಕೆಲಸ ಮಾಡಲು ಅವಕಾಶ ನೀಡುತ್ತಿಲ್ಲ ಎಂಬ ಮಾಧ್ಯಮ ವರದಿಗಳ ಕುರಿತು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ತಮಿಳುನಾಡು ಸರ್ಕಾರದ ಕಾರ್ಮಿಕ ಇಲಾಖೆಯಿಂದ ವಿಸ್ತೃತ ವರದಿ ಕೇಳಿದೆ.



ತಮಿಳುನಾಡಿನ ಶ್ರೀಪೆರಂಬದೂರಿನಲ್ಲಿರುವ ಫಾಕ್ಸ್‌ಕಾನ್ ಘಟಕದಲ್ಲಿ ವಿವಾಹಿತ ಮಹಿಳೆಯರನ್ನು ನೇಮಕಾತಿ ಮಾಡಿಕೊಳ್ಳುವುದಿಲ್ಲ ಎಂದು ವರದಿಯಾಗಿತ್ತು. ಖ್ಯಾತ ಸುದ್ದಿಸಂಸ್ಥೆ ತನ್ನ ತನಿಖಾ ವರದಿಯಲ್ಲಿ ಈ ಅಂಶವನ್ನು ಬಯಲಿಗೆ ಎಳೆದಿತ್ತು. ಮದುವೆಯಾದ ಬಳಿಕ ಗರ್ಭ ಧರಿಸುವುದು, ಮಗು ಮಾಡಿಕೊಳ್ಳುವುದು ಇತ್ಯಾದಿ ಕಾರಣಕ್ಕೆ ಮಹಿಳೆಯರು ಕೆಲಸಕ್ಕೆ ಗೈರಾಗುತ್ತಾರೆ ಎಂಬ ಕಾರಣಕ್ಕೆ ಅವರ ನೇಮಕಾತಿ ನಡೆಯುತ್ತಿಲ್ಲ ಎಂದು ಹೇಳಲಾಗಿದೆ. ಫಾಕ್ಸ್‌ಕಾನ್‌ನ ಮಾಜಿ ಎಚ್‌ಆರ್ ಎಕ್ಸಿಕ್ಯೂಟಿವ್ ಎಸ್ ಪೌಲ್ ಎಂಬುವವರೂ ಐಫೋನ್ ಘಟಕದಲ್ಲಿ ವಿವಾಹಿತ ಮಹಿಳೆಯರನ್ನು ಕೆಲಸಕ್ಕೆ ಸೇರಿಸಿಕೊಳ್ಳದೇ ಇರುವುದು ಹಾಗೂ ಇತರ ಕೆಲ ನಿರ್ಬಂಧಗಳು ಇರುವುದನ್ನು ಖಚಿತಪಡಿಸಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಟಿ20 ವಿಶ್ವಕಪ್: ಫೈನಲ್‌ಗೆ ಭಾರತ?

ಗಯಾನ, ಜೂ.27– ಇಲ್ಲಿನ ಪ್ರೊವಿಡೆನ್ಸ್ ಕ್ರೀಡಾಂಗಣದಲ್ಲಿ ನಡೆದ ಟಿ20 ವಿಶ್ವಕಪ್ ಪಂದ್ಯಾವಳಿಯ 2ನೇ ಸೆಮಿಫೈನಲ್ ಪಂದ್ಯದಲ್ಲಿ ಪತ್ರಿಕೆ ಮುದ್ರಣಕ್ಕೆ ಹೋಗುವ ವೇಳೆಗೆ 172 ರನ್ ಗೆಲುವಿನ ಗುರಿ ಬೆನ್ನತ್ತಿರುವ ಇಂಗ್ಲೆಂಡ್ 8.1 ಓವರ್‌ಗಳಲ್ಲಿ 49 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿದ್ದು, ಭಾರತ ಫೈನಲ್‌ನತ್ತ ದಾಪುಗಾಲು ಹಾಕಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 171 ರನ್ ಗಳಿಸಿತು. ತಂಡದ ಪರ ವಿರಾಟ್ ಕೊಹ್ಲಿ 9 ರನ್ ಗಳಿಸಿ ಔಟಾಗುವ ಮೂಲಕ ಮತ್ತೊಮ್ಮೆ ನಿರಾಸೆ ಮೂಡಿಸಿದರು. ನಂತರ ಬಂದ ರಿಷಬ್ ಪಂತ್ 4 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ನಾಯಕ ರೋಹಿತ್ ಶರ್ಮಾ ಹಾಗೂ ಸೂರ್ಯಕುಮಾರ್ ಯಾದವ್ 73 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 39 ಎಸೆತಗಳಲ್ಲಿ 2 ಸಿಕ್ಸರ್, 6 ಬೌಂಡರಿ ಒಳಗೊಂಡ 57 ರನ್ ಗಳಿಸಿದ್ದ ರೋಹಿತ್ ಭಾರೀ ಹೊಡೆತಕ್ಕೆ ಮುಂದಾಗಿ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ಸೂರ್ಯಕುಮಾರ್ ಯಾದವ್ ಕೂಡ 36 ಎಸೆತಗಳಲ್ಲಿ 2 ಸಿಕ್ಸರ್, 4 ಬೌಂಡರಿ ಒಳಗೊಂಡ 47 ರನ್ ಗಳಿಸಿ ಕೇವಲ 3 ರನ್‌ನಿಂದ ಅರ್ಧಶತಕದಿಂದ ವಂಚಿತರಾದರು. ನಂತರ ಬಂದ ಹಾರ್ದಿಕ್ ಪಾಂಡ್ಯ 23, ರವೀಂದ್ರ ಜಡೇಜಾ 17 ಹಾಗೂ ಅಕ್ಷರ್ ಪಟೇಲ್ 10 ರನ್ ಗಳಿಸುವ ಮೂಲಕ ತಂಡದ ಮೊತ್ತವನ್ನು 170ರ ಗಡಿ ದಾಟಿಸಿದರು. ಇಂಗ್ಲೆಂಡ್ ಪರ ಕ್ರಿಸ್ ಜೋರ್ಡನ್ 3, ಆದೀಲ್ ರಶೀದ್, ಸ್ಯಾಮ್ ಕರ್ರನ್, ಜೋಫ್ರಾ ಆರ್ಚರ್ ಹಾಗೂ ರೀಸ್ ಟಾಪ್ಲಿ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಎಂಎಲ್‌ಸಿ ಡಾ.ಯತೀಂದ್ರ ಹುಟ್ಟುಹಬ್ಬ ಆಚರಣೆ



ಮೈಸೂರಿನ ಕನಕಗಿರಿಯಲ್ಲಿರುವ ಇಂದಿರಾ ಕ್ಯಾಂಟೀನ್ ಮುಂಭಾಗ ಡಾ.ಯತೀಂದ್ರ ಯುವ ಬ್ರಿಗೇಡ್ ವತಿಯಿಂದ ಸಾರ್ವಜನಿಕರಿಗೆ ಮೈಸೂರು ಪಾಕ್ ವಿತರಿಸಿ, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಜನ್ಮದಿನ ಆಚರಿಸಲಾಯಿತು. ಡಾ.ಯತೀಂದ್ರ ಯುವ ಬ್ರಿಗೇಡ್ ಅಧ್ಯಕ್ಷ ಗೌರಿಶಂಕರನಗರದ ಶಿವಕುಮಾರ್, ಕೇಬಲ್ ಮಹದೇವ, ಮುಖಂಡರಾದ ಕುಮಾರ್, ನಟರಾಜ್, ನಂಜುಂಡಸ್ವಾಮಿ, ದೇವಪ್ಪ, ಪುಟ್ಟಪ್ಪ, ನವೀನ, ವಸಂತ, ರುದ್ರ, ಗಣೇಶ್ ಹಾಗೂ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಹಾರೋಹಳ್ಳಿ ವ್ಯಕ್ತಿ ನಾಪತ್ತೆ



ಮೈಸೂರು,ಜೂ.27–ಹಾರೋಹಳ್ಳಿ ಗ್ರಾಮದ 27 ವರ್ಷದ ಭರತ್ ಕುಮಾರ್ ಎಂಬುವವರು ಏಪ್ರಿಲ್ 15ರಂದು ಕಾಣೆಯಾಗಿದ್ದು, ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವ್ಯಕ್ತಿಯು ದೃಢಕಾಯ ಶರೀರ, 5 ಅಡಿ ಎತ್ತರ, ಎಣ್ಣೆಗೆಂಪು ಮೈಬಣ್ಣ ಹೊಂದಿದ್ದು, ಕಾಣೆಯಾದ ಸಂದರ್ಭದಲ್ಲಿ ಕಂಪು ಬಣ್ಣದ ಶರ್ಟ್, ಹಸಿರು ಮತ್ತು ಬೂದು ಬಣ್ಣದ ಶಾರ್ಟ್ಸ್ ಧರಿಸಿರುತ್ತಾನೆ. ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ಮೈಸೂರು ಜಿಲ್ಲೆಯ ಎಸ್.ಪಿ, ದೂ.ಸಂ: 0821–2520040, ಮೈಸೂರು ಜಿಲ್ಲಾ ಕಂಟ್ರೋಲ್ ರೂಂ ಸಂ: 0821–2444800 ಅಥವಾ ವರುಣ ಪೊಲೀಸ್ ಠಾಣೆ ದೂ.ಸಂ: 0821–2594411, 9480805052 ಅನ್ನು ಸಂಪರ್ಕಿಸಬಹುದು.

ಮೈಸೂರು ಕಲಾಮಂದಿರಕ್ಕೆ ಬೇಕು ತುರ್ತು ದುರಸ್ತಿ

ಮೈಸೂರು, ಜೂ.27– ಮೈಸೂರಿನ ಸಾಂಸ್ಕೃತಿಕ ಚಟುವಟಿಕೆಗಳ ಪ್ರಮುಖ ಕೇಂದ್ರವಾದ 'ಕರ್ನಾಟಕ ಕಲಾಮಂದಿರ'ಕ್ಕೆ ತುರ್ತು ದುರಸ್ತಿ ಅಗತ್ಯವಿದೆ.

ಸ್ವಲ್ಪ ಎತ್ತರದ ಪ್ರದೇಶದಲ್ಲಿರುವ ಕಲಾಮಂದಿರ, ಹೊರಗಿನಿಂದ ಸುಂದರ ಸೌಧದಂತೆ ಕಂಗೊಳಿಸುತ್ತದೆ. ಆದರೆ ಒಳಹೋದರೆ ಕನಿಷ್ಠ ಸೌಲಭ್ಯಗಳೂ ಸಮರ್ಪಕವಾಗಿಲ್ಲ. ಸರ್ಕಾರದ ವತಿಯಿಂದ ಆಚರಿಸಲಾಗುವ ಮಹನೀಯರ ಜಯಂತ್ಯುತ್ಸವಗಳು ಸೇರಿದಂತೆ ಸಂಘ ಸಂಸ್ಥೆಗಳು ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಒಂದಿಲ್ಲೊಂದು ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಆದರೆ ಇಲ್ಲಿನ ನಿರ್ವಹಣೆ ಪೂರಕವಾಗಿಲ್ಲ.

ಅತ್ಯಗತ್ಯವಾಗಿರುವ ಶೌಚಾಲಯ ವ್ಯವಸ್ಥೆಯೇ ಸರಿಯಿಲ್ಲ. ಪುರುಷರ ಶೌಚಾಲಯದಲ್ಲಿ ಕಮೋಡ್ ಮುರಿದು ಮೂಲೆಯಲ್ಲಿ ಬಿದ್ದಿವೆ. ಫ್ಲಷರ್ ಕೂಡ ಕಳಚಿದೆ. ಶೌಚಾಲಯಕ್ಕೆ ಮೇಲ್ಭಾವಣಿಯಾಗಿ ಅಳವಡಿಸಿದ್ದ ಶೀಟ್‌ಗಳು ಮುರಿದು ಬಿದ್ದಿವೆ. ವಿದ್ಯುತ್ ವೈರ್‌ಗಳು ಜೋತು ಬಿದ್ದಿವೆ. ಬಲ್ಬ್‌ಗಳು ಮಾಯವಾಗಿವೆ. ಗೋಡೆ ಮೂಲೆಯಲ್ಲಿ ವಸ್ತಿ ಹಿಡಿದಿದೆ. ಶೌಚಾಲಯದ ಬಾಗಿಲು ಬಳಿಯೇ ಅಶುಚಿತ್ವ ತಾಂಡವವಾಡುತ್ತಿದೆ. ಇನ್ನು ಒಳಭಾಗದ ಶುಚಿತ್ವದ ಬಗ್ಗೆ ಹೇಳುವಂತಿಲ್ಲ. ವಾಷಿಂಗ್ ಬೇಸಿನ್‌ನಲ್ಲಿ ನಲ್ಲಿಯೇ ಇಲ್ಲ. ಮಹಿಳೆಯರ ಶೌಚಾಲಯ ಸುಸ್ಥಿತಿಯಲ್ಲಿಲ್ಲ ಎಂದು ಇತ್ತೀಚೆಗೆ ಕಾರ್ಯಕ್ರಮಕ್ಕೆ ಬಂದಿದ್ದ ಕೆಲ ಮಹಿಳೆಯರು ದೂರುತ್ತಿದ್ದರು.








ಕಳ್ಳ ಕಿಂಡಿ: ಕಲಾಮಂದಿರಕ್ಕೆ ಭದ್ರತೆಯೂ ಇಲ್ಲವಾಗಿದೆ. ಎಲ್ಲಾ ಬಾಗಿಲುಗಳನ್ನೂ ದೊಡ್ಡ ಬೀಗಗಳಿಂದ ಭದ್ರಗೊಳಿಸುತ್ತಾರೆ ಆದರೆ ನಿರ್ವಹಣೆ ವೈಫಲ್ಯದಿಂದ ನಿರ್ಮಾಣವಾಗಿರುವ ಕಳ್ಳಕಿಂಡಿಯನ್ನು ಮಾತ್ರ ಮುಚ್ಚಿಲ್ಲ. ಶೌಚಾಲಯದ ಕಿಟಕಿಯ ರಾಡುಗಳು ಮುರಿದಿದ್ದು, ಕಿರು ರಂಗಮಂದಿರದ ಕಡೆಯಿಂದ ಮನುಷ್ಯರು, ಪ್ರಾಣಿಗಳು ನಿರಾಯಾಸವಾಗಿ ಕಲಾಮಂದಿರದೊಳಗೆ ನುಸುಳಬಹುದು.

ಕಾಯಕಲ್ಪ ಯಾವಾಗ?

ಕಲಾಮಂದಿರಕ್ಕೆ ಹೊಸ ಸ್ಪರ್ಶ ನೀಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ನಡೆದಿದೆ ಎನ್ನಲಾಗಿತ್ತು. ಲೋಕಸಭಾ ಚುನಾವಣೆ ನಂತರ ತುರ್ತು ದುರಸ್ತಿ ಕಾರ್ಯ ಆರಂಭಿಸುವುದಾಗಿ ಅಧಿಕಾರಿಗಳು ಹೇಳಿದ್ದರು. ಆದರೆ ಈವರೆಗೆ ಯಾವುದೇ ಕೆಲಸ ಆರಂಭವಾದಂತೆ ಕಾಣುತ್ತಿಲ್ಲ. ಹೊಸ ಸ್ಪರ್ಶ ನೀಡುವ ಮುನ್ನ ಬಾಡಿಗೆ ಪಾವತಿಸಿ, ಕಾರ್ಯಕ್ರಮ ಮಾಡುವವರಿಗೆ ಕನಿಷ್ಠ ಸೌಲಭ್ಯ ಕಲ್ಪಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ವೇದಿಕೆ ಬಳಿಯೇ ಅವಲಕ್ಷಣ: ಕಲಾಮಂದಿರ ವೇದಿಕೆ ಎಡಬದಿ ಸ್ಪೀಕರ್ ಅಳವಡಿಸಿರುವ ಜಾಗದಲ್ಲಿ ಶೀಟ್ ಮುರಿದು ಬಿದ್ದಿದೆ. ಅದರೊಳಗಿನ ವೈರ್‌ಗಳು ನೇತಾಡುತ್ತಿವೆ. ವೇದಿಕೆ ಪಕ್ಕದಲ್ಲೇ ಈ ರೀತಿ ಅವಲಕ್ಷಣವಾಗಿದ್ದರೂ ಯಾವುದೇ ಕ್ರಮ ವಹಿಸದಿರುವುದು ಕಲಾಸಕ್ತರಲ್ಲಿ ಬೇಸರ ತರಿಸಿದೆ.

ಮೈಸೂರು ಮಿತ್ರ ಶುಕ್ರವಾರ 28 ಜೂನ್ 2024



ಮಡಿಕೇರಿ ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಿತ್ರಕಲಾ ಶಿಕ್ಷಕ ಬಿ.ಆರ್.ಸತೀಶ್ ಬಿಡಿಸಿದ ಕೆಂಪೇಗೌಡರ ಚಿತ್ರವನ್ನು ಶಾಸಕ ಡಾ.ಮಂತರ್‌ಗೌಡ, ಜಿಲ್ಲಾಧಿಕಾರಿ ವೆಂಕಟ್ ರಾಜಾ ಪ್ರದರ್ಶಿಸಿದರು.

ಕೆಂಪೇಗೌಡರ ಪ್ರತಿಮೆಗೆ ಜಾಗ ಗುರ್ತಿಸಿ

● ನಿರ್ಮಾಣಕ್ಕೆ ಜಿಲ್ಲಾಡಳಿತ ಮುಂದಾಗಲಿ ● ಕೆಂಪೇಗೌಡರ ಜಯಂತಿಯಲ್ಲಿ ಶಾಸಕ ಡಾ.ಮಂತರ್‌ಗೌಡ ಸಲಹೆ

ಮಡಿಕೇರಿ, ಜೂ.27–ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ಕೊಡಗು ಜಿಲ್ಲಾ ಕೇಂದ್ರ ಮಡಿಕೇರಿಯ ಹೃದಯ ಭಾಗದಲ್ಲಿ ನಿರ್ಮಿಸಲು ಜಿಲ್ಲಾಡಳಿತ ಜಾಗ ಗುರುತಿಸಬೇಕು ಎಂದು ಶಾಸಕ ಡಾ.ಮಂತರ್‌ಗೌಡ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಒಕ್ಕಲಿಗರ ಸಂಘ ಮತ್ತು ಕೊಡಗುಗೌಡ ಸಮಾಜಗಳ ವತಿಯಿಂದ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಂಗಳೂರು ನಿರ್ಮಾಣದಲ್ಲಿ ಕೆಂಪೇಗೌಡರ ಕೊಡುಗೆ ಅಪಾರ. ಆ ನಿಟ್ಟಿನಲ್ಲಿ ಜಾಗ ಗುರುತಿಸಿದ್ದಲ್ಲಿ ವಿವಿಧ ಸಂಘಟನೆಗಳೊಂದಿಗೆ ಕೆಂಪೇಗೌಡರ ಪ್ರತಿಮೆ ನಿರ್ಮಾಣಕ್ಕೆ ಮುಂದಾಗಲಾಗುವುದು ಎಂದು ಹೇಳಿದರು.

ಕೆಂಪೇಗೌಡರ ಜೀವನ ಚರಿತ್ರೆ ಅಧ್ಯಯನ ಮಾಡುವ ನಿಟ್ಟಿನಲ್ಲಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಪ್ರವಾಸ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ಎಲ್ಲಾ ಸಂಘಟನೆಗಳು ಸೇರಿ ಕೆಂಪೇಗೌಡರ ಜಯಂತಿಯನ್ನು ಮತ್ತಷ್ಟು ಅದ್ದೂರಿಯಾಗಿ ಆಚರಿಸೋಣ ಎಂದರು.

ಗೌಡ ಸಮಾಜಗಳ ಒಕ್ಕೂಟದ ನಿರ್ದೇಶಕ ಕುಯ್ಯಮುಡಿ ಅಶ್ವಿನಿಕುಮಾರ್ ಮಾತನಾಡಿ, ದೂರದೃಷ್ಟಿಯ ಚಿಂತಕ ಕೆಂಪೇಗೌಡರ ಚರಿತ್ರೆ ತಿಳಿಯಲು ಬೆಂಗಳೂರು ಅಥವಾ ಮೈಸೂರಿನಲ್ಲಿ ಕೆಂಪೇಗೌಡರ ಅಧ್ಯಯನ ಕೇಂದ್ರ ಆರಂಭಿಸಬೇಕು. ಅಂತಾರಾಷ್ಟ್ರೀಯ ನಗರವಾದ ಬೆಂಗಳೂರು ಇಡೀ ಪ್ರಪಂಚದಲ್ಲೇ ವೇಗವಾಗಿ ಬೆಳೆಯುತ್ತಿದೆ. ಇಸ್ರೋ ಸೇರಿದಂತೆ 20 ರಾಷ್ಟ್ರೀಯ ಸಂಸ್ಥೆಗಳನ್ನು ಒಳಗೊಂಡಿರುವ ನಗರವಾಗಿರುವುದು ವಿಶೇಷವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ, ಬೆಂಗಳೂರಿನ ಹೆಬ್ಬಾಳ, ಪಶುವೈದ್ಯ ಮಹಾವಿದ್ಯಾಲಯ, ಜಿಕೆವಿಕೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಬಳ್ಳಾರಿ ರಸ್ತೆ ಮಾರ್ಗದ ಸರ್ಕಾರಿ ಜಾಗವನ್ನು ಕೆಂಪೇಗೌಡರು ಅಂದೇ ಕಾಯ್ದಿರಿಸಿದ್ದರು. ಮಳೆ ನೀರನ್ನು ವೈಜ್ಞಾನಿಕವಾಗಿ ಸಂರಕ್ಷಿಸುವಲ್ಲಿ ಕೆಂಪೇಗೌಡರ ಕಾಲದಲ್ಲಿ ಅಭಿವೃದ್ಧಿ ಪಡಿಸಿರುವುದು ಶ್ಲಾಘನೀಯ. ಆದರ್ಶ ಆಡಳಿತಗಾರ ಕೆಂಪೇಗೌಡರು ಜನಸ್ನೇಹಿ ಆಡಳಿತ ನೀಡಲು ಶ್ರಮಿಸಿದ್ದಾರೆ ಎಂದು ಸ್ಮರಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಎಸ್.ಜಿ. ಮೇದಪ್ಪ, ಕೊಡಗು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಎಸ್.ಎನ್.ಚಂಗಪ್ಪ, ಕೊಡಗುಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಸೋಮಣ್ಣ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಅಪರ ಜಿಲ್ಲಾಧಿಕಾರಿ ಬಿ.ಎನ್.ವೀಣಾ, ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಪುಟ್ಟರಾಜು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಸಿ.ರಂಗಧಾಮಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುವಾರ, ಶಿಕ್ಷಕರಾದ ಕುವಾರ, ಮಣಜೂರು ಮಂಜುನಾಥ್, ವಿವಿಧ ಇಲಾಖೆ ಅಧಿಕಾರಿಗಳು ಇತರರು ಇದ್ದರು.

ಪ್ರಬಂಧ, ಚಿತ್ರಕಲಾ ಸ್ಪರ್ಧೆ

ಕಾರ್ಯಕ್ರಮದಲ್ಲಿ ಚಿತ್ರಕಲಾ ಶಿಕ್ಷಕ ಬಿ.ಆರ್.ಸತೀಶ್, ಕೆಂಪೇಗೌಡರ ಚಿತ್ರ ಬಿಡಿಸುವ ಮೂಲಕ ಗಮನಸೆಳೆದರು. ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ವ್ಯಾಪ್ತಿಯಲ್ಲಿ ಕೆಂಪೇಗೌಡರ ಜೀವನ ಚರಿತ್ರೆ ಕುರಿತು ಏರ್ಪಡಿಸಿದ್ದ ಪ್ರಬಂಧ ಮತ್ತು ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಮೈಸೂರಿನ ರಾಘವೇಂದ್ರ ಪ್ರಸಾದ್ ತಂಡದವರು ಕೆಂಪೇಗೌಡರ ಕುರಿತು ಹಾಡಿದರು.

ಅಂದಿನ ಕಾಲದಲ್ಲೇ ಕೆಂಪೇಗೌಡರ ಮಹಾನ್ ಕಾರ್ಯ



ವಿರಾಜಪೇಟೆಯಲ್ಲಿ ನಡೆದ ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಚಿತ್ರಕಲೆ, ಪ್ರಬಂಧ ಸ್ಪರ್ಧೆ ವಿಜೇತರಿಗೆ ಶಾಸಕ ಎ.ಎಸ್.ಪೊನ್ನಣ್ಣ ಬಹುಮಾನ ವಿತರಿದರು.

ವಿರಾಜಪೇಟೆ, ಜೂ.27–ನಾಡಪ್ರಭು ಕೆಂಪೇಗೌಡರು ಅಂದಿನ ಕಾಲದಲ್ಲೇ ದೂರ ದೃಷ್ಟಿಯಿಂದ ಕೆರೆಕಟ್ಟೆ ನಿರ್ಮಿಸುವ ಮೂಲಕ ಅನೇಕ ಮಹಾನ್ ಕಾರ್ಯಗಳನ್ನು ಮಾಡಿರುವುದರಿಂದ ಇಂದು ಬೆಂಗಳೂರು ದೇಶ–ವಿದೇಶಗಳಲ್ಲಿ ಗಮನ ಸೆಳೆಯುವಂತಾಗಿದೆ ಎಂದು ಶಾಸಕ ಎ.ಎಸ್. ಪೊನ್ನಣ್ಣ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಪುರಭವನದಲ್ಲಿ ಗುರುವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ಕೆಂಪೇಗೌಡರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೆಂಪೇಗೌಡರು ಕನ್ನಡ ಭಾಷೆಗೆ ನೀಡಿರುವ ಕೊಡುಗೆಯನ್ನು ಯಾರು ಮರೆಯುವಂತಿಲ್ಲ. ಕೆಂಪೇಗೌಡರು ಕಟ್ಟಿದ ನಾಡಿನಲ್ಲಿ ನಾವು ಜೀವನ ನಡೆಸುವುದೇ ಹೆಮ್ಮೆಯಾಗಿದೆ ಎಂದರು.

ಕೆಂಪೇಗೌಡರಿಂದ ನಾವು ಕಲಿಯುವುದು ಸಾಕಷ್ಟಿದೆ. ಆದರೆ, ಇಂದು ಕೆಲವೆಡೆ ಇತಿಹಾಸ ತಿರುಚುವ ಕೆಲಸವಾಗುತ್ತಿದೆ. ಅಧಿಕಾರ ಚಲಾಯಿಸುವುದು ಮುಖ್ಯವಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿರುವವರು ಉತ್ತಮ ಕೆಲಸ ಮಾಡಬೇಕು. ಒಕ್ಕಲಿಗ ಸಮುದಾಯ ರಾಜ್ಯ ಹಾಗೂ ದೇಶಕ್ಕೆ ತನ್ನದೆ ಕೊಡುಗೆ ನೀಡಿದೆ ಎಂದು ಹೇಳಿದರು.

ಸಂತ ಅನ್ನಮ್ಮ ವಿದ್ಯಾಸಂಸ್ಥೆಯ ಪ್ರಾಧ್ಯಾಪಕ ಗಂಗಾಧರ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್ ಮಾತನಾಡಿದರು. ತಹಸೀಲ್ದಾರ್ ರಾಮಚಂದ್ರ, ಕಸಾಪ ತಾಲೂಕು ಅಧ್ಯಕ್ಷ ರಾಜೇಶ್ ಪದ್ಮನಾಭ, ಜಿಲ್ಲಾ ಒಕ್ಕಲಿಗರ ಯುವ ವೇದಿಕೆ ಅಧ್ಯಕ್ಷ ಡಾಲು, ಕೊಡಗೂ ಒಕ್ಕಲಿಗರ ಸಂಘದ ಉಪಾಧ್ಯಕ್ಷ ನಾಗರಾಜು, ನಿರ್ದೇಶಕ ಸುರೇಶ್, ಬಗರ್‌ಹುಕುಂ ಸಮಿತಿ ತಾಲೂಕು ಅಧ್ಯಕ್ಷ ಆರ್.ಕೆ.ಸಲಾಂ, ಬಿಆರ್‌ಪಿ ವಾಮನಾ, ಪುರಸಭೆ ಸದಸ್ಯರು ಹಾಜರಿದ್ದರು.

ಇದೇ ವೇಳೆ ಕೆಂಪೇಗೌಡರ ಜಯಂತಿ ಪ್ರಯುಕ್ತ ಪ್ರಾಥಮಿಕ ಹಾಗೂ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಚಿತ್ರಕಲೆ, ಭಾಷಣ, ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಕೊಡಗಿನಲ್ಲಿ ತಗ್ಗಿದ ಮಳೆ ಅಬ್ಬರ

● ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್ ಮುಂದುವರಿಕೆ ● ಶಾಲಾ ಕೊಠಡಿ ಗೋಡೆಗೆ ಹಾನಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಗುರುವಾರ ಆರ್ದ್ರಾ ಮಳೆ ಅಬ್ಬರ ಕಡಿಮೆಯಾಗಿದ್ದರೂ, 'ಆರೆಂಜ್ ಅಲರ್ಟ್' ಮುಂದುವರೆದಿದೆ. ಈ ನಡುವೆ ಮಳೆಯಿಂದ ಸಣ್ಣಪುಟ್ಟ ಅವಾಂತರಗಳ ಬಗ್ಗೆ ವರದಿಯಾಗಿದೆ.

ಮಡಿಕೇರಿ ತ್ಯಾಗರಾಜ ಕಾಲೋನಿಯಲ್ಲಿ ಬುಧವಾರ ರಾತ್ರಿ ಸುರಿದ ಮಳೆಗೆ ಮನೆ ತಡೆಗೋಡೆ ಕುಸಿದು ಬಿದ್ದಿದ್ದು, 3 ಮನೆಗಳಿಗೆ ಅಪಾಯ ಎದುರಾಗಿದೆ. ಬರೆ ಕುಸಿದು ತಾಲೂಕಿನ ಕೊಯನಾಡು ಸರ್ಕಾರಿ ಶಾಲೆ ಕೊಠಡಿ ಕಿಟಿಕಿ, ಗೋಡೆ ಹಾನಿಯಾಗಿದ್ದು, ಶಾಲೆಗೆ ರಜೆ ನೀಡಿದ್ದ ಹಿನ್ನೆಲೆಯಲ್ಲಿ ಅಪಾಯ ತಪ್ಪಿದಂತಾಗಿದೆ.

ತಗ್ಗದ ಸಂಗಮ ಪ್ರವಾಹ: ಇನ್ನು ತಲಕಾವೇರಿ ಮತ್ತು ಭಾಗಮಂಡಲ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾದ ಹಿನ್ನೆಲೆಯಲ್ಲಿ ಕಳೆದ 2 ದಿನಗಳಿಂದ ತ್ರಿವೇಣಿ ಸಂಗಮ ಮುಳುಗಡೆಯಾದ ಸ್ಥಿತಿಯಲ್ಲಿದೆ. ಸಂಗಮಕ್ಕೆ ತೆರಳುವ ಮೆಟ್ಟಿಲುಗಳು ಮುಳುಗಿದ್ದು, ಸಂಗಮಕ್ಕೆ ಇಳಿಯುವುದನ್ನು ನಿಷೇಧಿಸಲಾಗಿದೆ. ಸಂಗಮದ ದಡದಲ್ಲೇ ಪಿಂಡ ಪ್ರದಾನ ಮತ್ತಿತರ ಧಾರ್ಮಿಕ ಕಾರ್ಯಗಳು ನಡೆಸುವ ಅನಿವಾರ್ಯತೆ ಭಕ್ತರಿಗೆ ಎದುರಾಗಿದೆ. ತ್ರಿವೇಣಿ ಸಂಗಮವನ್ನು ಇತ್ತೀಚೆಗೆ ಸಂಪೂರ್ಣ ಅಭಿವೃದ್ಧಿಗೊಳಿಸಿ, ಸುಂದರ ಉದ್ಯಾನ ನಿರ್ಮಿಸಲಾಗಿತ್ತು ಆದರೆ, ಕಾವೇರಿ ನದಿ ಪ್ರವಾಹದಿಂದ ಉದ್ಯಾನ ಮುಳುಗಿದೆ.



ಕಾವೇರಿ ನದಿ ಪ್ರವಾಹದಿಂದ ತ್ರಿವೇಣಿ ಸಂಗಮದ ಉದ್ಯಾನ ಮುಳುಗಿರುವುದು.

ನದಿಯಲ್ಲಿ ನೀರಿನ ಏರಿಕೆ: ಜಿಲ್ಲೆಯ ವಿವಿಧೆಡೆ ಧಾರಾಕಾರ ಮಳೆ ಸುರಿದ ಹಿನ್ನೆಲೆಯಲ್ಲಿ ತೊರೆಗಳ ಸಹಿತ ನದಿಗಳ ನೀರಿನಲ್ಲಿ ಏರಿಕೆಯಾಗಿದೆ. ಕಾವೇರಿ ನದಿ ಸಂಪೂರ್ಣವಾಗಿ ಮೈದುಂಬಿಕೊಂಡಿದ್ದು ಬಲಮುರಿ, ಸಿದ್ದಾಪುರ, ಕುಶಾಲನಗರ–ಕೊಪ್ಪ ಸೇತುವೆ ಬಳಿ ವಿಶಾಲವಾಗಿ ಹರಿಯುತ್ತಿದೆ. ಇತ್ತ ಮಡಿಕೇರಿ, ಸೋಮವಾರಪೇಟೆ ತಾಲೂಕು ವ್ಯಾಪ್ತಿಯ ಗ್ರಾಮೀಣ ಭಾಗಗಳಲ್ಲಿ ಉತ್ತಮ ಮಳೆಯಾಗಿ ಹಟ್ಟಿಹೊಳೆ ಹಾಗೂ ಮಾದಾಪುರ ಹೊಳೆಯಲ್ಲೂ ನೀರಿನ ಮಟ್ಟ ಏರಿಕೆಯಾಗಿದೆ.

ಒಳ ಹರಿವು ಹೆಚ್ಚಳ: ಹಾರಂಗಿ ಜಲಾನಯನ ಪ್ರದೇಶದಲ್ಲೂ ಉತ್ತಮ ಮಳೆಯಾದ ಹಿನ್ನೆಲೆಯಲ್ಲಿ ಜಲಾಶಯದ ಒಳ ಹರಿವಿನಲ್ಲೂ ಏರಿಕೆ ಕಂಡಿದೆ. ಜಲಾಶಯಕ್ಕೆ ಗುರುವಾರ ಬೆಳಗ್ಗಿನ ವೇಳೆಗೆ ಒಳಹರಿವಿನ ಪ್ರಮಾಣ 1425 ಕ್ಯೂಸೆಕ್ ಹೆಚ್ಚಳವಾಗಿದೆ. 2859 ಅಡಿ ನೀರಿನ ಸಂಗ್ರಹ ಸಾಮರ್ಥ್ಯವಿರುವ ಜಲಾಶಯದಲ್ಲಿ 2832.65 ಅಡಿಗಳಷ್ಟು ನೀರು ಸಂಗ್ರಹವಾಗಿದೆ.

ಕಾಡಾನೆಗಳ ದಾಳಿಗೆ ತೋಟದ ಫಸಲು ನಾಶ

ಸುಂಟಿಕೊಪ್ಪ, ಜೂ.27– ಚೆಟ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚೇರಳ ಶ್ರೀಮಂಗಲ ಹೊಸಮನೆ ಪೂವಯ್ಯ ಅವರ ತೋಟಕ್ಕೆ ಬುಧವಾರ ರಾತ್ರಿ 4 ಕಾಡಾನೆಗಳ ಹಿಂಡು ದಾಳಿ ನಡೆಸಿ ಫಸಲು ನಾಶಗೊಳಿಸಿವೆ.



ತೋಟದಲ್ಲಿದ್ದ ಅಡಕೆ, ಕಾಫಿ ಗಿಡ ಸಹಿತ ಹಲವು ಫಸಲುಗಳನ್ನು ಧ್ವಂಸಗೊಳಿಸಿದ್ದು, ಇದರಿಂದ 50 ಸಾವಿರ ನಷ್ಟ ಸಂಭವಿಸಿದೆ ಎಂದು ಪೂವಯ್ಯ ಅಳಲು ತೋಡಿಕೊಂಡಿದ್ದಾರೆ. ಕಾಡಾನೆಗಳ ಹಾನಿಗೆ ಪರಿಹಾರ ಕೋರಿ ಅರಣ್ಯ ಇಲಾಖೆಗೆ ದೂರು ಸಲ್ಲಿಸಿದ್ದಾರೆ.

ಹಲವು ದಿನಗಳಿಂದ ಕಾಡಾನೆಗಳು ನಿರಂತರವಾಗಿ ಕಾಡಿನಿಂದ ನಾಡಿಗೆ ಬಂದು ಸುತ್ತಮುತ್ತಲಿನ ತೋಟಗಳಿಗೆ ನುಗ್ಗಿ ಫಸಲು ನಾಶಪಡಿಸುತ್ತಿವೆ. ಕಾಫಿ ತೋಟಗಳಲ್ಲಿ ಕೂಲಿ ಕಾರ್ಮಿಕರು ಕೆಲಸಕ್ಕೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಕೂಡಲೇ ಅರಣ್ಯ ಇಲಾಖೆ ಕಾಡಾನೆಗಳನ್ನು ಕಾಡಿಗೆ ಓಡಿಸುವಂತೆ ಈ ಭಾಗದ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಹೃದಯಾಘಾತದಿಂದ ಯುವತಿ ಸಾವು

ನಾಪೋಕ್ಲು, ಜೂ.27– ಕೆಲಸಕ್ಕೆ ಹೋಗಲು ರೆಡಿಯಾಗುತ್ತಿದ್ದ ಯುವತಿ ಹೃದಯಾಘಾತದಿಂದ ಮನೆಯಲ್ಲಿ ಮೃತಪಟ್ಟ ಘಟನೆ ಸಮೀಪದ ನೆಲಜಿ ಗ್ರಾಮದಲ್ಲಿ ಗುರುವಾರ ನಡೆದಿದೆ.

ಗ್ರಾಮದ ಕಾಫಿ ಬೆಳೆಗಾರ ಮನವಟ್ಟಿರ ಪೊನ್ನಪ್ಪ(ಪೊನ್ನು) ಹಾಗೂ ಸೀತಾ ದಂಪತಿ ಪುತ್ರಿ ನಿಲಿಕಾ ಪೊನ್ನಪ್ಪ (24) ಮೃತಪಟ್ಟ ಯುವತಿ. ಈಕೆ ಮಡಿಕೇರಿಯ ಕೊಡಗು ವೈದ್ಯಕೀಯ ಕಾಲೇಜು ಮತ್ತು ಬೋಧಕ ಆಸ್ಪತ್ರೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಡಾಟಾ ಎಂಟ್ರಿ ಕೆಲಸ ಮಾಡುತ್ತಿದ್ದು, ಎಂದಿನಂತೆ ಬೆಳಗ್ಗೆ 7.54ರಲ್ಲಿ ಕೆಲಸಕ್ಕೆ ತೆರಳಲು ರೂಮಿನಲ್ಲಿ ರೆಡಿಯಾಗುತ್ತಿದ್ದಳು. ಈ ವೇಳೆ ಈಕೆ ಹಾಸಿಗೆ ಮೇಲೆ ಕುಸಿದು ಬಿದ್ದು ಮೃತಪಟ್ಟಿದ್ದಾಳೆ.



ನಿಲಿಕಾ ಪೊನ್ನಪ್ಪ

ಇದೀಗ ಮಗಳನ್ನು ಕಳೆದುಕೊಂಡ ಕುಟುಂಬ ಶೋಕ ಸಾಗರದಲ್ಲಿ ಮುಳುಗಿದೆ. ಮೃತರು ತಂದೆ ಮನವಟ್ಟಿರ ಪೊನ್ನಪ್ಪ ತಾಯಿ ಸೀತಾ, ಸಹೋದರಿ ನೀಲಿಮಾ, ಸಹೋದರ ಬೋಪಣ್ಣ ಅವರನ್ನು ಅಗಲಿದ್ದಾರೆ. ಸ್ವಗೃಹದ ಆವರಣದಲ್ಲಿ ಅಂತ್ಯಕ್ರಿಯೆ ನೆರವೇರಿತು.



ನಿಯಂತ್ರಣ ತಪ್ಪಿ ಪಿಕ್‌ಅಪ್ ವಾಹನ ಪಲ್ಟಿ

ಮಡಿಕೇರಿ, ಜೂ.27– ಕಬ್ಬಿಣದ ಪೈಪ್ ಸಾಗಿಸುತ್ತಿದ್ದ ಪಿಕ್‌ಅಪ್ ವಾಹನವೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆಯಲ್ಲಿ ಪಲ್ಟಿಯಾದ ಘಟನೆ ನಾಪೋಕ್ಲುವಿನಲ್ಲಿ ನಡೆದಿದೆ.

ನಾಪೋಕ್ಲುವಿನ ಮಾರುಕಟ್ಟೆ ಬಳಿ ನಿರ್ಮಾಣವಾಗುತ್ತಿರುವ ಕಟ್ಟಡವೊಂದರ ಕಾಮಗಾರಿಗೆ ಕಬ್ಬಿಣದ ಪೈಪ್ ಸಾಗಿಸುತ್ತಿದ್ದ ಪಿಕ್‌ಅಪ್ ವಾಹನ ಪೊಲೀಸ್ ಠಾಣೆಗೆ ತೆರಳುವ ರಸ್ತೆ ಬಳಿ ಪಲ್ಟಿಯಾಗಿದೆ. ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದು, ಈ ವೇಳೆ ರಸ್ತೆಯಲ್ಲಿ ಜನ ಸಂಚಾರ ಇಲ್ಲದಿದ್ದರಿಂದ ಅನಾಹುತ ತಪ್ಪಿದೆ.

ಕೆಂಪೇಗೌಡರ ಕೊಡುಗೆ ಬೆಂಗಳೂರು ವಿಶ್ವ ಪ್ರಸಿದ್ಧಿ

ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಸ್ಮರಣೆ

ಚಾಮರಾಜನಗರ, ಜೂ.27–ಬೆಂಗಳೂರನ್ನು ಸುಸಜ್ಜಿತ ಮಹಾನಗರವನ್ನಾಗಿ ನಿರ್ಮಿಸಿ ವಿಶ್ವ ಪ್ರಸಿದ್ಧಗೊಳಿಸಿದ ನಾಡಪ್ರಭು ಕೆಂಪೇಗೌಡರ ಕೊಡುಗೆ ಅಪಾರವಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಸ್ಮರಿಸಿದರು.

ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗ ಮಂದಿರದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಕೆಂಪೇಗೌಡರ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತ ಮಾತ್ರವಲ್ಲ ಇಡೀ ವಿಶ್ವಕ್ಕೆ ಪರಿಚಯವಾಗಿರುವ ಬೆಂಗಳೂರನ್ನು ಕಟ್ಟಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ. ಕೆಂಪೇಗೌಡರು ದಾರ್ಶನಿಕ, ಅಪ್ರತಿಮ ಹಾಗೂ ದಕ್ಷ ಆಡಳಿತಗಾರರಾಗಿದ್ದರು. ಅವರ ಸ್ಫೂರ್ತಿಯುತ ಜೀವನ ಸಾಧನೆಯನ್ನು ಇಂದು ಎಲ್ಲರೂ ಅರಿಯಬೇಕಾಗಿದೆ ಎಂದರು.

ಕುಡಿಯುವ ನೀರು ಹಾಗೂ ಕೃಷಿಗಾಗಿ ಅಂತರ್ಜಲ ವೃದ್ಧಿಯ ದೂರದೃಷ್ಟಿ ಚಿಂತನೆ ಹೊಂದಿದ್ದ ಕೆಂಪೇಗೌಡರು ಬೆಂಗಳೂರಿನಾದ್ಯಂತ ಸಾಕಷ್ಟು ಕೆರೆಗಳನ್ನು ಕಟ್ಟಿಸಿ, ರಾಜಕಾಲುವೆ ನಿರ್ಮಿಸಿದರು. ಸಾಮಾಜಿಕ ಸುಧಾರಣೆಗೆ ಹೆಚ್ಚು ಒತ್ತು ನೀಡಿದ್ದ ಕೆಂಪೇಗೌಡರು ಮಹಿಳೆಯರಿಗೆ ಸಮಾನ ಗೌರವಯುತ ಸ್ಥಾನಮಾನ ನೀಡಿದ್ದರು. ಇಂದಿನ ಯುವಜನರು ಕೆಂಪೇಗೌಡರ ಆದರ್ಶವನ್ನು ಅನುಸರಿಸಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು. ಅಸಹಾಯಕರಿಗೆ ಸಹಾಯಹಸ್ತ ಚಾಚಬೇಕು ಎಂದರು.

ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನ ಮಾತನಾಡಿ, ಕೆಂಪೇಗೌಡರು 500 ವರ್ಷಗಳ ಹಿಂದೆಯೇ ಬೆಂಗಳೂರು ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ್ದರು. ಇಂದು ಅದು ಮಾದರಿ ನಗರವಾಗಿ ಬೆಳೆದಿದೆ. ಕೆಂಪೇಗೌಡರು ಒಂದೇ ಸಮುದಾಯಕ್ಕೆ ಸೀಮಿತ ವ್ಯಕ್ತಿಯಲ್ಲ. ಅವರು ಎಲ್ಲಾ ವರ್ಗಗಳ ಜನರ ಶ್ರೇಯೋಭಿವೃದ್ಧಿಗೆ ಆದ್ಯತೆ ನೀಡಿದ್ದರು. ಅವರ ಆಡಳಿತ ಮಾದರಿಯನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

ಸಮಾಜದ ತಾಲೂಕು ಅಧ್ಯಕ್ಷ ಪುಟ್ಟಸ್ವಾಮಿಗೌಡ ಮಾತನಾಡಿದರು. ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ, ಸಮಾಜದ ಮುಖಂಡರು, ಕನ್ನಡಪರ ಸಂಘಟನೆಗಳ ಮುಖಂಡರು, ಜಿಲ್ಲಾ ಮಟ್ಟದ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಚಾಮರಾಜನಗರದದಲ್ಲಿ ನಡೆದ ಕೆಂಪೇಗೌಡರ ಜಯಂತಿ ಆಚರಣೆ ಕಾರ್ಯಕ್ರಮವನ್ನು ಡಾ.ಬಿ.ಸಿ.ವಿಜಯ್ ಕುಮಾರ್ ಬಲ್ಲೇನಹಳ್ಳಿ ಉದ್ಘಾಟಿಸಿದರು. ಜಿಲ್ಲಾಧಿಕಾರಿ ಶಿಲ್ಪನಾಗ್ ಇದ್ದರು.

> "ಬದುಕು ಪ್ರದರ್ಶನ, ನಿದರ್ಶನ, ವಿಲಾಸಕ್ಕಲ್ಲ, ವಿಕಾಸಕ್ಕಾಗಿ ಎಂಬುದನ್ನು ಸಾಧಿಸಿ ತೋರಿಸಿದವರು ಕೆಂಪೇಗೌಡರು. ವಿಜಯನಗರದ ಸಾಮಂತ ರಾಜರಾಗಿದ್ದ ಕೆಂಪೇಗೌಡರು ವಿಜಯನಗರದ ಮಾದರಿಯಲ್ಲೇ ಬೆಂಗಳೂರನ್ನು ಕಟ್ಟುವ ಆಶಯವನ್ನು ಹೊಂದಿದ್ದರು.
>
> –ಡಾ.ಬಿ.ಸಿ.ವಿಜಯ್ ಕುಮಾರ್ ಬಲ್ಲೇನಹಳ್ಳಿ, ಮೈಸೂರಿನ ದಕ್ಷಿಣ ವಲಯ ಕ್ಷೇತ್ರ ಸಂಪನ್ಮೂಲ ವ್ಯಕ್ತಿ

ಮೆರವಣಿಗೆಗೆ ಕಲಾತಂಡಗಳ ಮೆರಗು



ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಶಿಚಾಮರಾಜೇಶ್ವರ ದೇವಾಲಯದಿಂದ ಜಿಲ್ಲಾಡಳಿತ ಭವನದವರೆಗೆ ಬೆಳ್ಳಿರಥದಲ್ಲಿ ಅಲಂಕೃತ ಕೆಂಪೇಗೌಡರ ಭಾವಚಿತ್ರ ಮೆರವಣಿಗೆಯನ್ನು ವಿವಿಧ ಕಲಾತಂಡಗಳೊಂದಿಗೆ ನಡೆಸಲಾಯಿತು. ಇದೇ ವೇಳೆ ಕೆಂಪೇಗೌಡರ ಜೀವನ ಸಾಧನೆಗಳ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಏರ್ಪಡಿಸಿದ್ದ ಚಿತ್ರಕಲೆ, ಭಾಷಣ, ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸ್ಮರಣಿಕೆ, ಪ್ರಮಾಣಪತ್ರ, ನಗದು ಬಹುಮಾನ ನೀಡಲಾಯಿತು.

ಸನ್ಮಾನ ಸ್ವೀಕರಿಸಿ, ಲಂಚ ಪಡೆದು ಕೆಲಸ ಮಾಡಿಕೊಡಿ

● ಜೆಇ ವಿರುದ್ಧ ಗ್ರಾಹಕರ ಆಕ್ರೋಶ ● ಸೆಸ್ಕ್ ಜನಸಂಪರ್ಕ ಸಭೆಯಲ್ಲಿ ದೂರುಗಳ ಸುರಿಮಳೆ



ಕೊಳ್ಳೇಗಾಲದಲ್ಲಿ ನಡೆದ ಸೆಸ್ಕ್ ಜನಸಂಪರ್ಕ ಸಭೆಯಲ್ಲಿ ಅಧಿಕಾರಿಗಳ ವಿರುದ್ಧ ಗ್ರಾಹಕ ಶಶಿಕುಮಾರ್, ಎಇಇ ರಾಜು ಅವರಿಗೆ ದೂರು ಸಲ್ಲಿಸಿದರು.

ಕೊಳ್ಳೇಗಾಲ, ಜೂ.27–ನಾನು ನಿಮ್ಮನ್ನು ಸನ್ಮಾನ ಮಾಡಲು ಹಾರ ಹಾಗೂ ಶಾಲು ತಂದಿರುವೆ, ಸನ್ಮಾನ ಬಳಿಕ ಲಂಚವನ್ನು ನೀಡುವೆ. ಅದನ್ನು ಪಡೆದು ನನ್ನ ಸಮಸ್ಯೆ ನಿವಾರಿಸಿ ಎಂದು ಗ್ರಾಹಕರೊಬ್ಬರು ಸೆಸ್ಕ್ ಜನಸಂಪರ್ಕ ಸಭೆಯಲ್ಲಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಸೆಸ್ಕ್ ಉಪವಿಭಾಗ ಕಚೇರಿ ಆವರಣದಲ್ಲಿ ಗುರುವಾರ ಎಇಇ ರಾಜು ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ ತ್ರೈಮಾಸಿಕ ಜನಸಂಪರ್ಕ ಸಭೆಯಲ್ಲಿ ಸತ್ತೇಗಾಲ ನಿವಾಸಿ ಎಂ.ಶಶಿಕುಮಾರ್, ಸನ್ಮಾನ, ಹಣ ಸ್ವೀಕರಿಸಿ ನಮ್ಮ ಕೆಲಸ ಮಾಡಿಕೊಡಿ ಎಂದು ಅಧಿಕಾರಿಗಳ ಕರ್ತವ್ಯಲೋಪ, ನಿರ್ಲಕ್ಷ್ಯ ಖಂಡಿಸಿದರು.

ಸತ್ತೇಗಾಲ ಪಟ್ಟಾಭಿಶೆಟ್ಟಿ ಕೆರೆ ಸಮೀಪದ ನನ್ನ ಜಮೀನಿನ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಪಡೆದಿದ್ದೇನೆ. ಆದರೆ, ಈ ವ್ಯಾಪ್ತಿಯಲ್ಲಿ 100 ಕೆವಿ ಟಿಸಿಗೆ 30ಕ್ಕೂ ಹೆಚ್ಚು ಕೊಳವೆ ಬಾವಿಗೆ ಸಂಪರ್ಕ ನೀಡಲಾಗಿದೆ ಇದರಿಂದ ಲೋಡ್ ಜಾಸ್ತಿ ಆಗಿ ಆಗಾಗ್ಗೆ ದುರಸ್ತಿಯಾಗುತ್ತಿದೆ. ಆದ್ದರಿಂದ ಹೊಸ ಟಿಸಿ ಅಳವಡಿಸುವಂತೆ ಕಳೆದ 8 ತಿಂಗಳಿನಿಂದ ಮನವಿ ಮಾಡುತ್ತಿದ್ದರೂ ಪ್ರಯೋಜನವಾಗಿಲ್ಲ ಎಂದು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಜಾಗೇರಿ ಸರ್ವೇ ನಂ.174ರ ಮೀಸಲು ಅರಣ್ಯ ಪ್ರದೇಶಕ್ಕೆ ಅಕ್ರಮವಾಗಿ ವಿದ್ಯುತ್ ನೀಡಲಾಗುತ್ತಿದೆ. ಆದರೆ, ಆರ್‌ಆರ್ ನಂಬರ್ ಹೊಂದಿರುವ ನಮಗೆ ಟಿಸಿ ಅಳವಡಿಸಿಕೊಡುತ್ತಿಲ್ಲ. ಇದರಿಂದ ತೊಂದರೆಯಾಗುತ್ತಿದೆ. ಈಗಾಗಲೇ ಎಸ್ಸಿ, ಎಸ್ಟಿ ಕುಂದುಕೊರತೆ ಸಭೆಯಲ್ಲಿ ಕೂಡ ಈ ಬಗ್ಗೆ ಮನವಿ ಮಾಡಿದ್ದೇನೆ. ಜೆಇ ಮಹದೇವಸ್ವಾಮಿ ಹಣ ಕೊಟ್ಟವರಿಗೆ ಮಾತ್ರ ಕೆಲಸ ಮಾಡಿಕೊಡುತ್ತಾರೆ ಎಂದು ದೂರಿದರು.

ಬಳಿಕ ಜೆಇ ಮಹದೇವಸ್ವಾಮಿ ಮಾತನಾಡಿ, ಈಗಾಗಲೇ ನಾನು ಟಿಸಿ ಅಗತ್ಯವಿರುವ ಕುರಿತು ಇಡೆಂಟ್ ಹಾಕಿ ಹಿರಿಯ ಅಧಿಕಾರಿಗಳಿಗೆ ಕಳುಹಿಸಿದ್ದೇನೆ. ನಾನು ಯಾವ ಲಂಚವನ್ನು ಪಡೆದು ಕೆಲಸ ಮಾಡುತ್ತಿಲ್ಲ. ನಾನು ಹಣ ಕೇಳಿರುವುದಕ್ಕೆ ಸಾಕ್ಷಿ ಇದ್ದರೇ ನೀಡಲಿ ಎಂದರು. ನಂತರ ಎಇಇ ರಾಜು ಮಾತನಾಡಿ, ಶೀಘ್ರದಲ್ಲಿ ಶಶಿಕುಮಾರ್ ಅರ್ಜಿ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ವಿದ್ಯುತ್ ಬಳಕೆದಾರರ ಸಂಘದ ಕಾರ್ಯದರ್ಶಿ ಸುಂದರರಾಜು, ನಗರಸಭೆ ಮಾಜಿ ಸದಸ್ಯ ನರಸಿಂಹನ್, ಸೆಸ್ಕ್ ಸಹಾಯಕ ಇಂಜಿನಿಯರ್ ಮಧುಸೂದನ್, ಮಹೇಶ್ ಇನ್ನಿತರರು ಇದ್ದರು

ರಾಜ್ಯ ಸರ್ಕಾರ 5 ವರ್ಷ ಪೂರೈಸಲಿದೆ

ಗುಂಡ್ಲುಪೇಟೆ, ಜೂ.27– ರಾಜ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದು, 5 ವರ್ಷ ಪೂರೈಸಲಿದೆ ಎಂದು ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಭೆ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ಸ್ಮಾರ್ಟ್‌ಫೋನ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷದವರು ಸರ್ಕಾರದ ಯೋಜನಗಳ ವಿರುದ್ಧ ಪದೇ ಪದೆ ಜನರಲ್ಲಿ ಸುಳ್ಳು ಸುದ್ದಿ ಹರಡಿ ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ, ಫಲಾನುಭವಿಗಳು ಇದರ ಬಗ್ಗೆ ಗಮನಕೊಡಬೇಡಿ ಎಂದರು.

ಕಾಂಗ್ರೆಸ್ ನುಡಿದಂತೆ ನಡೆದಿದ್ದು, ಯೋಜನೆಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ರೂಪಿಸಿದೆ. ಈ ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಜಮೆಯಾಗದಿರುವ ಬಗ್ಗೆ ಪರಿಶೀಲಿಸಿ, ತಾಂತ್ರಿಕ ಸಮಸ್ಯೆ ಸರಿಪಡಿಸಲಾಗುತ್ತಿದೆ ಎಂದು ತಿಳಿಸಿದರು.

ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹೇಮಾವತಿ ಮಾತನಾಡಿ, ತಾಲೂಕು ವ್ಯಾಪ್ತಿಯಲ್ಲಿ ಇಲಾಖೆ ವತಿಯಿಂದ ಗ್ಯಾರಂಟಿಗಳ ಪೈಕಿ ಗೃಹಲಕ್ಷ್ಮಿ ಯೋಜನೆಯ ಸಾಧನೆ ಬಗ್ಗೆ ಮಾಹಿತಿ ನೀಡಿದರು.

ಇದೇ ವೇಳೆ ಅಂಗನವಾಡಿ ಕಾರ್ಯಕರ್ತೆಯರಿಗೆ ಸ್ಮಾರ್ಟ್‌ಫೋನ್ ಹಾಗೂ ಕ್ರೀಡಾಕೂಟದ ವಿಜೇತ ಅಂಗನವಾಡಿ ಮಕ್ಕಳಿಗೆ ಪ್ರಶಸ್ತಿ ವಿತರಿಸಲಾಯಿತು. ತಹಸೀಲ್ದಾರ್ ರಮೇಶ್ ಬಾಬು, ತಾಪಂ ಇಓ ರಾಮಲಿಂಗಯ್ಯ, ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಹೊಂಗನೂರು ಚಂದ್ರು, ಉಪಾಧ್ಯಕ್ಷರಾದ ರಾಜಶೇಖರ್, ಪ್ರದೀಪ್ ಕುಮಾರ್, ಸದಸ್ಯರಾದ ಉಮಾಪತಿ, ಪ್ರದೀಪ್, ರವಿಕುಮಾರ್ ಹಾಗೂ ಇತರರು ಇದ್ದರು.



ಗುಂಡ್ಲುಪೇಟೆಯಲ್ಲಿ ನಡೆದ ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ಸಭೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಸ್ಮಾರ್ಟ್‌ಫೋನ್ ವಿತರಿಸಿದರು.

ಮೂವರು ಬೇಟೆಗಾರರ ಬಂಧನ
ನಾಡಬಂದೂಕು ವಶ



ಬೇಟೆಗಾರರಾದ ಮರಿಯ ಲೂಯಿಸ್, ವಿನ್ಸೆಂಟ್‌ನನ್ನು ಅರಣ್ಯಾಧಿಕಾರಿಗಳು ಬಂಧಿಸಿರುವುದು.

ಹನೂರು, ಜೂ.27–ಶಾಗ್ಯ ಗ್ರಾಮ ಸಮೀಪದ ಕಾವೇರಿ ವನ್ಯಧಾಮದಲ್ಲಿ ವನ್ಯಪ್ರಾಣಿಗಳ ಬೇಟೆಯಾಡಿದ್ದ ಮೂವರನ್ನು ಅರಣ್ಯಾಧಿಕಾರಿಗಳು ಬಂಧಿಸಿ, ಎರಡು ನಾಡಬಂದೂಕುಗಳನ್ನು ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಮರಿಯ ಮಂಗಲ ಗ್ರಾಮದ ಮರಿಯ ಲೂಯಿಸ್(40), ವಿನ್ಸೆಂಟ್(54) ಹಾಗೂ ಸೆಲ್ವನಾಥನ್(41) ಬಂಧಿತರು.

ಈ ಮೂವರು ಶಾಗ್ಯ ಸಮೀಪದ ಅರಣ್ಯ ಪ್ರದೇಶಕ್ಕೆ ನಾಡಬಂದೂಕಿನೊಂದಿಗೆ ಬೇಟೆಗೆ ತೆರಳಿದ್ದರು. ಈ ವೇಳೆ ಸೆಲ್ವನಾಥ್‌ಗೆ ಹಾವು ಕಚ್ಚಿದ್ದರಿಂದ ಊರಿಗೆ ವಾಪಸ್ ಬರುತ್ತಿರುವಾಗ ಶಾಗ್ಯ ಶಾಖೆಯ ಬೇಟೆಗಾರನಗುಡ್ಡದ ಗಸ್ತಿನ ಪುಷ್ಪಪುರ ಕಾಲುದಾರಿ ಅರಣ್ಯ ಪ್ರದೇಶದಲ್ಲಿ ಅರಣ್ಯಾಧಿಕಾರಿಗಳಿಗೆ ಸಿಕ್ಕಿಬಿದ್ದಿದ್ದಾನೆ. ಬಳಿಕ ಈತನನ್ನು ವಿಚಾರಿಸಿದ್ದಾಗ ಲೂಯಿಸ್ ಹಾಗೂ ವಿನ್ಸೆಂಟ್ ಸಿಕ್ಕಿಬಿದ್ದಿದ್ದಾರೆ.

ನಂತರ ಅರಣ್ಯಾಧಿಕಾರಿಗಳು ಎರಡು ನಾಡಬಂದೂಕು ಮತ್ತು ಕೃತ್ಯಕ್ಕೆ ಬಳಸಿದ ಇತರೆ ವಸ್ತುಗಳನ್ನು ವಶಕ್ಕೆ ಪಡೆದು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಹಾವು ಕಚ್ಚಿರುವ ಬಂಧಿತ ಸೆಲ್ವನಾಥ್‌ನನ್ನು ಕಾಮಗೆರೆ ಹೋಲಿಕ್ರಾಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಾವೇರಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ.ಸಿ.ಸುರೇಂದ್ರ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಸ್.ನಾಗೇಂದ್ರ ಪ್ರಸಾದ್ ಮಾರ್ಗದರ್ಶನದಲ್ಲಿ ವಲಯ ಅರಣ್ಯಾಧಿಕಾರಿ ನಿರಂಜನ ನೇತೃತ್ವದಲ್ಲಿ ಉಪ ವಲಯ ಅರಣ್ಯಾಧಿಕಾರಿ ಯಲಗೂರಪ್ಪ ಗುಬ್ಬಿ, ಗಸ್ತು ವನಪಾಲಕರಾದ ವಿವೇಕಾನಂದ ಸತ್ಯಪ್ಪ ಹಡಗಿನಾಳ, ರುದ್ರಾಪುರಂ, ರವಿಚಂದ್ರ ಎನ್. ದಾಸನಟ್ಟಿ, ಅರಣ್ಯ ವೀಕ್ಷಕ ಪ್ರಭು, ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.



'ಜಿಗರ್' ರೊಮ್ಯಾಂಟಿಕ್ ಹಾಡು

ಈವರೆಗೆ ಲವರ್ ಬಾಯ್ ಪಾತ್ರಗಳನ್ನೇ ಮಾಡುತ್ತಿದ್ದ ಪ್ರವೀಣ್ ತೇಜ್ ಜಿಗರ್ ಎಂಬ ಚಿತ್ರದ ಮೂಲಕ ಮಾಸ್ ಹೀರೋ ಆಗಿ ಎಂಟ್ರಿ ಕೊಡುತ್ತಿದ್ದಾರೆ. ಸೂರಿ ಕುಂದರ್ ನಿರ್ದೇಶನವಿರೋ ಈ ಚಿತ್ರವೀಗ ಬಿಡುಗಡೆಗೆ ಸಿದ್ಧವಾಗಿದೆ. ಚಿತ್ರದ ಟ್ರೇಲರ್ ರಿಲೀಸ್ ಮಾಡುವ ಮೂಲಕ ತಂಡ ಪ್ರೇಕ್ಷಕರಿಗೆ ಆಮಂತ್ರಣ ನೀಡಿದೆ. ಈ ಚಿತ್ರವನ್ನು ಯು.ಕೆ. ಪ್ರೊಡಕ್ಷನ್ಸ್ ಮೂಲಕ ಪೂಜಾ ವಸಂತ್ ಕುಮಾರ್ ಅವರು ನಿರ್ಮಾಣ ಮಾಡಿದ್ದಾರೆ. ನಟ ಧರ್ಮಣ್ಣ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ನಿರ್ದೇಶಕ ಸೂರಿಕುಂದರ್ ಮಾತನಾಡುತ್ತ, ಲೋನ್ ರಿಕವರಿ ಏಜೆಂಟ್ ಸುತ್ತ ನಡೆಯುವ ಕಥೆಯೊಂದನ್ನು ಈ ಚಿತ್ರದಲ್ಲಿ ಹೇಳಲು ಪ್ರಯತ್ನಿಸಿದ್ದೇನೆ. ನಾಯಕ ಪ್ರವೀಣ್ ಮೂರು ರಿಸ್ಕಿ ಆಕ್ಷನ್‌ಗಳನ್ನು ಮಾಡಿದ್ದಾರೆ, ಲವ್ ಸ್ಟೋರಿ ಜೊತೆಗೆ ಕ್ರೈಮ್, ಆಕ್ಷನ್‌ನಂಥ ಎಂಟರ್‌ಟೈನಿಂಗ್ ಅಂಶಗಳೂ ಚಿತ್ರದಲ್ಲಿವೆ. ನನ್ನ ಜೀವನದಲ್ಲಿ ನಡೆದ, ನೋಡಿದ ಅನುಭವಗಳನ್ನೇ ಇಟ್ಟುಕೊಂಡು ಈ ಚಿತ್ರವನ್ನು ನಿರ್ದೇಶಿಸಿದ್ದೇನೆ. ಕುಂದಾಪುರ, ಉಡುಪಿ, ಮಲ್ಪೆ, ಮರವಂತೆ, ಮಂಗಳೂರು ಸುತ್ತಮುತ್ತ ಕರಾವಳಿ ಬ್ಯಾಕ್‌ಡ್ರಾಪ್‌ನಲ್ಲಿ ಚಿತ್ರವನ್ನು ಸೆರೆಹಿಡಿಯಲಾಗಿದೆ. ಹಿರಿಯನಟಿ ವಿನಯಾಪ್ರಸಾದ್ ಅವರು ತಾಯಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಬಲರಾಜವಾಡಿ ಅವರು ಮತ್ತೊಂದು ಪ್ರಮುಖ ಪಾತ್ರದಲ್ಲಿದ್ದಾರೆ ಎಂದು ಹೇಳಿದರು. ಅನೇಕ ಸಿನಿಮಾಗಳಿಗೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದ ಸೂರಿ ಕುಂದರ್, ಜಿಗರ್ ಚಿತ್ರದ ಮೂಲಕ ಪೂರ್ಣಪ್ರಮಾಣದ ನಿರ್ದೇಶಕರಾಗಿದ್ದಾರೆ.

ಈ ಚಿತ್ರದಲ್ಲಿ ಪ್ರವೀಣ್‌ತೇಜ್ ಜೊತೆ ನಾಯಕಿಯಾಗಿ ವಿಜಯ್‌ಶ್ರೀ ಕಾಣಿಸಿಕೊಂಡಿದ್ದಾರೆ. ವಿಜಯ್‌ಶ್ರೀ ಅವರು ತನ್ನ ಪಾತ್ರದ ಕುರಿತು ಮಾತನಾಡುತ್ತ, ಸಾಲ್ಟ್ ಚಿತ್ರದ ನಂತರ ನಾನು ನಟಿಸಿದ ಎರಡನೇ ಚಿತ್ರ, ಪಾತ್ರ ತುಂಬಾ ವಿಭಿನ್ನವಾಗಿದೆ ಎಂದರು. ಛಾಯಾಗ್ರಾಹಕ ಶಿವಸೇನಾ ಮಾತನಾಡಿ, ಎಲ್ಲರ ಸಪೋರ್ಟ್‌ನಿಂದ ಈ ಸಿನಿಮಾ ಇಷ್ಟು ಚೆನ್ನಾಗಿ ಮೂಡಿಬರಲು ಸಾಧ್ಯವಾಯಿತು ಎಂದರು. ಸಂಗೀತ ನಿರ್ದೇಶಕ ರುತ್ವಿಕ್ ಮುರಳೀಧರ್ ಮಾತನಾಡಿ, ಖಾಕಿ ನಂತರ ಮಾಡಿದ ಕಮರ್ಷಿಯಲ್ ಚಿತ್ರ, ರೋವರ್‌ಕಾವರ್ ಸಿನಿಮಾದ ಮೂಲಕ ನನ್ನ ಜರ್ನಿ ಶುರುವಾಯಿತು, ಸಂಚಿತ್ ಹೆಗ್ಡೆ, ವಿಜಯಪ್ರಕಾಶ್, ವರುಣ್ ಗೀತೆಗಳಿಗೆ ದನಿಯಾಗಿದ್ದಾರೆ ಎಂದರು. ನಾಯಕಿಯ ಅಣ್ಣನಾಗಿ ಕಾಣಿಸಿಕೊಂಡಿರುವ ದಿಲೀಪ್, ಭವ್ಯ ಪೂಜಾರಿ, ಲೋಕೇಶ್, ಅನಿಲ್ ಇತರರು ತಮ್ಮ ಪಾತ್ರಗಳ ಕುರಿತಂತೆ ಚಿಕ್ಕದಾಗಿ ಹೇಳಿಕೊಂಡರು. ರಮೇಶ್ ಬಾಬು ಅವರು ಈ ಚಿತ್ರವನ್ನು ರಾಜ್ಯಾದ್ಯಂತ ವಿತರಣೆ ಮಾಡುತ್ತಿದ್ದಾರೆ.

ಜುಲೈನಲ್ಲಿ 'ಅಪ್ಪು ಕಪ್-2'



ಪುನೀತ್ ರಾಜ್‌ಕುಮಾರ್ ಕಲೆಯ ಜೊತೆಗೆ ಕ್ರಿಕೆಟ್ ಬಗ್ಗೆಯೂ ತುಂಬಾ ಆಸಕ್ತಿ ಹೊಂದಿದ್ದರು. ಅವರ ನೆನಪಿಗಾಗಿ ಕಳೆದ ವರ್ಷ ಅಪ್ಪು ಕಪ್ ಆಯೋಜಿಸಿದ್ದ ಚೇತನ್ ಸೂರ್ಯ ಮುಂದಿನ ತಿಂಗಳು ಚಲನಚಿತ್ರ ಹಾಗೂ ಕಿರುತೆರೆ ಕಲಾವಿದರಿಗಾಗಿ ಅಪ್ಪು ಕಪ್ ಸೀಜನ್-2 ಆಯೋಜಿಸಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಸಕ್ರಿಯನಾಗಿರುವ ಚೇತನ್ ಸೂರ್ಯ ಅವರ ಸ್ಟೆಲ್ಲರ್ ಸ್ಟುಡಿಯೋ ಹಾಗೂ ಪಿಆರ್‌ಕೆ ಆಡಿಯೋ ಆಯೋಜಿಸಿರುವ ಶಟಲ್ ಬ್ಯಾಡ್ಮಿಂಟನ್ ಟೂರ್ನಿಯ ಅಪ್ಪು ಕಪ್ ಸೀಸನ್ 2 ಜುಲೈ ಅಂತ್ಯದಲ್ಲಿ ನಡೆಯಲಿದೆ. ಇತ್ತೀಚೆಗೆ ಈ ಟೂರ್ನಿಯ ಟೀಮ್ ಬಿಲ್ಡಿಂಗ್ ಕಾರ್ಯಕ್ರಮ ನಡೆಯಿತು. ಅಶ್ವಿನಿ ಪುನೀತ್ ರಾಜಕುಮಾರ್, ವಿಧಾನಪರಿಷತ್ ಸದಸ್ಯ ಶರವಣ ಸೇರಿದಂತೆ ಚಿತ್ರರಂಗದ ಹಲವಾರು ಗಣ್ಯರು ಆಗಮಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ಮಾತನಾಡಿದ ಚೇತನ್ ಸೂರ್ಯ, ಕಳೆದ ಹನ್ನೆರಡು ವರ್ಷಗಳಿಂದ ಕಿರುತೆರೆ ಹಾಗೂ ಹಿರಿತೆರೆಯಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿದ್ದೇನೆ. ಪುನೀತ್ ರಾಜಕುಮಾರ್ ಅವರ ನೆನಪಿಗಾಗಿ ಕಳೆದ ವರ್ಷ ಅಪ್ಪು ಕಪ್ ಟೂರ್ನಿ ಪ್ರಾರಂಭಿಸಿದ್ದೆವು. ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಸಹ ಪಿಆರ್‌ಕೆ ಆಡಿಯೋ ನಮ್ಮ ಜೊತೆ ಕೈಜೋಡಿಸುವುದಾಗಿ ಹೇಳಿದ್ದರು. ಈಗ ಅವರೇ ಬಂದು ಉದ್ಘಾಟನೆ ನೆರವೇರಿಸಿದ್ದಾರೆ. ಜುಲೈ 13ರಿಂದ ಟೂರ್ನಿಗಳು ಪ್ರಾರಂಭವಾಗಲಿವೆ ಎಂದರು. ಸತತವಾಗಿ ಮೂರು ವರ್ಷ ಗೆದ್ದ ತಂಡಕ್ಕೆ ಅಪ್ಪು ಭಾವಚಿತ್ರ ಹೊಂದಿದ ಐದು ಕೆಜಿ ತೂಕದ ಬೆಳ್ಳಿಯ ಟ್ರೋಫಿಯನ್ನು ನೀಡಲಾಗುವುದು.

ವಿಷ್ಣು ಮಂಚು 'ಕಣ್ಣಪ್ಪ' ಟೀಸರ್ ಬಿಡುಗಡೆ



ಬಹು ಭಾಷೆಯಲ್ಲಿ, ಬಿಗ್ ಬಜೆಟ್‌ನಲ್ಲಿ ಅದ್ಧೂರಿಯಾಗಿ ನಿರ್ಮಾಣವಾಗುತ್ತಿರುವ ವಿಷ್ಣು ಮಂಚು ಅಭಿನಯದ ಚಿತ್ರ ಕಣ್ಣಪ್ಪ. ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ವಿಷ್ಣು ಮಂಚು ಅವರ ಕನಸಿನ ಪ್ರಾಜೆಕ್ಟ್ ಆದ ಕಣ್ಣಪ್ಪ ಚಿತ್ರವನ್ನು ಅವರ ತಂದೆ ಡಾ. ಮೋಹನ್‌ಬಾಬು ನಿರ್ಮಿಸಿದ್ದಾರೆ ಮುಖೇಶ್ ಕುಮಾರ್ ಸಿಂಗ್ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಮೋಹನ್ ಬಾಬು, ಪರಮೇಶ್ವರನ ಒಪ್ಪಿಗೆಯ ಮೇರೆಗೆ ನಾವು ಈ ಚಿತ್ರವನ್ನು ನಿರ್ಮಿಸಿದ್ದೇವೆ. ಚಿತ್ರ ತುಂಬಾ ಅಚ್ಚುಕಟ್ಟಾಗಿ ಬಂದಿದೆ. ಬಹುಭಾಷೆಯ ತಾರೆಯರು ನಮ್ಮ ಸಿನಿಮಾದಲ್ಲಿ ನಟಿಸಿದ್ದಾರೆ ಎಂದರು.

ಚಿತ್ರದ ನಾಯಕ ವಿಷ್ಣು ಮಂಚು ಮಾತನಾಡಿ, ಕಣ್ಣಪ್ಪ ಚಿತ್ರವನ್ನು ಎಲ್ಲರೂ ಕುತೂಹಲದಿಂದ ಕಾಯುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಸಿನಿಮಾಕ್ಕೆ ಸಿಗುತ್ತಿರುವ ಬೆಂಬಲ ನೋಡಿ ನಮ್ಮ ಶ್ರಮ ಸಾರ್ಥಕವಾದಂತೆ ಅನಿಸಿದೆ. ಕಣ್ಣಪ್ಪ ಸಿನಿಮಾ ಪಯಣ 2014-15ರಲ್ಲಿ ಶುರುವಾಗಿತ್ತು. ತಂದೆ ಮೋಹನ್‌ಬಾಬು, ವಿನ್ನಿ ಮತ್ತು ಸಹೋದರ ವಿನಯ್ ಅವರ ಪ್ರೋತ್ಸಾಹದಿಂದಾಗಿ ಇದೀಗ ಚಿತ್ರ ರಿಲೀಸ್ ಹಂತಕ್ಕೆ ಬಂದಿದೆ. ಕಣ್ಣಪ್ಪ ಸಿನಿಮಾ ಬರೀ ಇತಿಹಾಸವಲ್ಲ, ಎರಡನೇ ಶತಮಾನದ ಚೋಳರ ಕಾಲದ ಕಥೆ ಎಂದು ಶಂಕರಾಚಾರ್ಯರು ಹೇಳಿದ್ದರು. 14ನೇ ಶತಮಾನದಲ್ಲಿ ಕವಿ ಧೂರ್ಜಟಿ ಅವರು ಈ ಬಗ್ಗೆ ಬರೆದಿದ್ದಾರೆ. 18ನೇ ಶತಮಾನದಲ್ಲಿ ಬ್ರಿಟಿಷರೂ ಇಂಗ್ಲಿಷಿನಲ್ಲಿ ಇದನ್ನು ಉಲ್ಲೇಖಿಸಿದ್ದಾರೆ. ಇದನ್ನೆಲ್ಲ ಅಧ್ಯಯನ ಮಾಡಿ ನಮ್ಮ ಸಿನಿಮಾದಲ್ಲಿ ತೆಗೆದುಕೊಂಡಿದ್ದೇವೆ. ಅಷ್ಟೇ ಎಚ್ಚರಿಕೆಯಿಂದ ಈ ಸಿನಿಮಾ ಮಾಡಿದ್ದೇವೆ ಎಂದರು. ನಿರ್ದೇಶಕ ಮುಕೇಶ್‌ಕುಮಾರ್ ಸಿಂಗ್ ಮಾತನಾಡಿ, ಕಣ್ಣಪ್ಪ ಚಿತ್ರದ ಶಕ್ತಿಯೇ ಕಲಾವಿದರು. ವಿಷ್ಣು ಅವರ ನಟನೆ ಮತ್ತು ಅವರು ಎದುರಿಸಿದ ಕಷ್ಟಗಳು ಅಷ್ಟಿಷ್ಟಲ್ಲ, ವಿಷ್ಣು, ಶರತ್‌ಕುಮಾರ್, ಮೋಹನ್‌ಬಾಬು ನನ್ನ ನಿರೀಕ್ಷೆಗೂ ಮೀರಿ ಬೆಂಬಲ ನೀಡಿದ್ದಾರೆ ಎಂದರು. ಹಿರಿಯನಟ ಶರತ್‌ಕುಮಾರ್ ಮಾತನಾಡಿ, ಕಣ್ಣಪ್ಪ ಕೇವಲ ಸಿನಿಮಾ ಅಲ್ಲ. ಇಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಪಾತ್ರಗಳಲ್ಲಿ ಜೀವಿಸಿದ್ದಾರೆ. ಈಗಲೂ ನಾವು ಆ ಪಾತ್ರಗಳಲ್ಲಿ ಉಳಿದಿದ್ದೇವೆ. ಅಷ್ಟೊಂದು ಅಚ್ಚುಕಟ್ಟಾಗಿ ಸಿನಿಮಾ ಮೂಡಿಬಂದಿದೆ. ಎಲ್ಲರೂ ಇತಿಹಾಸವನ್ನು ಮರೆಯುತ್ತಿದ್ದಾರೆ. ಅದನ್ನು ನೆನಪಿಸುವ ಚಿತ್ರ ಇದಾಗಲಿದೆ ಎಂದು ಹೇಳಿದರು.

ನಟಿ ಮಧುಬಾಲಾ ಮಾತನಾಡಿ, ನನಗೆ ಕಣ್ಣಪ್ಪ ಚಿತ್ರದಲ್ಲಿ ನಟಿಸಿದ ಸಂತೋಷ ಮತ್ತು ಹೆಮ್ಮೆಯಿದೆ. ವಿಷ್ಣು ಮಂಚು ಅವರಿಗೆ ಸಿನಿಮಾ ನಿರ್ಮಾಣದಲ್ಲಿ ಸಾಕಷ್ಟು ಜ್ಞಾನವಿದೆ. ಅವರು ಈ ಸಿನಿಮಾ ಮೂಲಕ ದೊಡ್ಡ ರಿಸ್ಕ್ ತೆಗೆದುಕೊಂಡಿದ್ದಾರೆ. ಈ ಸಿನಿಮಾ ಒಂದು ದೊಡ್ಡ ಯಜ್ಞದಲ್ಲಿ ಪಾಲ್ಗೊಂಡಂತೆ ಭಾಸವಾಯಿತು ಎಂದಿದ್ದಾರೆ.



'ಕಾಗದ' ಜಾತಿ ಧರ್ಮ ಮೀರಿದ ಪ್ರೇಮಕಥೆ

ಹಿಂದೂ ಮುಸ್ಲಿಂ ಟೀನೇಜ್ ಲವ್‌ಸ್ಟೋರಿ ಹೊಂದಿದ ಚಿತ್ರ ಕಾಗದ. ರಂಜಿತ್ ನಿರ್ದೇಶನದ ಈ ಚಿತ್ರವನ್ನು ಅರುಣ್‌ಕುಮಾರ್ ನಿರ್ಮಿಸಿದ್ದಾರೆ. ಇತ್ತೀಚೆಗೆ ಚಿತ್ರದ ಟ್ರೇಲರ್ ಬಿಡುಗಡೆಯಾಯಿತು. ಈ ಹಿಂದೆ ರಗಡ್ ಚಿತ್ರ ನಿರ್ಮಿಸಿದ್ದ ಅರುಣ್‌ಕುಮಾರ್ ಈಗ ತಮ್ಮ ಪುತ್ರನಿಗಾಗಿ ತಾವೇ ಕಥೆ ಬರೆದು ನಿರ್ಮಾಪಕರಾಗಿದ್ದಾರೆ. ಸುಮಾರು ವರ್ಷಗಳಿಂದ ಹಿಂದು-ಮುಸ್ಲಿಂ ಪ್ರೇಮಕಥೆಯನ್ನು ಸಿನಿಮಾ ಮಾಡುವ ಆಸೆಯಿತ್ತು. ಎರಡು ಊರುಗಳ, ಎರಡು ಧರ್ಮಗಳ ನಡುವಿನ ಸಂಘರ್ಷದಲ್ಲಿ ಪ್ರೇಮಿಗಳಿಬ್ಬರು ಹೇಗೆ ನಲುಗಿದರು ಎಂದು ಈ ಚಿತ್ರದ ಮೂಲಕ ಹೇಳಿದ್ದೇವೆ, ಜುಲೈ 5ಕ್ಕೆ ಚಿತ್ರ ರಿಲೀಸಾಗುತ್ತಿದೆ ಎಂದರು.

ನಿರ್ದೇಶಕ ರಂಜಿತ್ ಮಾತನಾಡಿ, ನನ್ನ ಎರಡನೇ ಪ್ರಯತ್ನವಿದು. ನಿರ್ಮಾಪಕರು ಮಾಡಿಕೊಂಡ ಒನ್‌ಲೈನ್ ಕಥೆಯ ಮೇಲೆ ಈ ಚಿತ್ರ ನಿರ್ದೇಶಿಸಿದ್ದೇನೆ. 2005ರಲ್ಲಿ ಲವ್ ಲೆಟರ್ ಮೂಲಕ ಲವ್‌ಸ್ಟೋರಿ ನಡೆಯುತ್ತಿದ್ದ ಕಾಲವದು. ಪಿಯುಸಿ ಓದುತ್ತಿದ್ದ ಬೇರೆ ಬೇರೆ ಧರ್ಮದ ಹುಡುಗ-ಹುಡುಗಿ ಇಬ್ಬರ ಟೀನೇಜ್ ಲವ್ ಸ್ಟೋರಿಯಿದು ಎಂದರು. ಈ ಚಿತ್ರದಲ್ಲಿ 3 ಹಾಡುಗಳಿದ್ದು ಪ್ರದೀಪ್ ವರ್ಮ ಸಂಗೀತ ಸಂಯೋಜನೆ ಮಾಡಿದ್ದಾರೆ. ನಿರ್ದೇಶಕರ ತಂಡ ಅದ್ಭುತವಾಗಿ ಕೆಲಸ ಮಾಡಿದೆ. ಹೀರೋ ನಿರ್ಮಾಪಕರ ಮಗ ಆದರೂ ಎಲ್ಲಿಯೂ ಹೊಸಬ ಅಂತ ಅನಿಸಲ್ಲ. ಕಥೆಯಲ್ಲಿ ಒಳ್ಳೆಯ ಮೆಸೇಜ್ ಇದ್ದು, ಇಂದು ಸಮಾಜದಲ್ಲಿ ನಡೆಯುತ್ತಿರೋ ಸನ್ನಿವೇಶಗಳನ್ನೇ ಇದರಲ್ಲಿ ತೋರಿಸಲಾಗಿದೆ. ಚಿತ್ರದಲ್ಲಿ ಸಂಗೀತಕ್ಕೆ ಒಳ್ಳೆಯ ಅವಕಾಶವಿತ್ತು ಎಂದು ಹೇಳಿದರು.

ನಾಯಕ ಆದಿತ್ಯ ಮಾತನಾಡಿ, ಇದು ನನ್ನ ಮೊದಲ ಚಿತ್ರ. ನಮ್ಮ ಮನೆಯ ಕೆಳಗೇ ನಟನಾ ಸ್ಕೂಲ್ ಇತ್ತು. ಹಾಗಾಗಿ ಚಿಕ್ಕ ವಯಸ್ಸಿನಿಂದಲೂ ನನಗೆ ನಟನೆಯಲ್ಲಿ ಆಸಕ್ತಿ ಜಾಸ್ತಿ. ಡ್ರಾಮಾ ಮಾಡಿದ ಅನುಭವವಿದೆ. ಇದರಲ್ಲಿ ಕಥೆಯೇ ಹೀರೋ. ನಟನಾಗಬೇಕೆಂಬ ನನ್ನ ಆಸೆಯನ್ನು ತಂದೆ ಈಡೇರಿಸಿದ್ದಾರೆ ಎಂದು ಹೇಳಿದರು. ಈಗಾಗಲೇ ಬಾಲನಟಿಯಾಗಿ ಸಾಕಷ್ಟು ಹೆಸರು ಮಾಡಿರುವ ಅಂಕಿತಾ ಜಯರಾಂ ಈ ಚಿತ್ರದ ಮೂಲಕ ನಾಯಕಿಯಾಗಿ ಪಾದಾರ್ಪಣೆ ಮಾಡಿದ್ದಾರೆ. ಈ ಚಿತ್ರದಲ್ಲಿ ಆಯೇಶಾ ಎಂಬ ಮುಸ್ಲಿಂ ಹುಡುಗಿಯ ಪಾತ್ರ ನಿರ್ವಹಿಸಿದ್ದಾರೆ. ನಾಯಕಿಯ ತಂದೆಯಾಗಿ ನಟಿಸಿರುವ ಗೌತಮ್ ಮಾತನಾಡಿ, ರಂಜಿತ್ ಮತ್ತು ನಾನು ವಾಸ್ಕೋಡಗಾಮ ಚಿತ್ರದಲ್ಲಿ ಕೆಲಸ ಮಾಡಿದ್ದೆವು ಎಂದರು. ಸಹ ಕಲಾವಿದರಾಗಿ ನಟಿಸಿರುವ ಶಿವು ಮಂಜು ಅವರಿಗೆ ಇದು 100ನೇ ಚಿತ್ರ, ಇನ್ನು ಈ ಚಿತ್ರಕ್ಕೆ ವೀನಸ್ ನಾಗರಾಜ್ ಮೂರ್ತಿ ಅವರ ಛಾಯಾಗ್ರಹಣವಿದೆ.

ನೈಜ ಘಟನೆ ಆಧಾರಿತ ಕಥೆ ಹೊಂದಿದ 'ತಾಜ್' ಚಿತ್ರದ ಟ್ರೇಲರ್ ಬಿಡುಗಡೆ






ಹೊಸ ಪ್ರತಿಭೆಗಳೇ ಸೇರಿಕೊಂಡು ಸಿದ್ಧಪಡಿಸಿರುವ 'ತಾಜ್' ಚಿತ್ರವು ಕೆಲವು ದಿನಗಳ ಹಿಂದೆಯಷ್ಟೇ ತನ್ನ ಟೀಸರ್ ಬಿಡುಗಡೆ ಮಾಡಿ ಸುದ್ದಿಯಾಗಿತ್ತು. ಇದೀಗ 'ತಾಜ್' ಚಿತ್ರದ ಟ್ರೇಲರ್ ಕೂಡ ಬಿಡುಗಡೆಯಾಗಿದ್ದು, ಸೌಂಡ್ ಮಾಡುತ್ತಿದೆ. ಹೌದು ಇತ್ತೀಚೆಗಷ್ಟೇ ಈ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭವು ಎಸ್.ಆರ್.ವಿ. ಥಿಯೇಟರಿನಲ್ಲಿ ನಡೆಯಿತು. ಈ ಚಿತ್ರವನ್ನು ಯುವ ಪ್ರತಿಭೆ ಬಿ.ರಾಜರತ್ನ ಅವರು ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಕಳೆದ 15 ವರ್ಷಗಳಿಂದ ಚಲನಚಿತ್ರರಂಗದಲ್ಲಿ ನಿರ್ದೇಶನ, ಬರವಣಿಗೆ ವಿಭಾಗದಲ್ಲಿ ಕೆಲಸ ಮಾಡಿ ಅನುಭವ ಪಡೆದಿದ್ದು ರಾಜರತ್ನ ಅವರು ಈಗ 'ತಾಜ್' ಚಿತ್ರದಿಂದ ಮೊದಲ ಬಾರಿಗೆ ಸ್ವತಂತ್ರ ನಿರ್ದೇಶಕರಾಗಿದ್ದಾರೆ.

ಈ ಟ್ರೇಲರ್ ಬಿಡುಗಡೆ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ರಾಜರತ್ನ ಅವರು ಮಾಧ್ಯಮಗಳ ಸಹಕಾರದಿಂದ ನಮ್ಮ ಚಿತ್ರದ ಟೀಸರ್‌ಗೆ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದೆ. ತುಂಬಾ ತೊಂದರೆಗಳನ್ನು ಎದುರಿಸಿ ನಾವು ಈ ಸಿನಿಮಾ ಮಾಡಿದ್ದು, ಎಲ್ಲರೂ ಅಚ್ಚುಕಟ್ಟಾಗಿ ಕೆಲಸ ಮಾಡಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳು ಹಾಗೂ ಆರು ಸಾಹಸ ದೃಶ್ಯಗಳಿವೆ. ರಿಯಾಲಿಸ್ಟಿಕ್ ಆಗಿ ನಮ್ಮ ತಾಜ್ ಸಿನಿಮಾ ಮೂಡಿಬಂದಿದೆ. ತುಮಕೂರು ಹಾಗೂ ಬೆಂಗಳೂರು ನಗರದ ಸುತ್ತಮುತ್ತ ಚಿತ್ರದ ಶೂಟಿಂಗ್ ಮಾಡಲಾಗಿದೆ. ನನ್ನ ಸ್ನೇಹಿತನ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಇಟ್ಟುಕೊಂಡು ಅಪ್ಪಟ ಪ್ರೇಮಕಥೆಯೊಂದನ್ನು ಹೆಣೆದು ಈ ಸಿನಿಮಾ ನಿರ್ಮಾಣ ಮಾಡಲಾಗಿದೆ. ಇಡೀ ಫ್ಯಾಮಿಲಿ ಸಮೇತ ಪ್ರೇಕ್ಷಕರು ಬಂದು ಯಾವುದೇ ಮುಜುಗರವಿಲ್ಲದೆ ನಮ್ಮ ಚಿತ್ರವನ್ನು ನೋಡಬಹುದು. ಸದ್ಯದಲ್ಲೇ ಚಿತ್ರವನ್ನು ರಿಲೀಸ್ ಮಾಡುವ ಪ್ಲ್ಯಾನ್ ಇದೆ ಎಂದು ಹೇಳಿದರು.

ಮೂಲತಃ ಬಳ್ಳಾರಿಯವರಾದ ಲಕ್ಷ್ಮಿ ಷಣ್ಮುಖ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಅಲ್ಲದೆ ಷಣ್ಮುಖ ಅವರು ಚಿತ್ರದ ನಾಯಕನಾಗಿಯೂ ನಟಿಸಿದ್ದಾರೆ. ನಾನು ಹತ್ತಾರು ಕಥೆಗಳನ್ನು ಕೇಳಿ ಕೊನೆಗೆ ಈ ಕಥೆ ಇಷ್ಟವಾಗಿ ಸಿನಿಮಾ ನಿರ್ಮಾಣ ಮಾಡಲು ಒಪ್ಪಿಕೊಂಡೆ. ಹಿಂದು ಮುಸ್ಲಿಮ್ ಯುವಕ ಯುವತಿಯ ನಡುವಿನ ಪ್ರೇಮಕಥೆಯ ಜೊತೆಗೆ ಮತೀಯ ಸಂಘರ್ಷದ ಕಥೆಯೂ ಇದರಲ್ಲಿದೆ. ಬಹಳ ಚೆನ್ನಾಗಿ ನಮ್ಮ ಸಿನಿಮಾ ಮೂಡಿಬಂದಿದೆ. ತಂಡದ ಸಪೋರ್ಟ್ ತುಂಬಾ ಚೆನ್ನಾಗಿತ್ತು ಎಂದು ನಾಯಕ ಷಣ್ಮುಖ ಜೈ ಹೇಳಿದರು.

ಸಿನಿಪದಬಂಧ-532



ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ವಿಜೇತರು: ಹೊನ್ನಾರತಿಗೌರಿ ಎಸ್. ಭಾರದ್ವಾಜ್, ರವೀಂದ್ರನಗರ ಬಡಾವಣೆ, ಹಾಸನ- 573201.



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 531ರ ಉತ್ತರ

ಉ	ಲ್ಲಾ	ಪ	ಲ್ಲಾ		ಕ					
ತ್ತ		ರ್ವ		ಸ	ರಿ	ಗ	ಮ	ವಿ	ಜಿ	
ರ			ಲ		ನಾ			ರ		ಶಂ
ದ	ತ್ತಾ	ತ್ರೇ	ಯ		ಗ		ಸ್ನೇ	ಹ	ಲೋ	ಕ
ಕ್ಷಿ			ನ್			ಮ		ನೂ		ರಿ
ಣ		ರಾ	ಜ	ಕು	ಮಾ	ರಿ		ರು		
	ಓ		ಗ			ಯ		ನೂ		ಗು
	ಪ್ರೇ	ಮ	ಪ	ರ್ವ		ಮೈ	ಸೂ	ರು	ಜಾ	ಣ
	ಮ		ತಿ		ಟಾ	ಡಾ		ತ		ವಂ
	ವೇ		ರಾ			ರ್ಲಿಂ		ರ		ತ
		ಲ	ವ್	ಟ್ರೈ	ನಿಂ	ಗ್		ಹ	ಲಂ	

ಎಡದಿಂದ ಬಲಕ್ಕೆ

1. ಡಿ.ರಾಜೇಂದ್ರಬಾಬು ಹರಿಸಿದ ಕನ್ನಡ ನಾಡಿನ ಕಾವೇರಿ! 4
4. ದೇವರಾಜ್ - ಸಿತಾರ ನಿರ್ಮಿಸಿದ ಚಿನ್ನದ ಗೃಹ 6
8. ಶ್ರೀನಿವಾಸಮೂರ್ತಿ - ಶ್ರೀಲಲಿತ ಅಭಿನಯಕ್ಕೆ ಗೀತಪ್ರಿಯ ನಿರ್ದೇಶಕ 4
9. ಜೈಜಗದೀಶ್ - ಲಕ್ಷ್ಮೀ ಗುಲ್ಲೆಬ್ಬಿಸಿದ್ದಾರೆ 4
11. ಅಮರ ಪ್ರೇಮ ಚಿತ್ರದ ನಾಯಕಿ 5
14. ಡಿ. ಕೆಂಪರಾಜ ಅರಸ್ ಅವರ ನೀರಿನ ಮೇಲಿನ ಕೋಟೆ 4
15. ಪ್ರಭಾಕರ್ ತ್ರಿಪಾತ್ರದಲ್ಲಿ ಹೆತ್ತವಳ ಪ್ರೀತಿಯಿದೆ 5
16. ಕೃಷ್ಣ ಕದ್ದ ನಾರಿಯ ಉಡುಗೆ 2
17. ಕನ್ನಡದ ಸಿಂಗರ್ಸ್ 5
18. ಬಂಗಾರಮ್ಮ ನಡೆಸಿದ ಲೇವಾದೇವಿ 2

ಮೇಲಿನಿಂದ ಕೆಳಕ್ಕೆ

1. ಗಂಗಾಧರ್ - ಭಾರತಿಯ ಬಾಳ ಉಯ್ಯಾಲೆ 6
2. ತಾರಾಕೇಶ್ ಪಟೇಲ್ ಅಭಿನಯಿಸುವವನು 2
3. ಪ್ರಜ್ವಲ್ ದೇವರಾಜ್ - ಪ್ರಣಿತ ಅಭಿನಯದ "ಮಂಗಳ ಗ್ರಹ" 4
5. ಹೆಣ್ಣಿರಲಿ, ಗಂಡಿರಲಿ ಒಂದೇ ಸಾಕು ಎನ್ನುವ ಕಾಲದಿ ಶಂಕರಣ್ಣ ಹೀಗೆಂದರೇಕೆ! 10
6. ಕಾಶೀನಾಥ್ ಹೆಂಡತಿಯ ಅಪ್ಪನನ್ನು ವಿವಾಹಕ್ಕಾಗಿ ಕಾಡಿ-ಬೇಡಿದ್ದಾನೆ ಆದರೂ ಕೊನೆಯಲ್ಲಿ ಸ್ವಲ್ಪ ವ್ಯತ್ಯಾಸ 9
7. ಅಮೃತವರ್ಷಿಣಿ ಚಿತ್ರದ ಹಾಡಿನ ಹನಿ ಹನಿ ನೀರು 3
10. ಕನ್ನಡದ ಫಿಲ್ಮ್ ಸ್ಟಾರ್ಸ್ 7
12. ಶಂಕರ್‌ನಾಗ್ - ಭವ್ಯ ಅಭಿನಯದ "ಕೇಸರಿ" 4
13. ಮಿಥಿಲೆಯ _ _ _ _ 4

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈಸೂರು ಮಿತ್ರ

ಇಡೀ ನಾಡಿನ ಒಲವು ಪಡೆದ ಕೆಂಪೇಗೌಡರು

ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ಬಣ್ಣನೆ



ಅಧಿಕಾರಿಗಳು ಹಾಗೂ ಮುಖಂಡರು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ತಿ.ನರಸೀಪುರ, ಜೂ.27– ನಾಡಪ್ರಭು ಕೆಂಪೇಗೌಡರು ಕೇವಲ ಒಂದು ಜಾತಿ, ಸಮುದಾಯಕ್ಕೆ ಸೀಮಿತರಲ್ಲ. ಅವರು ಇಡೀ ನಾಡಿನ ಒಲವು ಪಡೆದ ಮಹನೀಯ ಎಂದು ತಹಸೀಲ್ದಾರ್ ಟಿ.ಜೆ.ಸುರೇಶ್ ಆಚಾರ್ ಬಣ್ಣಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಯೋಜಿಸಿದ್ದ 515ನೇ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಬೆಂಗಳೂರು ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ ಎಂದರೆ ಅದಕ್ಕೆ ಕೆಂಪೇಗೌಡರೇ ಮೂಲ ಕಾರಣ. ಕೆಂಪೇಗೌಡ ಅವರು ದೂರದೃಷ್ಟಿಯಿಂದ ನಾಡು ಕಟ್ಟಿದ್ದಾರೆ. ನಾಲ್ಕು ದಿಕ್ಕಿಗೂ ದ್ವಾರ ಮಾಡಿ, ವೃತ್ತಿಗೊಂದು ಮಾರುಕಟ್ಟೆ ಸ್ಥಾಪಿಸಿ, ಕೆರೆಕಟ್ಟೆಗಳನ್ನು ಅಭಿವೃದ್ಧಿ ಮಾಡಿದ್ದರು ಎಂದರು.

ದಕ್ಷ ಆಡಳಿತಗಾರರಾಗಿದ್ದ ಕೆಂಪೇಗೌಡರು ಬೆಂಗಳೂರಿನ ಅಭಿವೃದ್ಧಿಗೆ ಸುಭದ್ರ ಅಡಿಪಾಯ ಹಾಕಿಕೊಟ್ಟಿದ್ದಾರೆ. ಆ ಕಾಲದಲ್ಲಿಯೇ ವಿವಿಧ ಜನಾಂಗಗಳ ವೃತ್ತಿ ಆಧರಿಸಿ ಪೇಟೆಗಳನ್ನು ನಿರ್ಮಿಸಿಕೊಟ್ಟಿದ್ದರು. ಅವರ ಆಡಳಿತ ನಮಗೆಲ್ಲಾ ಸ್ಫೂರ್ತಿ ಎಂದು ತಿಳಿಸಿದರು.

ಮುಖ್ಯ ಭಾಷಣ ಮಾಡಿದ ಶಿಕ್ಷಕ ರಮೇಶ್ ಕೆಂಪೇಗೌಡರು ಬಹಳ ಕ್ರಿಯಾಶೀಲರಾಗಿದ್ದರು. ವಿಜಯನಗರದ ಕಾಲದಲ್ಲಿ ಬೀದಿಯಲ್ಲಿ ಚಿನ್ನ ಅಳೆಯುತ್ತಿದ್ದರು. ಅದನ್ನು ನೋಡಿದ ಕೆಂಪೇಗೌಡರಿಗೆ ಬೆಂಗಳೂರು ನಗರವನ್ನು ಕಟ್ಟುವುದಕ್ಕೆ ಮನಸ್ಸಾಗುತ್ತದೆ. 1531ರಲ್ಲಿ ಕೆಂಪೇಗೌಡರಿಗೆ ಪಟ್ಟಾಭಿಷೇಕ ಆಯಿತು. ನಂತರ ಬೆಂಗಳೂರನ್ನು ಹಲಸೂರು, ಕೆಂಗೇರಿ, ಯಶವಂತಪುರ, ಯಲಹಂಕ ಎಂದು ಹೆಬ್ಬಾಗಿಲು ಮಾಡಿಕೊಂಡರು. ಕೆಂಪೇಗೌಡರಿಗೆ ಬಹಳ ದೂರದೃಷ್ಟಿ ಇತ್ತು. ಯಾರಿಗೆ ದೂರದೃಷ್ಟಿ ಇರಲ್ಲ, ಅವರಿಗೆ ಕನಸು ಇರುವುದಿಲ್ಲ. ಜೊತೆಗೆ ರಾಜ್ಯವನ್ನು ಉತ್ತಮವಾಗಿ ಆಳ್ವಿಕೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದರು.

ಕೆಂಪೇಗೌಡರು ತಮ್ಮ 46 ವರ್ಷಗಳ ಆಡಳಿತಾವಧಿಯಲ್ಲಿ ಕರ್ನಾಟಕದ ಸಮಸ್ತ ಜನತೆಯ ಹೃದಯ ಗೆದ್ದರು. ಸಮಾಜ ಸುಧಾರಣೆ ಮತ್ತು ಕಟ್ಟಡಗಳು, ದೇವಾಲಯಗಳು ಮತ್ತು ಜಲಾಶಯಗಳನ್ನು ನಿರ್ಮಿಸಿ ಅಪಾರ ಕೊಡುಗೆಗಳಿಗೆ ಹೆಸರುವಾಸಿಯಾದ ಕೆಂಪೇಗೌಡರು ಸ್ವತಂತ್ರ ಆಡಳಿತಗಾರರಾಗಿ ಆಳ್ವಿಕೆ ನಡೆಸಿದರು. ತನ್ನ ಪ್ರಜೆಗಳ ಏಳಿಗೆ ಮತ್ತು ಅಭಿವೃದ್ಧಿಗಾಗಿ ಸಹಾಯ ಮತ್ತು ಮಾರ್ಗದರ್ಶನಕ್ಕಾಗಿ ಅವರು ಇನ್ನೂ ಸ್ಮರಣೀಯರಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ವಕೀಲ ಸಿ.ಎನ್.ದೊಡ್ಡಲಿಂಗೇಗೌಡ, ಶಿಕ್ಷಕ ರಮೇಶ್ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಭಾರ ಅಧ್ಯಕ್ಷ ತಲಕಾಡು ನಾಗೇಂದ್ರ ಅವರನ್ನು ಸನ್ಮಾನಿಸಲಾಯಿತು.

ಒಕ್ಕಲಿಗರ ಸಂಘದ ಕಾರ್ಯದರ್ಶಿ ಬನ್ನೂರು ವೈ.ಎಸ್.ರಾಮಸ್ವಾಮಿ, ತಿ.ನರಸೀಪುರ ಒಕ್ಕಲಿಗರ ಸಂಘದ ಕಾರ್ಯದರ್ಶಿ ಟಿ.ಎನ್.ಗುರುಪ್ರಸಾದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ಎನ್.ಎಂ.ರಾಮಚಂದ್ರ, ಡಾ.ಮಲ್ಲಿಕಾರ್ಜುನಸ್ವಾಮಿ, ನರೇಂದ್ರ, ಟಿಎಪಿಎಂಎಸ್ ನಿರ್ದೇಶಕ ಟಿ.ಸಿ.ಫಣೀಶ್ ಕುಮಾರ್, ಡಿಕೆಶಿ ಅಭಿಮಾನಿ ಬಳಗದ ಅಧ್ಯಕ್ಷ ಆರ್.ಚೇತನ್, ಮಣಿಕಂಠ, ಸುನಿಲ್, ಮಂಜುನಾಥ, ತಿರುಮಕೂಡ್ಲು ಲಕ್ಷ್ಮಣ್, ಕ್ಷೇತ್ರ ಶಿಕ್ಷಣಾಧಿಕಾರಿ ಶೋಭಾ, ಪುರಸಭಾ ಮುಖ್ಯಾಧಿಕಾರಿ ವಸಂತ ಕುಮಾರಿ, ರಾಜಸ್ವ ನಿರೀಕ್ಷಕ ಚೆಲುವರಾಜ್, ಸತೀಶ್, ಪಿಡಬ್ಲ್ಯೂಡಿ ಸಹಾಯಕ ಅಭಿಯಂತರ ಸತೀಶ್ ಚಂದ್ರ, ಶಿವಶಂಕರಮೂರ್ತಿ, ಬಾಬು ಜಗಜೀವನ ರಾಂ ಸಂಘದ ಅಧ್ಯಕ್ಷ ಪುಟ್ಟಯ್ಯ, ಅಲ್ಪಸಂಖ್ಯಾತರ ವಿಭಾಗದ ಕಾರ್ಯದರ್ಶಿ ಮನ್ಸೂರ್ ಆಲಿ, ರೈತ ಮುಖಂಡ ನಾರಾಯಣ್ ಸೇರಿದಂತೆ ಪ್ರಮುಖರಿದ್ದರು.

ಬೆಂಗಳೂರಿಗೆ ಕೆಂಪೇಗೌಡರ ಕೊಡುಗೆ ಅಪಾರ

ನಾಡಪ್ರಭು ಕೆಂಪೇಗೌಡರ ಜಯಂತಿಯಲ್ಲಿ ಶಾಸಕ ದರ್ಶನ್ ಸ್ಮರಣೆ



ಕೆಂಪೇಗೌಡ ಜಯಂತಿಯನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂಜನಗೂಡು, ಜೂ.27– ತಮ್ಮ ದೂರದೃಷ್ಟಿಯಿಂದ ಬೆಂಗಳೂರನ್ನು ಸಮಗ್ರವಾಗಿ ಕಟ್ಟಿದ ನಾಡಪ್ರಭು ಕೆಂಪೇಗೌಡರು ಎಲ್ಲಾ ವರ್ಗದ ಜನರ ಕಸುಬು ಹಾಗೂ ವ್ಯಾಪಾರಗಳಿಗೆ ಪೇಟೆಗಳನ್ನು ನಿರ್ಮಿಸಿ ಅನುಕೂಲ ಮಾಡಿಕೊಟ್ಟಿದ್ದರು. ಇಂದು ಬೆಂಗಳೂರು ವಿಶ್ವಮಟ್ಟದಲ್ಲಿ ಪ್ರಸಿದ್ಧಿಯಾಗಲು ಕೆಂಪೇಗೌಡರ ಕೊಡುಗೆ ಅಪಾರ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಗಿರಿಜಾ ಕಲ್ಯಾಣ ಮಂಟಪದಲ್ಲಿ ಗುರುವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರನ್ನು ವ್ಯವಸ್ಥಿತವಾಗಿ ಕಟ್ಟಿ ಬೆಳೆಸಿದ ಕೆಂಪೇಗೌಡರಿಂದಾಗಿ ನಮ್ಮ ರಾಜಧಾನಿ ಕೆರೆ, ಕಟ್ಟೆಗಳಿಂದ ಸಂವೃದ್ಧಿಯಾಗಿ ತಂಪು ಹವಾಮಾನವನ್ನು ಹೊಂದಿದೆ. ರಾಜ್ಯದ ಅರ್ಧ ತೆರಿಗೆ ಬೆಂಗಳೂರಿನಿಂದಲೇ ದೊರೆಯುತ್ತಿದೆ. ಮಾಹಿತಿ ತಂತ್ರಜ್ಞಾನ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಸರ್ವಾಂಗೀಣವಾಗಿ ಬೆಳೆದಿದೆ. ಹೀಗಾಗಿ ತಾಲೂಕಿನ ದೇವರಸನಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸುವ ಮೂಲಕ ಅವರು ತೋರಿದ ದಾರಿಯಲ್ಲಿ ಸಾಗುವ ಪ್ರಯತ್ನ ನಡೆಸಲಾಗುವುದು ಎಂದು ಹೇಳಿದರು.

ಸಾಹಿತಿ ಕಾಳೇಗೌಡ ನಾಗವಾರ ಮಾತನಾಡಿ, 500 ವರ್ಷಗಳ ಹಿಂದೆ ತಮ್ಮ ದೂರದೃಷ್ಟಿಯ ಫಲವಾಗಿ ಕೆಂಪೇಗೌಡರಿಗೆ ಬೆಂಗಳೂರನ್ನು ವ್ಯವಸ್ಥಿತವಾಗಿ ಕಟ್ಟಲು ಸಾಧ್ಯವಾಯಿತು. ಅವರು ಎಲ್ಲಾ ಸಮುದಾಯಗಳ ಕಸುಬುಗಳಿಗೆ ಮಾರುಕಟ್ಟೆ ಒದಗಿಸುವ ಸಲುವಾಗಿ ನಿರ್ಮಿಸಿದ ಪೇಟೆಗಳು ಇಂದಿಗೂ ಜೀವಂತವಾಗಿ ಅವರ ಕೊಡುಗೆಯನ್ನು ನೆನಪಿಸುತ್ತಿವೆ. ನಾಲ್ಕು ದಿಕ್ಕುಗಳಲ್ಲಿ ಗಡಿ ಗುರ್ತಿಸಿ ನಿರ್ಮಿಸಿದ ನಗರ ಸುಂದರವಾಗಿ ರೂಪುಗೊಂಡಿದೆ. ಅವರ ಕೊಡುಗೆ ಸ್ಮರಿಸಲು ರಾಜ್ಯ ಸರ್ಕಾರ ನಗರದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರನ್ನು ಇಟ್ಟು ಗೌರವ ಸಲ್ಲಿಸಿದೆ ಎಂದು ಅವರು, ಬೆಂಗಳೂರು ಭಾರತದ ಪ್ರಮುಖ ನಗರವಾಗಿ ಬೆಳೆಯಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಕೊಡುಗೆ ಸಾಕ್ಷಿದೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎನ್.ನರಸಿಂಹ ಸ್ವಾಮಿ ಮಾತನಾಡಿದರು. ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ನಗರಸಭೆ ಆಯುಕ್ತ ನಂಜುಂಡಸ್ವಾಮಿ, ಮಾಜಿ ಶಾಸಕ ಕೇಶವಮೂರ್ತಿ, ಖಾದಿ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್. ಕೃಷ್ಣಪ್ಪಗೌಡ, ಮುಖಂಡರಾದ ಮಹದೇವ ಕುಮಾರ್, ಕೃಷ್ಣಪ್ಪ, ನಗರಸಭೆ ಸದಸ್ಯರಾದ ಶ್ವೇತಲಕ್ಷ್ಮಿ, ಸೌಭಾಗ್ಯ, ತಾಲೂಕು ಕಸಾಪ ಅಧ್ಯಕ್ಷೆ ಲತಾ ಉಪಸ್ಥಿತರಿದ್ದರು.

ಜು.21, ವೀರಶೈವ ಮಹಾಸಭಾ ಚುನಾವಣೆ

ತಿ.ನರಸೀಪುರ, ಜೂ.27– ತಾಲೂಕಿನ ಅಖಿಲ ಭಾರತ ವೀರಶೈವ ಮಹಾಸಭಾದ ಒಟ್ಟು 21 ಸ್ಥಾನಗಳಿಗೆ (ಅಧ್ಯಕ್ಷ, ನಿರ್ದೇಶಕ 13 ಸಾಮಾನ್ಯ, 7 ಮಹಿಳಾ ಮೀಸಲು) ಜು.21ರಂದು ಚುನಾವಣೆ ನಡೆಯಲಿದೆ.

ನಾಮಪತ್ರ ಸಲ್ಲಿಸಲು ಜು.4 ಕೊನೆ ದಿನವಾಗಿದ್ದು, ಅಂದೇ ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಜು.8ರೊಳಗೆ ನಾಮಪತ್ರ ವಾಪಸ್ ಪಡೆಯಬಹುದು. ಜು.21ರಂದು ಬೆಳಗ್ಗೆ 8ರಿಂದ ಸಂಜೆ 5ರವರೆಗೆ ಮತದಾನ ನಡೆಯಲಿದ್ದು, ಮತದಾನ ಮುಗಿದ ನಂತರ ಮತಗಳ ಎಣಿಕೆಯನ್ನು ಅಂದೇ ನಡೆಸಲಾಗುವುದು.

ಹೆಚ್ಚಿನ ಮಾಹಿತಿಗೆ ಕಚೇರಿ ವೇಳೆಯಲ್ಲಿ ಪಟ್ಟಣದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಚುನಾವಣಾಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ವೀರಶೈವ ಮಹಾಸಭಾ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಕಾರ್ಯದರ್ಶಿ ಎಂ.ಎಲ್.ಹುಂಡಿ ಪರಶಿವ ಮೂರ್ತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಂಪೇಗೌಡರ ದೂರದೃಷ್ಟಿಯಿಂದ ಬೆಂಗಳೂರು ನಿರ್ಮಾಣ

ತಹಸೀಲ್ದಾರ್ ಶ್ರೀನಿವಾಸ್



ಕೆಂಪೇಗೌಡರ ಜಯಂತಿಯನ್ನು ಗಣ್ಯರು ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಜೂ.27– ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿ ವತಿಯಿಂದ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತಹಸೀಲ್ದಾರ್ ಶ್ರೀನಿವಾಸ್, ಕೃಷ್ಣದೇವರಾಯನ ಕಾಲದಲ್ಲಿ ಸಾಮಂತರಾಗಿದ್ದ ನಾಡಪ್ರಭು ಕೆಂಪೇಗೌಡರು ತಮ್ಮ ದೂರದೃಷ್ಟಿಯಿಂದ ಬೆಂಗಳೂರನ್ನು ನಿರ್ಮಾಣ ಮಾಡಿದರು. 5 ದಶಕಗಳು ಕಳೆದರೂ ಇಂದಿಗೂ ಅವರ ಕೆಲಸಗಳು ನೆನಪಿನಲ್ಲಿ ಉಳಿಯುವಂತಾಗಿದೆ ಎಂದರು.

ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಲು ಕೆಂಪೇಗೌಡರು ಕಾರಣ. 16ನೇ ಶತಮಾನದಲ್ಲಿ ಕನ್ನಡ ನಾಡಿಗೆ ಸಾಕಷ್ಟು ಕೊಡುಗೆ ನೀಡಿದ ಅವರು ನೀರಿನ ಸಮಸ್ಯೆಯಾಗಬಾರದು ಎಂದು ದೂರದೃಷ್ಟಿಯಿಂದ ಕೆರೆಗಳನ್ನು ನಿರ್ಮಿಸಿದರು. ಅಲ್ಲದೇ ಎಲ್ಲಾ ವರ್ಗದ ಜನತೆಗೆ ಸಮಾನತೆ ಕಲ್ಪಿಸಿದರು ಎಂದರು.

ಮುಖ್ಯ ಭಾಷಣಕಾರರಾಗಿ ಮಾತನಾಡಿದ ಶಿಕ್ಷಕ ಆನಂದ್, ಒಂದು ದೇಶ ಕಟ್ಟಲು ಪರಾಕ್ರಮ ಒಂದರಿಂದಲೇ ಸಾಧ್ಯವಿಲ್ಲ. ತ್ಯಾಗ ಬಲಿದಾನ ಕೂಡ ಮುಖ್ಯ. ಅದನ್ನು ಕೆಂಪೇಗೌಡರ ಆಡಳಿತವನ್ನು ಅಧ್ಯಯನ ಮಾಡಿದಾಗ ತಿಳಿಯುತ್ತದೆ ಎಂದರು.

ಬೆಂಗಳೂರಲ್ಲಿ ಕೆಂಪೇಗೌಡರ ದೂರದೃಷ್ಟಿಯಿಂದ ನಿರ್ಮಾಣವಾದ ರಾಜ ಕಾಲುವೆ, ಕೆರೆಗಳು ನಾಪತ್ತೆಯಾಗಿರುವ ಕಾರಣ ಇಂದು ಮಳೆಯಾದರೆ ಅತಿವೃಷ್ಟಿ, ಇಲ್ಲದಿದ್ದರೆ ಅನಾವೃಷ್ಟಿ ಆಗಲು ಕಾರಣ ಆಗಿದೆ ಎಂದರು. ಕೃಷ್ಣೇಗೌಡ ಮಾತನಾಡಿ, ಬೆಂಗಳೂರಿನ ಅಭಿವೃದ್ಧಿಗಾಗಿ ಕೆಂಪೇಗೌಡರು ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟಿದ್ದರು ಎಂದರು.

ಒಕ್ಕಲಿಗರ ಸಂಘದ ತಾಲೂಕು ಅಧ್ಯಕ್ಷ ಸುರೇಂದ್ರ ಡಿ.ಗೌಡ ಮಾತನಾಡಿ, ಮುಂದಿನ ದಿನಗಳಲ್ಲಿ ಪಟ್ಟಣದಲ್ಲಿ ಅದ್ಧೂರಿಯಾಗಿ ಕೆಂಪೇಗೌಡರ ಜಯಂತಿ ಆಚರಿಸಲು ಸಭೆ ಕರೆದು ಚರ್ಚಿಸಿ ತೀರ್ಮಾನಿಸಲಾಗುವುದು. ಅಲ್ಲದೇ ಶಾಸಕ ಅನಿಲ್ ನೇತೃತ್ವದಲ್ಲಿ ಡಿಸಿಎಂ ಡಿ.ಕೆ.ಶಿವ ಕುಮಾರ್, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಹಾಗೂ ಇನ್ನಿತರ ಗಣ್ಯರನ್ನು ಆಹ್ವಾನಿಸಿ ಕೆಂಪೇಗೌಡರ ಜಯಂತಿಯನ್ನು ಅದ್ಧೂರಿಯಾಗಿ ಆಚರಣೆ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ, ಇಓ ಧರಣೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ರವಿ ಕುಮಾರ್, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಸಮಾಜ ಕಲ್ಯಾಣ ಅಧಿಕಾರಿ ರಾಮಸ್ವಾಮಿ, ಮುಖಂಡರಾದ ನರಸಿಂಹೇಗೌಡ, ಸೋಮೇಶ್, ಕೃಷ್ಣೇಗೌಡ, ಟಿ.ವೆಂಕಟೇಶ್, ಜಿವಿಕ ಬಸವರಾಜು, ಗುರು, ಶಿವಯ್ಯ, ಮಹೇಂದ್ರ, ನಾಗನಾಯಕ, ಅಂಗಡಿ ಸತೀಶ್, ಭಾಸ್ಕರ್, ನಾಗರಾಜು, ರಾಜಣ್ಣ ರಾಜೇಶ್ ಸೇರಿದಂತೆ ಸಮಾಜದ ಮುಖಂಡರು ಹಾಜರಿದ್ದರು.

ಹುಣಸೂರಲ್ಲಿ ಮಾದಕ ವ್ಯಸನ ವಿರೋಧಿ ದಿನಾಚರಣೆ



ಹುಣಸೂರಲ್ಲಿ ಮಾದಕ ವ್ಯಸನ ವಿರೋಧಿ ದಿನಾಚರಣೆ ಉದ್ಘಾಟಿಸಯಿತು.

ಹುಣಸೂರು, ಜೂ.27– ರೋಟರಿ ಕ್ಲಬ್, ಟ್ಯಾಲೆಂಟ್ ವಿದ್ಯಾಸಂಸ್ಥೆ ಮತ್ತು ಪೊಲೀಸ್ ಇಲಾಖೆ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಾದಕ ವ್ಯಸನ ವಿರೋಧಿ ದಿನಾಚರಣೆ ನಗರದ ಟ್ಯಾಲೆಂಟ್ ಪಿಯು ಕಾಲೇಜಿನಲ್ಲಿ ನಡೆಯಿತು.

ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮುನಿಯಪ್ಪ, ಮಾದಕ ದ್ರವ್ಯಗಳಿಂದ ಯುವ ಪೀಳಿಗೆ ಮೇಲೆ ಉಂಟಾಗುತ್ತಿರುವ ಅಡ್ಡ ಪರಿಣಾಮಗಳು ಹಾಗೂ ಅದರಿಂದ ಸಮಾಜದ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳ ಕುರಿತು ಮಾತನಾಡಿದರು.

ಅಬಕಾರಿ ಇನ್ಸ್‌ಪೆಕ್ಟರ್ ಜಯಂತಿ, ಗ್ರಾಮೀಣ ಭಾಗದಲ್ಲಿ ನಕಲಿ ಮದ್ಯ ಮಾರಾಟದಿಂದ ಗ್ರಾಮೀಣ ಜನರಲ್ಲಿ ಕಾಡುತ್ತಿರುವ ಆರೋಗ್ಯ ಸಮಸ್ಯೆಗಳು ಹಾಗೂ ರೈತರ ಜಮೀನುಗಳನ್ನು ಹೊರ ರಾಜ್ಯದವರು ಗುತ್ತಿಗೆ ಪಡೆದು ಗಾಂಜಾ ಬೆಳೆಯುತ್ತಿರುವ ಪ್ರಕರಣಗಳಿಂದ ಜಮೀನು ಮಾಲೀಕರು ಶಿಕ್ಷೆಗೆ ಗುರಿಯಾಗುತ್ತಿರುವ ಕುರಿತು ತಿಳಿಸಿದರು.

ಇದೇ ವೇಳೆ ವಿದ್ಯಾರ್ಥಿಗಳಿಗೆ ಮಾದಕ ವ್ಯಸನ ಮುಕ್ತ ಜೀವನ ನಡೆಸುವುದಾಗಿ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಕಾರ್ಯ ಕ್ರಮದಲ್ಲಿ ರೋಟರಿ ಕ್ಲಬ್ ಅಧ್ಯಕ್ಷ ರೋ.ಚನ್ನಕೇಶವ. ಎಸ್, ವಲಯ ಸೇನಾನಿ ರೋ.ಬಸವರಾಜ್, ಟ್ಯಾಲೆಂಟ್ ವಿದ್ಯಾ ಸಂಸ್ಥೆ ಸಂಸ್ಥಾಪಕ ನವೀನ್ ರೈ ಹಾಗೂ ಪೊಲೀಸ್ ಮತ್ತು ಅಬಕಾರಿ ಇಲಾಖೆ ಸಿಬ್ಬಂದಿ, ಉಪನ್ಯಾಸಕ ವೃಂದದವರು ಉಪಸ್ಥಿತರಿದ್ದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ನಾಗೇಂದ್ರ ಪ್ರಭಾರ ಅಧ್ಯಕ್ಷ

ತಿ.ನರಸೀಪುರ, ಜೂ.27– ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಭಾರ ಅಧ್ಯಕ್ಷರಾಗಿ ತಲಕಾಡು ಟಿ.ಎನ್.ನಾಗೇಂದ್ರ ಆಯ್ಕೆಯಾಗಿದ್ದಾರೆ.

ಪಟ್ಟಣದ ಶಿಕ್ಷಕರ ಸಂಘದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಈ ಹಿಂದಿನ ಅಧ್ಯಕ್ಷ ಹೆಚ್.ಡಿ.ವರಾದಪ್ಪನವರು ನಿವೃತ್ತಿ ಹೊಂದಿದ ಹಿನ್ನಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಶಿಕ್ಷಕರ ಸಂಘದ ಪದಾಧಿಕಾರಿಗಳು ಹಾಗೂ ನಿರ್ದೇಶಕರು ಸಂಘದ ಹಿರಿಯ ಉಪಾಧ್ಯಕ್ಷ ತಲಕಾಡು ಟಿ.ಎನ್. ನಾಗೇಂದ್ರ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿದರು. ಸಂಘದ ಮಹಿಳಾ ಉಪಾಧ್ಯಕ್ಷೆ ಚಾಮುಂಡೇಶ್ವರಿ ಹಾಗೂ ಸಹ ಕಾರ್ಯದರ್ಶಿ ಚಿತ್ರ ವಿಶಾಲಾಕ್ಷಿ ಅವರು ಸೂಚಿಸಿದರು. ಜಿಲ್ಲಾ ಕಾರ್ಯದರ್ಶಿ ಮಲ್ಲಣ್ಣ ಅನುಮೋದಿಸಿದರು. ಪ್ರಧಾನ ಕಾರ್ಯದರ್ಶಿ ಕುಪ್ಯ ಪುಟ್ಟಸ್ವಾಮಿ ನಾಗೇಂದ್ರ ಅವರ ಹೆಸರನ್ನು ಘೋಷಿಸಿದರು.



ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಭಾರ ಅಧ್ಯಕ್ಷರಾಗಿ ಟಿ.ಎನ್.ನಾಗೇಂದ್ರ ಆಯ್ಕೆಯಾಗಿದ್ದಾರೆ.

ಈ ಸಂದರ್ಭ ಖಜಾಂಜಿ ನಾಗೇಶ್, ಸಂಘಟನಾ ಕಾರ್ಯದರ್ಶಿ ಗೌರಮ್ಮ, ಸುಬ್ಬಣ್ಣ, ನಿರ್ದೇಶಕರಾದ ಸುಬ್ರಹ್ಮಣ್ಯ, ಗೌರಮ್ಮಣ್ಣಿ, ಗಜೇಂದ್ರ, ಅಕ್ಕಮಹಾದೇವಿ ಸಭೆಯಲ್ಲಿದ್ದರು.

ಪಿರಿಯಾಪಟ್ಟಣದಲ್ಲಿ ಕೆಂಪೇಗೌಡ ಜಯಂತಿ ಆಚರಣೆ



ಪಿರಿಯಾಪಟ್ಟಣ ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಯಿತು. ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ರಾಜೇಂದ್ರ, ಮಾಜಿ ಶಾಸಕ ಎಸ್.ಸಿ.ಬಸವರಾಜ್, ಮುಖಂಡರಾದ ವಿಕ್ರಂರಾಜ್, ಎಂ.ಎಂ.ರಾಜೇಗೌಡ, ಆರ್.ಟಿ.ಸತೀಶ್, ಕೃಷ್ಣ, ಸೋಮಶೇಖರ್, ಚಂದ್ರು, ರವಿ, ವಿಶ್ವ, ಮೋಹನ್, ಟಿ.ರಮೇಶ್ ಸೇರಿದಂತೆ ಇತರರಿದ್ದರು.

ಜು.7, ವಾಟಾಳು ಪಿಎಸಿಎಸ್ ಚುನಾವಣೆ

ತಿ.ನರಸೀಪುರ, ಜೂ.27– ತಾಲೂಕಿನಲ್ಲಿ ಹೊಸದಾಗಿ ನೋಂದಣಿಗೊಂಡಿರುವ ವಾಟಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ಜು.7ರಂದು ಚುನಾವಣೆ ನಡೆಯಲಿದ್ದು, ಸಂಘದ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಲು ಜೂ.29 ಕೊನೆ ದಿನ. ಹೆಚ್ಚಿನ ಮಾಹಿತಿಗೆ ಮುಖ್ಯ ಪ್ರವರ್ತಕ ಬಸವಣ್ಣ ಹಾಗೂ ರಿಟರ್ನಿಂಗ್ ಆಫೀಸರ್ ರಾಜಣ್ಣ ಅವರನ್ನು ಸಂಪರ್ಕಿಸಬಹುದು.

ಸಾರ್ಥಕ ಬದುಕಿಗೆ ಬಸವಣ್ಣನ ಚಿಂತನೆಗಳು ಅನುಕರಣೀಯ



ಜೆಎಸ್ಎಸ್ ಮಹಾವಿದ್ಯಾಪೀಠ ನಿರ್ದೇಶಕ ನಿರಂಜನಮೂರ್ತಿ ಅವರನ್ನು ಸನ್ಮಾನಿಸಲಾಯಿತು.

ಸರಗೂರು, ಜೂ.27– ಸಾರ್ಥಕ ಬದುಕಿಗೆ ಬಸವಣ್ಣನವರ ಚಿಂತನೆಗಳು ಸದಾ ಅನುಕರಣೀಯ. ಅವರು ಸಮಾಜಕ್ಕೆ ನೀಡಿದ ಕಾಯಕ ಮತ್ತು ದಾಸೋಹ ಸಂದೇಶಗಳು ನಮ್ಮೆಲ್ಲರ ಬದುಕಿನ ದಿಕ್ಸೂಚಿ ಆಗಬೇಕು. ಇದು ಮಹಾ ಮಾನವತಾವಾದಿ ಬಸವಣ್ಣನವರ ಆಶಯವಾಗಿತ್ತು ಎಂದು ಮೈಸೂರು ಸಾಹಿತ್ಯಲೋಕ ಸಂಸ್ಥೆ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಅಭಿಪ್ರಾಯಪಟ್ಟರು.

ಜಿಲ್ಲಾ ಹಾಗೂ ತಾಲೂಕು ಶರಣ ಸಾಹಿತ್ಯ ಪರಿಷತ್ ವತಿಯಿಂದ ಪಟ್ಟಣದ ಪಡವಲು ವಿರಕ್ತ ಮಠದಲ್ಲಿ ಆಯೋಜಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು 12ನೇ ಶತಮಾನದ ಪೂರ್ವದಲ್ಲಿ ಬೇರೂರಿದ್ದ ಮೇಲು–ಕೀಳು, ಅಸ್ಪೃಶ್ಯತೆ, ಶೋಷಣೆ, ಮೂಢನಂಬಿಕೆಗಳ ಕತ್ತಲಲ್ಲಿ ಸಮಾಜ ನಲುಗಿದ್ದಾಗ ಬಸವಣ್ಣನವರು ಸಮ ಸಮಾಜದ ಸೃಷ್ಟಿ ಬಯಸಿ ತಮ್ಮ ಮೌಲಿಕ ವಚನಗಳ ಮೂಲಕ ಜಾಗೃತಿ ಮೂಡಿಸಿದರು.

ಸಾಮರಸ್ಯ ಹಾಗೂ ಐಕ್ಯತೆ ಅಂಗವಾಗಿ ಅನುಭವ ಮಂಟಪದ ಮೂಲಕ ಎಲ್ಲಾ ಸ್ತರದ ಜನರ ಬದುಕಿಗೆ ಧ್ವನಿಯಾದರು. ಸಾಂಸ್ಕೃತಿಕ ಘನತೆಯ ಬದುಕು ಕನ್ನಡಿಗರ ಬದುಕು ಆಗಬೇಕು ಎಂದು ಬಸವಣ್ಣ ಹಂಬಲಿಸಿದವರು. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಬಸವಣ್ಣ ಕನ್ನಡಿಗರ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಿರುವುದು ಅಭಿನಂದನಾರ್ಹ ಎಂದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್ ಮಾತನಾಡಿದರು. ಪಡವಲು ವಿರಕ್ತ ಮಠದ ಮಹದೇವ ಸ್ವಾಮೀಜಿ ಆಶೀರ್ವಚನ ನೀಡಿದರು. ಇದಕ್ಕೂ ಮುನ್ನಾ ಶ್ರೀಕಾಳವಡೆಯ ಗುರುಗದ್ದಿಗೆ ಶ್ರೀವೀರಭದ್ರೇಶ್ವರಸ್ವಾಮಿ ದೇವಾಯದಲ್ಲಿ ವಿಶೇಷ ಪೂಜೆ ನಡೆಸಿ ಮಹಾಮಂಗಳಾರತಿ ಮಾಡಿ ತೀರ್ಥಪ್ರಸಾದ ವಿನಿಯೋಗ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಜೆಎಸ್ಎಸ್ ಮಹಾ ವಿದ್ಯಾಪೀಠ ನಿರ್ದೇಶಕ ಬಿ.ನಿರಂಜನ ಮೂರ್ತಿ ಕಾರ್ಯಕ್ರಮ ಉದ್ಘಾಟಿಸಿದರು. ಸಮಾಜ ಸೇವಕ ಶರತ್ ಪುಟ್ಟಬುದ್ದಿ, ತಾಲೂಕು ಕಸಾಪ ಅಧ್ಯಕ್ಷ ಕೆ.ಗುರುಸ್ವಾಮಿ, ಶಿಕ್ಷಕ ಗಿರೀಶ್, ಬಿಡಗಲು ಗ್ರಾಮಸ್ಥರು ಉಪಸ್ಥಿತರಿದ್ದರು.

ಸೇವಾ ಕಾರ್ಯಗಳೊಂದಿಗೆ ಡಾ.ಯತೀಂದ್ರ ಹುಟ್ಟುಹಬ್ಬ ಆಚರಣೆ



ಎಂಎಲ್‌ಸಿ ಡಾ.ಯತೀಂದ್ರ ಹುಟ್ಟುಹಬ್ಬ ಅಂಗವಾಗಿ ತಿ.ನರಸೀಪುರ ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಿಸಲಾಯಿತು.

ತಿ.ನರಸೀಪುರ, ಜೂ.27– ವರುಣ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ತಿ.ನರಸೀಪುರ ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಿಸುವ ಮೂಲಕ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರ ಹುಟ್ಟುಹಬ್ಬ ಆಚರಿಸಿದರು.

ಡಾ.ಯತೀಂದ್ರ ಹುಟ್ಟುಹಬ್ಬ ಅಂಗವಾಗಿ ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಯತೀಂದ್ರ ಅವರಿಗೆ ಆರೋಗ್ಯ ಹಾಗೂ ಹೆಚ್ಚಿನ ಅಧಿಕಾರ ಸಿಗಲೆಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದರು. ಬಳಿಕ ತಿ.ನರಸೀಪುರ ಸರ್ಕಾರಿ ಆಸ್ಪತ್ರೆಗೆ ತೆರಳಿ ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಿಸಿದರು. ಅಲ್ಲದೇ ಗುಂಡ್ಲುಪೇಟೆ ಕರುಣಾಲಯದ ವಿಕಲಚೇತನರು ಹಾಗೂ ಬುದ್ಧಿಮಾಂದ್ಯರಿಗೆ ಮಾಡಲಾಗಿತ್ತು. ಬಿಲಿಗೆರೆ ಪ್ರಾಥಮಿಕ ಶಾಲೆ ಮಕ್ಕಳಿಗೆ ನೋಟ್‌ಬುಕ್, ಪೆನ್ ವಿತರಿಸಿ ತಮ್ಮ ನೆಚ್ಚಿನ ನಾಯಕನ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ತಿ.ನರಸೀಪುರ ಆಸ್ಪತ್ರೆಯಲ್ಲಿ ಮಾತನಾಡಿದ ವರುಣ ಎಸ್‌ಸಿ ಘಟಕದ ಅಧ್ಯಕ್ಷ ಸೋಮಸುಂದರ್, ಸರಳ ವ್ಯಕ್ತಿತ್ವದ ಸ್ನೇಹಜೀವಿ ಡಾ.ಯತೀಂದ್ರ ಅವರ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ನಂಜನಗೂಡು ಹಾಗೂ ತಿ.ನರಸೀಪುರದಲ್ಲಿ ಅನೇಕ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. ಡಾ. ಯತೀಂದ್ರ ಅವರು ಶಾಸಕರಾಗಿದ್ದಾಗ ಎಲ್ಲಾ ವರ್ಗದ ಜನತೆಗೆ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ತಮ್ಮ ತಂದೆ ಸಿದ್ದರಾಮಯ್ಯ ಅವರಂತೆ ಜನಪರ ಕಾಳಜಿ ಹೊಂದಿರುವ ಯತೀಂದ್ರ ಅವರಿಗೆ ದೇವರು ಉತ್ತಮ ಆರೋಗ್ಯ ನೀಡಿ ಅವರು ಕ್ಷೇತ್ರದಲ್ಲಿ ಮತ್ತಷ್ಟು ಅಭಿವೃದ್ಧಿ ಕೆಲಸ ಮಾಡಲು ಶಕ್ತಿ ಕರುಣಿಸಲಿ ಎಂದು ಬೇಡಿಕೊಂಡಿದ್ದೇವೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ ಮಾತನಾಡಿ, ಸಮಾಜಸೇವಾ ಕಾರ್ಯಗಳೊಂದಿಗೆ ಡಾ.ಯತೀಂದ್ರ ಅವರ ಹುಟ್ಟುಹಬ್ಬ ಆಚರಿಸಲಾಗುತ್ತಿದೆ. ತಂದೆಗಾಗಿ ಕ್ಷೇತ್ರ ಬಿಟ್ಟುಕೊಟ್ಟ ಯತೀಂದ್ರ ಅವರಿಗೆ ವಿಧಾನ ಪರಿಷತ್ ಸ್ಥಾನ ದೊರಕಿದೆ. ಮುಂದೆ ಅವರಿಗೆ ಇನ್ನೂ ಹೆಚ್ಚಿನ ಸ್ಥಾನಮಾನ ದೊರಕಿ ಸಚಿವ ಸ್ಥಾನ ಸಿಗುವಂತಾಗಲಿ ಎಂದು ಆಶಿಸಿದರು.

ತಾಯೂರು ಗ್ರಾಪಂ ಮಾಜಿ ಅಧ್ಯಕ್ಷೆ ಗೌರಮ್ಮ, ಬಸವರಾಜು, ಸಾರ್ವಜನಿಕ ಆಸ್ಪತ್ರೆ ಪ್ರಭಾರ ಆಡಳಿತಾಧಿಕಾರಿ ಡಾ. ನಾಗೇಶ್ವರರಾವ್, ಮುಖಂಡರಾದ ಪುರುಷೋತ್ತಮ, ಸುರೇಶ್ ಬಾಬು, ಪರಶಿವಮೂರ್ತಿ, ಮಹಾದೇವ, ನಂಜುಂಡ ಸ್ವಾಮಿ, ಮಹೇಶ್, ನವೀನ್, ಕೃಷ್ಣ ಮತ್ತಿತರಿದ್ದರು.

ಕೃಷ್ಣನಾಯಕ ನಿಧನ

ಹೆಡತಲೆ, ಜೂ.27– ನಂಜನಗೂಡು ತಾಲೂಕಿನ ಹೆಡತಲೆ ಗ್ರಾಮದ ಯಜಮಾನ್ ಕೃಷ್ಣ ನಾಯಕ (70) ಬುಧವಾರ ರಾತ್ರಿ ನಿಧನರಾದರು.



ಮೃತರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಜಮೀನಿನಲ್ಲಿ ಗುರುವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಲ್ಲಾ ಧರ್ಮದ ಸಾರ ದಯೆಯೇ ಧರ್ಮದ ಮೂಲ

ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದ ನಟರಾಜ ಸ್ವಾಮೀಜಿ



ಹುಣಸೂರು, ಜೂ.27– ಎಲ್ಲಾ ಧರ್ಮದ ಸಾರ ದಯೆ. ದಯೆಯೇ ಧರ್ಮದ ಮೂಲ ಎಂದು ತಾಲೂಕಿನ ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದ ನಟರಾಜ ಸ್ವಾಮೀಜಿ ತಿಳಿಸಿದರು.

ನಗರದ ಜಮಾತೆ ಇಸ್ಲಾಮಿ ಹಿಂದ್ ಶಾಖೆ ವತಿಯಿಂದ ಬಕ್ರೀದ್ ಪ್ರಯುಕ್ತ ಈದ್ ಸ್ನೇಹ ಮಿಲನದ ಅಂಗವಾಗಿ ನಗರದ ಮಹಾರಾಜ ಪಾರ್ಟಿ ಹಾಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಭಾಗದ ಮಸೀದಿಗಳಿಗೂ ಮಠಗಳಿಗೂ ಸಾಮರಸ್ಯದ ಕೊರತೆ ಇದೆ. ನಾವು ಇದನ್ನು ಅವಲೋಕಿಸಿ ನೋಡಿದರೆ ಬೀದರ್, ಬಿಜಾಪುರ, ರಾಯಚೂರು ಭಾಗಗಳಲ್ಲಿ ಮಠ, ಮಸೀದಿಗಳಿವೆ. ಎಲ್ಲಿ ಮಸೀದಿಗಳಿವೆಯೋ ಅಲ್ಲಿ ಮಠಗಳೂ ಇರುತ್ತವೆ. ಆದರೆ ಎರಡು ಸಮುದಾಯದಲ್ಲೂ ಸಾಮರಸ್ಯ ಇರಬೇಕು. ಗೋಕಾಕ್‌ನ ಶ್ರವಣ ಶ್ರೀಲಿಂಗೇಶ್ವರಸ್ವಾಮಿ ಮಠದಲ್ಲಿ ಮುಸ್ಲಿಂರೇ ಭಕ್ತರು. ಇಲ್ಲಿ ಸಂಬಂಧವಿದೆ. ಸಾಮರಸ್ಯವಿದೆ. ಪಕ್ವತೆವಿದೆ. ಎಲ್ಲಿ ಪಕ್ವತೆಯಿದೆಯೋ ಪರಿಣಾಮಕಾರಿ ಕೆಲಸ ಕಾರ್ಯದ ಆಲೋಚನೆಗಳು ನಿರ್ಮಾಣ ಆಗುತ್ತದೆ ಎಂದರು.

ಸೇಂಟ್ ಫ್ರಾನ್ಸಿಸ್ ಕ್ಸೆವಿಯರ್ ಚರ್ಚ್ ಧರ್ಮಗುರು ಜಾರ್ಜ್ ಮಾರ್ಟಿನ್ ಮಾತನಾಡಿ, ಸಂವಿಧಾನದಲ್ಲಿರುವ ಸಹಿಷ್ಣುತೆ, ಏಕತೆ ಈ ಎಲ್ಲಾ ಗುಣಗಳ ಮೌಲ್ಯವನ್ನು ನಾವು ಪ್ರಚಾರಗೊಳಿಸಬೇಕು. ಸಮಾಜದಲ್ಲಿ ಒಂದಲ್ಲಾ ಒಂದು ಕಾರಣಕ್ಕೆ ಸಂಘರ್ಷಗಳು ನಡೆಯುತ್ತವೆ. ಅನ್ಯಾಯವಾದಾಗ, ಶೋಷಣೆ ನಡೆದಾಗ, ನಾವೆಲ್ಲರೂ ಒಗ್ಗೂಡಿ ಶಾಂತಿ, ಸೌಹಾರ್ದತೆಗಾಗಿ ಶ್ರಮ ಪಡಬೇಕು. ಶಾಂತಿ, ಸಹಿಷ್ಣುತೆ ಗುಣಗಳು ಇದ್ದಾಗ ಆ ದೇಶ ಪ್ರಗತಿ ಸಾಧಿಸುತ್ತದೆ ಎಂದರು. ಜಮಾತೆ ಇಸ್ಲಾಮಿ ಹಿಂದ್ ರಾಜ್ಯ ಕಾರ್ಯ ದರ್ಶಿ ಅಕ್ಬರ್, ಉಪವಿಭಾಗಾಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ನಿವೃತ್ತ ಡಿವೈಎಸ್ಪಿ ಸುಹೇಲ್ ಅಹಮದ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಅಬ್ದುಲ್ ಕಬೀರ್ ಸಾಬ್, ಚಾಮರಾಜನಗರದ ಜಯನೂಲ್ ಅಬಿದ್ದೀನ್, ಸುಹೇಲ್ ಅಹಮದ್, ವಲಯ ಸಂಚಾಲಕ ಅಬ್ದುಲ್ ಸಾಲಾಮ್, ತಾಲೂಕು ಸಂಚಾಲಕ ಅಜಿಜುಲ್ಲಾ, ಸ್ಥಾನೀಯ ಅಧ್ಯಕ್ಷ ಮುಸ್ತಾಫ, ಜಿಲ್ಲಾ ರೈತ ಸಂಘದ ಅಧ್ಯಕ್ಷ ಕೃಷ್ಣಕುಮಾರ್, ಟ್ಯಾಲೆಂಟ್ ವಿದ್ಯಾಸಂಸ್ಥೆಯ ನವೀನ್ ಅರಿ, ಶಿಕ್ಷಕ ಮಹೇಶ್, ಪುರಸಭಾ ಮಾಜಿ ಸದಸ್ಯರಾದ ಹೆಚ್.ಎಸ್.ವರದರಾಜು, ಜೆ.ಮಹದೇವು, ಮಹದೇವು, ಅಕ್ರಮ್ ಉದ್ದೀನ್ ಇನ್ನಿತರರಿದ್ದರು.

ಮೈಸೂರು ಪಾರಂಪರಿಕತೆ ಸಂರಕ್ಷಣೆಗೆ ಪಾರಂಪರಿಕ ಸಮಿತಿ ಕೆಲ ಬಿಗಿ ನಿಲುವುಗಳನ್ನು ತಾಳಬೇಕು

- ಜಿಲ್ಲಾಧಿಕಾರಿ ಡಾ. ರಾಜೇಂದ್ರ ಸಲಹೆ
- ಇಂಜಿನಿಯರ್‌ಗಳು, ವಾಸ್ತುಶಿಲ್ಪಿಗಳಿಗೆ ತರಬೇತಿ ಕಾರ್ಯಾಗಾರ
- ಮೈಸೂರಲ್ಲಿ ಪಾರಂಪರಿಕ ಕಟ್ಟಡಗಳ ಅಕ್ಕಪಕ್ಕ ನಿರ್ಮಾಣಗಳು ಅದಕ್ಕೆ ಇಂಬು ನೀಡುವಂತಿರಬೇಕು

ಮೈಸೂರು,ಜೂ.27(ಎಂಟಿವೈ)- ದೇಶದ ಯಾವುದೇ ನಗರಕ್ಕೆ ಹೋಲಿಸಿದರೆ ಪಾರಂಪರಿಕತೆಯಲ್ಲಿ ಶ್ರೀಮಂತಿಕೆ ಹೊಂದಿರುವ ಮೈಸೂರಿನ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಪಾರಂಪರಿಕ ಸಮಿತಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ ನೀಡಿದ್ದಾರೆ.

ಮೈಸೂರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿರುವ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಭಾಂಗಣದಲ್ಲಿ ಗುರುವಾರ 'ಪಾರಂಪರಿಕ ಕಟ್ಟಡಗಳ ವೈಶಿಷ್ಟ್ಯತೆ, ಪ್ರಾಮುಖ್ಯತೆ ಮತ್ತು ಪಾರಂಪರಿಕ ಕಟ್ಟಡಗಳ ಸಂರಕ್ಷಿಸುವ ವಿಧಾನ ಮತ್ತು ಅವಶ್ಯಕತೆ' ಕುರಿತು ಇಂಜಿನಿಯರ್‌ಗಳು, ವಾಸ್ತುಶಿಲ್ಪಿಗಳಿಗೆ ಆಯೋಜಿಸಿದ್ದ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಹಾಗೂ ದೇಶದ ಯಾವುದೇ ನಗರಗಳಿಗೆ ಹೋಲಿಸಿದರೆ ಮೈಸೂರಿನ ಪ್ರತಿ ಗಲ್ಲಿ ಗಲ್ಲಿಯಲ್ಲೂ ಪಾರಂಪರಿಕತೆ ಬಿಂಬಿತವಾಗುತ್ತಿದೆ. ಅಲ್ಲದೆ, ತನ್ನದೇ ಆದ ಇತಿಹಾಸ ಹೊಂದಿದೆ. ಎಲ್ಲಾ ದೃಷ್ಟಿಕೋನದಲ್ಲೂ ಮೈಸೂರು ಪಾರಂಪರಿಕ ಶ್ರೀಮಂತಿಕೆ ಹೊಂದಿರುವ ನಗರ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಮೈಸೂರು ನಗರದಲ್ಲಿ ಪಾರಂಪರಿಕತೆ, ವಾಸ್ತುಶಿಲ್ಪ, ನೈಸರ್ಗಿಕ ಸಂಪತ್ತು ಹೇರಳವಾಗಿರುವುದು ಹೆಮ್ಮೆ ಪಡುವ ಸಂಗತಿ. ಆದರೆ, ಇತ್ತೀಚಿನ ವರ್ಷಗಳಲ್ಲಿ ಮೈಸೂರಿನ ಪಾರಂಪರಿಕತೆ ಮೌಲ್ಯ ಕಡಿಮೆಯಾಗುತ್ತಿದೆ ಎಂಬ ವಿಷಾದವಿದೆ. ಇದನ್ನು ಅಧಿಕಾರಿ ವರ್ಗ, ಇಂಜಿನಿಯರ್ ಸೇರಿದಂತೆ ನಾವೆಲ್ಲರೂ ಅವಲೋಕನ ಮಾಡಬೇಕಾಗಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವವರು ಹೆಚ್ಚಿನ ಮಹತ್ವ ನೀಡಬೇಕಾಗಿದೆ. ವಿನೋಬಾ (ಹುಣಸೂರು) ರಸ್ತೆಯಲ್ಲಿ ಬರಬೇಕಾದರೆ ಜಲದರ್ಶಿನಿ, ಜಲಸನ್ನಿಧಿ, ಆರ್.ಸಿ.ಕಚೇರಿ ಇರುವ ಪಾರಂಪರಿಕ ಕಟ್ಟಡ ನೋಡಬಹುದಾಗಿದೆ. ಅದಾದ ಬಳಿಕ ಕೆಲವು ವಾಣಿಜ್ಯ ಕಟ್ಟಡಗಳನ್ನು ಕಾಣಬಹುದು. ಇದರಿಂದ ಪಾರಂಪರಿಕ ಮೌಲ್ಯಕ್ಕೆ ಧಕ್ಕೆಯಾದಂತೆ ಕಂಡು ಬರುತ್ತದೆ. ಮೈಸೂರಲ್ಲಿ ಪಾರಂಪರಿಕ ಕಟ್ಟಡಗಳೊಂದಿಗೆ ಪಾರಂಪರಿಕ ರಸ್ತೆಗಳೂ ಇವೆ. ಈ ಪಾರಂಪರಿಕ ರಸ್ತೆಗಳಿಗೆ ಹೊಂದಿಕೊಂಡಂತೆ ಇರುವ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವಾಗ ಪಾರಂಪರಿಕತೆಗೆ ಒತ್ತು ನೀಡುವಂತೆ ಮನವರಿಕೆ ಮಾಡಿಕೊಡಬೇಕು. ಕಟ್ಟಡದ ಮುಂಭಾಗದ ಫ಼ಸಾಡ್ ಅನ್ನು ಪಾರಂಪರಿಕ ಶೈಲಿಯಲ್ಲಾದರೂ ನಿರ್ಮಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.



ಮೈಸೂರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿರುವ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಭಾಂಗಣದಲ್ಲಿ ಗುರುವಾರ 'ಪಾರಂಪರಿಕ ಕಟ್ಟಡಗಳ ವೈಶಿಷ್ಟ್ಯತೆ, ಪ್ರಾಮುಖ್ಯತೆ ಮತ್ತು ಪಾರಂಪರಿಕ ಕಟ್ಟಡಗಳ ಸಂರಕ್ಷಿಸುವ ವಿಧಾನ ಮತ್ತು ಅವಶ್ಯಕತೆ' ಕುರಿತ ತರಬೇತಿ ಕಾರ್ಯಾಗಾರವನ್ನು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಉದ್ಘಾಟಿಸಿದರು.

ಪಾರಂಪರಿಕತೆ ಕಾಪಾಡುವ ನಿಟ್ಟಿನಲ್ಲಿ ಇಲ್ಲಿ ಪಾರಂಪರಿಕ ಸಮಿತಿಯೂ ಅಸ್ತಿತ್ವದಲ್ಲಿದೆ. ಈ ಸಮಿತಿಯ ಮಾರ್ಗಸೂಚಿ ಪಾರಂಪರಿಕತೆ ಮಹತ್ವ ಕಾಪಾಡಲು ಸಹಕಾರಿಯಾಗಿದೆ. ಆದರೆ, ಈ ಸಮಿತಿ ಕೇವಲ ಸಲಹಾತ್ಮಕ ಸಮಿತಿಯಾಗಿರದೆ, ನಿಯಮಾವಳಿಯನ್ನು ಗಂಭೀರವಾಗಿ ಜಾರಿಗೊಳಿಸುವ ಅವಶ್ಯಕತೆ ಇದೆ ಎಂದರು.

ಖಾಸಗಿ ಒಡೆತನದ ಪಾರಂಪರಿಕ ಕಟ್ಟಡಗಳಿದ್ದರೆ ನೂರೆಂಟು ನಿಯಮಗಳನ್ನು ಹಾಕಿ ಅವರಿಗೆ ತೊಂದರೆ ನೀಡುವುದರ ಬದಲಾಗಿ, ಅವರ ಪ್ಲಾನ್‌ನೊಂದಿಗೆ ಹೆರಿಟೇಜ್ ಪ್ಲಾನ್ ಏನಿದೆ ಎಂದು ಮನವರಿಕೆ ಮಾಡಿಕೊಡಬೇಕು. ಸಂರಕ್ಷಣೆ ವಿಚಾರದಲ್ಲಿ ಅನುಮತಿ ನಿರಾಕರಿಸುವ ಅಥವಾ ಪರಿಶೀಲಿಸದೇ ಏಕಾಏಕಿ ಅನುಮತಿ ಕೊಡುವುದು ಆಗಬಾರದು. ಪಾರಂಪರಿಕತೆ ಉಳಿಸುವ ನಿಟ್ಟಿನಲ್ಲಿ ಗಂಭೀರವಾದ ಕ್ರಮ ಕೈಗೊಳ್ಳ ಬೇಕು. ಇದರ ಮಹತ್ವನ್ನು ಖಾಸಗಿಯವರಿಗೆ ಮನವರಿಕೆ ಮಾಡಿಕೊಡಬೇಕು. ಸರ್ಕಾರಿ ಸ್ವಾಮ್ಯದ ಕಟ್ಟಡಗಳ ಸಂರಕ್ಷಣೆಗೆ ಸರ್ಕಾರದ ವತಿಯಿಂದ ಅನುದಾನ ತರುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ತಿಳಿಸಿದರು.

ಹೆರಿಟೇಜ್ ಮೌಲ್ಯ ಅರ್ಥ ಮಾಡಿಕೊಳ್ಳದಿದ್ದರೆ ಮೈಸೂರಲ್ಲಿ ಕೆಲಸ ಮಾಡಲು ಅನರ್ಹರು. ಇಂಜಿನಿಯರ್ ವಿಭಾಗದ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಪಾರಂಪರಿಕ ರಸ್ತೆಗಳಲ್ಲಿ ಕಟ್ಟಡ ಕಟ್ಟುವಾಗ ಪಾರಂಪರಿಕ ಶೈಲಿ ಅನುಸರಿಸಿದರೆ, ಈ ಹಿಂದಿನ ಪಾರಂಪರಿಕತೆಯೊಂದಿಗೆ ಮುಂದಿನ ಪೀಳಿಗೆಗೆ ಅದರ ಅರಿವು ಮೂಡಿಸಲು ಸಾಧ್ಯ ಎಲ್ಲಾ ದೃಷ್ಟಿಕೋನದಿಂದಲೂ ಗಮನಹರಿಸಿ, ಮೈಸೂರಿನ ಪಾರಂಪರಿಕತೆ ಉಳಿಸಿಕೊಳ್ಳಬೇಕು. ಪಾಲಿಕೆ, ಮುಡಾ ಇಂಜಿನಿಯರ್‌ಗಳು ಮೊದಲು ಪಾರಂಪರಿಕತೆಯ ಮಹತ್ವ ಅರಿಯಬೇಕು. ಪಾರಂಪರಿಕ ರಾಜಧಾನಿ ಮಹತ್ವವನ್ನು ಇನ್ನಷ್ಟು ಉತ್ತುಂಗಕ್ಕೆ ಏರಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

> ಮೈಸೂರಲ್ಲಿ ಸರ್ಕಾರಿ ಸ್ವಾಮ್ಯದ ಕಟ್ಟಡಗಳೊಂದಿಗೆ ಖಾಸಗಿ ಒಡೆತನದ ಪಾರಂಪರಿಕ ಕಟ್ಟಡಗಳೂ ಇವೆ. ಅವುಗಳ ಸಂರಕ್ಷಣೆಗೂ ಸಮತೋಲನದಿಂದ ಕಾರ್ಯನಿರ್ವಹಿಸಬೇಕಾಗುತ್ತದೆ. ಜನರಿಗೆ ಪಾರಂಪರಿಕ ಮೌಲ್ಯ ತಿಳಿಸುವುದರೊಂದಿಗೆ ಉಳಿಸಿಕೊಂಡು ಹೋಗಬೇಕಾಗಿದೆ. ಆ ಮೂಲಕ ನಗರ, ರಾಜ್ಯಕ್ಕೆ ಒಳ್ಳೆ ಹೆಸರು ಬರುವಂತೆ ಮಾಡಬೇಕು. ನಮ್ಮಲ್ಲಿ ಪಿಂಕ್ ಸಿಟಿ ಎನ್ನುವ ಕಾನ್ಸೆಪ್ಟ್ ಇದೆ. ಕಟ್ಟಡಗಳಿಗೆ ಇಂತಹದ್ದೇ ಬಣ್ಣ ಬಳಕೆ ಮಾಡಬೇಕೆಂಬ ನಿಯಮವೂ ಇತ್ತು. ಅದರ ಮಹತ್ವ ಅರಿಯುವುದರಲ್ಲಿ ವಿಫಲರಾಗುತ್ತಿದ್ದೇವೆ. ಆ ಕಾರಣದಿಂದ ಸ್ಥಳೀಯ ಸಂಸ್ಥೆಗಳಿಂದ ಬೇಕಾಬಿಟ್ಟಿಯಾಗಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿದರೆ, ಪಾರಂಪರಿಕ ಮೌಲ್ಯವನ್ನು ಸಾಯಿಸಿದಂತಾಗುತ್ತದೆ. ಇದನ್ನು ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕು.
> - ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತ ಎ.ದೇವರಾಜು ಮಾತನಾಡಿ, ಮೈಸೂರಲ್ಲಿ ಅನೇಕ ಪಾರಂಪರಿಕ ಕಟ್ಟಡಗಳು ಸರ್ಕಾರಿ ಇಲಾಖೆಯ ಸುಪರ್ದಿಯಲ್ಲಿವೆ. ಆದರೆ, ನಿರ್ವಹಣೆಯ ಕೊರತೆ ಎದ್ದು ಕಾಣುತ್ತಿದೆ. ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಪ್ರಯೋಗಾಲಯದ ಕಟ್ಟಡ ಕುಸಿದಿದ್ದು ಇದಕ್ಕೆ ಒಂದು ಉದಾಹರಣೆ. ಮೇಲ್ಛಾವಣಿ ಮೇಲೆ ಮಳೆ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ನಿರ್ವಹಣೆ ಲೋಪದಿಂದ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಹಿನ್ನಡೆಯಾಗುತ್ತಿದೆ ಎಂದು ವಿಷಾದಿಸಿದರು.

ಇದೇ ವೇಳೆ ಹೆರಿಟೇಜ್ ಮಾಟರ್ಸ್ ಸಂಸ್ಥೆಯ ಆರ್ಕಿಟೆಕ್ಚರ್ ಶರತ್‌ಚಂದ್ರ ಪ್ರಾತ್ಯಕ್ಷಿಕೆ ಮೂಲಕ ಪಾರಂಪರಿಕ ಮಹತ್ವ ವಿವರಿಸಿದರು. ಕಾರ್ಯಕ್ರಮದಲ್ಲಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉಪನಿರ್ದೇಶಕಿ ಸಿ.ಎನ್.ಮಂಜುಳಾ, ಎಇಇ ಪಾರ್ಕೇಶ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಬಿಲ್ಲಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಲ್ಕಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶತಭಿಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಗರುಡನ್ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಪೊಕ್ರಿ (ತ)	2 ಪ್ರದರ್ಶನಗಳು
ವೀರ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
ಮುಂಜ್ಯಾ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶತಭಿಷ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಲ್ಕಿ 2898 ಎಡಿ(3ಡಿ) (ತೆ): ಬೆ.11.45ಕ್ಕೆ, ಮ.3.15ಕ್ಕೆ, ಕಲ್ಕಿ 2898 ಎಡಿ(3ಡಿ) (ಹಿಂ): ಸಂ.6.45ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.30ಕ್ಕೆ, ಮುಂಜ್ಯಾ (ಹಿಂ): ಮ.1.35ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4ಕ್ಕೆ, ರಾ.9.45ಕ್ಕೆ, ಪ್ಯಾರಡೈಸ್ (ಮ): ರಾ.7.30ಕ್ಕೆ.
ಸ್ಕ್ರೀನ್ 3	ಎ ಕ್ವೈಟ್ ಪ್ಲೇಸ್ ಡೇ ಒನ್ (ಇಂ): ಬೆ.10.50ಕ್ಕೆ, ರಾ.10.10ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಮಹಾರಾಜ (ತ): ಸಂ.4.25ಕ್ಕೆ, ಕೋಟಿ (ಕ): ರಾ.7.10ಕ್ಕೆ
ಸ್ಕ್ರೀನ್ 4	ಕಲ್ಕಿ 2898 ಎಡಿ(3ಡಿ) (ತೆ): ಬೆ.9.45ಕ್ಕೆ, ಮ.1.15ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ಸಂ.4.40ಕ್ಕೆ.

INOX LIVE THE MOVIE — ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಟ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ,
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

MVC — ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಲವ್ ಲಿ (ಕ): ಬೆ.10.45ಕ್ಕೆ, ಮ.3.35ಕ್ಕೆ, ಕರ್ಮದೊಳಗೆ (ಕ): ಮ.1.40ಕ್ಕೆ, ಕೋಟಿ (ಕ): ಸಂ.6.25ಕ್ಕೆ, ಮಹಾರಾಜ (ತ): ರಾ.9.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ(3ಡಿ) (ತೆ): ಬೆ.10.30ಕ್ಕೆ, ಮ.2.30ಕ್ಕೆ, ಸಂ.6ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 4	ಲವ್ ಲಿ (ಕ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4ಕ್ಕೆ, ರಾ.7.25ಕ್ಕೆ.

PVR CINEMAS — ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಜಿಲ್ಲಾ ವ್ಯಾಪ್ತಿ ಅಕ್ರಮಗಳ ಮೇಲೆ ಕ್ಯಾಮರಾ ಕಣ್ಣು

- 23 ಸ್ಥಳಗಳಲ್ಲಿ 50 ಕ್ಯಾಮರಾ ಅಳವಡಿಕೆ
- ಜುಲೈ 1 ರಿಂದ ಚಾಲನೆ
- ಹೆಲ್ಮೆಟ್ ಧರಿಸದಿರುವುದು ಸೇರಿ ಸಂಚಾರ ನಿಯಮ ಉಲ್ಲಂಘಿಸಿದರೆ ದಂಡಾಸ್ತ್ರ

ಮೈಸೂರು, ಜೂ.27(ಬಿಎಲ್‌ಯು)- ಮೈಸೂರು ಜಿಲ್ಲೆಯ 23 ಸ್ಥಳಗಳಲ್ಲಿ 50 ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಜುಲೈ 1 ರಿಂದ ಇವು ಚಾಲನೆಗೊಳ್ಳಲಿವೆ. ಹೆಲ್ಮೆಟ್ ಧರಿಸದಿರುವುದು ಸೇರಿದಂತೆ ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನ ಸವಾರರಿಗೆ ಕ್ಯಾಮರಾ ದೃಶ್ಯ ಆಧರಿಸಿ ದಂಡ ವಿಧಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಪ್ರತಿ ದಿನ ಅಪಘಾತಗಳು ಸಂಭವಿಸುತ್ತಿದ್ದು, ಕನಿಷ್ಟ ಒಂದಿಬ್ಬರು ಮೃತಪಡುತ್ತಿದ್ದಾರೆ. ಈ ಮೂಲಕ ವಾರ್ಷಿಕ 450 ಜನರು ಅಪಘಾತದಲ್ಲಿ ಮರಣ ಹೊಂದುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹಲವು ಸುಧಾರಣಾ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯ 23 ಸ್ಥಳಗಳಲ್ಲಿ 50 ಕ್ಯಾಮರಾ ಅಳವಡಿಸಿದ್ದು, ಜುಲೈ 1 ರಿಂದ ಇವು ಚಾಲನೆಗೊಳ್ಳಲಿವೆ. ಹೆಲ್ಮೆಟ್ ಧರಿಸದ, ಟ್ರಿಪಲ್ ರೈಡಿಂಗ್, ಸೀಟ್ ಬೆಲ್ಟ್ ಧರಿಸದ ವಾಹನ ಸವಾರರಿಗೆ ಕ್ಯಾಮರಾ ದೃಶ್ಯ ಆಧರಿಸಿ ದಂಡ ವಿಧಿಸಲಾಗುವುದು. ಪ್ರಕರಣ ದಾಖಲಾದ ಮಾಹಿತಿಯನ್ನು ತಕ್ಷಣವೇ ಸದರಿ ವಾಹನದ ನೋಂದಾಯಿತ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಕಳುಹಿಸಲಾಗುವುದು. ಜೊತೆಗೆ ವಾಹನದ ವಾರಸುದಾರರ ವಿಳಾಸಕ್ಕೆ ಚಲನ್ ರವಾನಿಸಲಾಗುವುದು ಎಂದು ತಿಳಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ಮಾಡಿದ ವಾಹನದ ಮಾಲೀಕರು ಅಥವಾ ಚಾಲಕರು ಆನ್‌ಲೈನ್ ವೆಬ್‌ಸೈಟ್ https://payfine.mchallan.com: 7271ನಲ್ಲಿ ದಂಡ ಪಾವತಿಸಬಹುದು. ಇಲ್ಲವೆಂದರೆ ಹತ್ತಿರದ ಪೊಲೀಸ್ ಠಾಣೆಯಲ್ಲಿ ಸದರಿ ದಂಡದ ಮೊತ್ತವನ್ನು ಕೂಡಲೆ ಪಾವತಿ ಮಾಡಬೇಕು ಎಂದು ಸೀಮಾ ಲಾಟ್ಕರ್ ಮಾಹಿತಿ ನೀಡಿದ್ದಾರೆ.

ದಂಡ ಪಾವತಿ ಮಾಡದಿದ್ದಲ್ಲಿ ಮೋಟಾರು ವಾಹನ ಕಾಯ್ದೆ 1988 ಕಲಂ 187 ರನ್ವಯ 3 ತಿಂಗಳ ಕಾರಾಗೃಹ ಅಥವಾ 500 ರೂಪಾಯಿ ದಂಡ ಅಥವಾ ಎರಡರಿಂದಲೂ ಶಿಕ್ಷಿಸಬಹುದಾದ ಶಿಕ್ಷಾರ್ಹ ಅಪರಾಧವಾಗಿರುತ್ತದೆ ಎಂದು ಎಚ್ಚರಿಸಿದ್ದಾರೆ. ಈ ಹಿನ್ನೆಲೆ ಸಾರ್ವಜನಿಕರು ಸಂಚಾರಿ ನಿಯಮ ಉಲ್ಲಂಘಿಸದೆ, ಸಂಚಾರಿ ನಿಯಮಗಳನ್ನು ಪಾಲಿಸಬೇಕೆಂದು ಸೀಮಾ ಲಾಟ್ಕರ್ ಸಲಹೆ ನೀಡಿದ್ದಾರೆ.

ಡಾ.ಯತೀಂದ್ರ ಹುಟ್ಟುಹಬ್ಬ

ಸಾವಿರ ಕುಟುಂಬಕ್ಕೆ ತೆಂಗಿನ ಸಸಿ ವಿತರಣೆ



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್‌ಹಾಲ್ ಎದುರು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಜನ್ಮದಿನದ ಅಂಗವಾಗಿ ಸಾವಿರ ಕುಟುಂಬಗಳಿಗೆ ತೆಂಗಿನ ಸಸಿ ವಿತರಿಸಲಾಯಿತು. ರಾವಂದೂರು ಮಠದ ಶ್ರೀ ಮೋಕ್ಷಪತಿ ಸ್ವಾಮೀಜಿ, ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮತ್ತಿತರರಿದ್ದರು.

ಮೈಸೂರು, ಜೂ.27(ಎಂಕೆ)- ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್‌ಹಾಲ್ ಎದುರು ವಿವಿ ಹಿರಿಯ ವಿದ್ಯಾರ್ಥಿಗಳ ಒಕ್ಕೂಟದ ವತಿಯಿಂದ ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಜನ್ಮದಿನದ ಅಂಗವಾಗಿ ಸಾವಿರ ಕುಟುಂಬಗಳಿಗೆ ತೆಂಗಿನ ಸಸಿ ವಿತರಿಸಲಾಯಿತು.

ತೆಂಗಿನ ಸಸಿ ವಿತರಣೆಗೆ ಚಾಲನೆ ನೀಡಿದ ರಾವಂದೂರು ಮಠದ ಶ್ರೀ ಮೋಕ್ಷಪತಿ ಸ್ವಾಮೀಜಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹುಟ್ಟುಹಬ್ಬ ಆಚರಣೆ ಆಡಂಬರದಿಂದ ವೈಭವಯುತವಾಗಿ ಆಚರಿಸಿಕೊಳ್ಳುವುದು ಸಾಮಾನ್ಯ. ಆದರೆ ಈ ರೀತಿ ಪರಿಸರ ಸ್ನೇಹಿಯಾಗಿ ಹುಟ್ಟುಹಬ್ಬದ ಆಚರಣೆ ಬಹಳ ಅಪರೂಪವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹಾದಿಯಲ್ಲೇ ಸಾಗುತ್ತಿರುವ ಅವರ ಪುತ್ರ ಯತೀಂದ್ರ ಕೂಡ ವೈಚಾರಿಕ ಗಟ್ಟಿತನವನ್ನು ಬೆಳೆಸಿಕೊಳ್ಳಲಿ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅಧಿಕಾರ ಅವರಿಗೆ ದೊರಕಿ ನಾಡಿನ ಸೇವೆ ಮಾಡಬೇಕೆಂದು ಆಶಿಸಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ಭಾರತದ ಸೈದ್ಧಾಂತಿಕ ಮತ್ತು ಬದ್ಧತೆಯ ರಾಜಕಾರಣಿಯಾದ ಸಿಎಂ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಅವರ ಹುಟ್ಟುಹಬ್ಬದ ಅಂಗವಾಗಿ ಪ್ರತಿ ತಾಲೂಕಿಗೆ 100 ತೆಂಗಿನ ಸಸಿಗಳನ್ನು ನೀಡುತ್ತಿದ್ದು, ಸಾವಿರ ಕುಟುಂಬಗಳಿಗೆ ಸಾವಿರ ತೆಂಗಿನ ಸಸಿಗಳನ್ನು ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿದ್ದೇವೆ. ಸಿದ್ದರಾಮಯ್ಯ ಅವರ 75ನೇ ಹುಟ್ಟುಹಬ್ಬದ ಅಂಗವಾಗಿ ಮೈಸೂರು ವಿವಿಯಲ್ಲಿ ಚಿನ್ನದ ಪದಕದ ದತ್ತಿ ಬಹುಮಾನವನ್ನು ನೀಡಿದ್ದೆವು. ಇಂದು ಅದೇ ರೀತಿಯಾಗಿ ಸಸಿಗಳನ್ನು ನೀಡುತ್ತಿದ್ದು, ಮೈಸೂರು ವಿಶ್ವವಿದ್ಯಾನಿಲಯ ಇಂತಹ ಸಾಕಷ್ಟು ನೆನಪುಗಳಿಗೆ ಸಾಕ್ಷಿಯಾಗಿದೆ ಎಂದರು.

ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವರಾದ ಶೈಲಜಾ, ಸಿಂಡಿಕೇಟ್ ಸದಸ್ಯರಾದ ಜಟ್ಟಿಹುಂಡಿ ಬಸವರಾಜು, ನಟರಾಜ್ ಶಿವಣ್ಣ, ಮಾದೇಶ್, ಕೋಟೆ ನಾಗರಾಜ್, ಮೈಸೂರು ವಿವಿ ವಿಶ್ವಮಾನವ ನೌಕರರ ಒಕ್ಕೂಟದ ಅಧ್ಯಕ್ಷ ವಾಸುದೇವ ಮೂರ್ತಿ, ಕೆಪಿಸಿಸಿ ಕಾರ್ಯದರ್ಶಿ ಭಾಸ್ಕರ್, ಮುಖಂಡರಾದ ಪ್ರೊ.ಶಿವಕುಮಾರ್, ಮಲ್ಲೇಶ್ ಕೋಟೆ, ಈಶ್ವರ್ ಚಕ್ಕಡಿ, ತಿಮ್ಮಯ್ಯ, ಸುರೇಶ್ ಪಾಳ್ಯ, ಪ್ರೇಮ್, ಗಂಗಾಧರ್, ಕಾಂತರಾಜ್, ಚರಣರಾಜ್ ಮತ್ತಿತರರಿದ್ದರು.

ಮಾಧ್ಯಮಗಳು ಮಕ್ಕಳ ಸ್ಥಿತಿ-ಗತಿಗಳ ಮೇಲೆ ಬೆಳಕು ಚೆಲ್ಲಬೇಕು

ಯುನಿಸೆಫ್ ಪ್ರತಿನಿಧಿ ಪ್ರೋಸುನ್ ಸೇನ್ ಸಲಹೆ

ಮೈಸೂರು,ಜೂ.27(ಎಂಟಿವೈ)- ಪತ್ರಕರ್ತರು ಮಕ್ಕಳಿಗೆ ಸಂಬಂಧಿಸಿದ ವಿಶೇಷ ವರದಿ, ಲೇಖನ ಬರೆಯುವುದರಿಂದ ಓದುಗರನ್ನು ಆಕರ್ಷಿಸಬಹುದು ಎಂದು ಕರ್ನಾಟಕ, ತೆಲಂಗಾಣ ಹಾಗೂ ಆಂಧ್ರಪ್ರದೇಶದ ಯುನಿಸೆಫ್ ಸಂವಹನ ವಕಾಲತ್ತು ಮತ್ತು ಪಾಲುದಾರಿಕೆ ತಜ್ಞ ಪ್ರೋಸುನ್ ಸೇನ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗವು ಯುನಿಸೆಫ್ ಸಹಯೋಗದೊಂದಿಗೆ ವಿಜ್ಞಾನ ಭವನದಲ್ಲಿ ಗುರುವಾರ ಆಯೋಜಿಸಿದ್ದ 'ಬದಲಾವಣೆಗಾಗಿ ಮಾಧ್ಯಮ-ಮಕ್ಕಳ ವಿಷಯಗಳು' ಕುರಿತ ಎರಡು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪತ್ರಕರ್ತರು ಮಕ್ಕಳ ಕುರಿತಂತೆ ಯಾವುದೇ ವರದಿ, ವಿಶೇಷ ಲೇಖನ ಬರೆಯುವ ಮುನ್ನ, ಸಂಬಂಧಿಸಿದ ಕಾಯಿದೆಗಳನ್ನು ತಿಳಿದುಕೊಂಡಿರಬೇಕು. ಅಲ್ಲದೆ, ಸಂಬಂಧಿಸಿದ ಇಲಾಖೆಯನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬೇಕು. ಮಕ್ಕಳಿಗೆ ಸಂಬಂಧಿಸಿದ ಕೆಲವು ವರದಿಗಳ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವ ಅಗತ್ಯವಿದೆ ಎಂದರು.

ಸಮಾಜದಲ್ಲಿ ಬದಲಾವಣೆ ತರಲು ಮಾಧ್ಯಮವನ್ನು ಬಳಸಿಕೊಳ್ಳಬೇಕಾದರೆ ಅತೀ ಹೆಚ್ಚು ಪ್ರಸಾರವುಳ್ಳ ಪತ್ರಿಕೆಗಳ ಸಂಪಾದಕರಿಗೆ, ವರದಿಗಾರರಿಗೆ ಉಪಯುಕ್ತ ಮಾಹಿತಿಗಳ ಸಂಗ್ರಹ ಹೆಚ್ಚು ಇರಬೇಕು. ಇಂತಹ ಕಾರ್ಯಾಗಾರಗಳು ಕೇವಲ ಒಂದು ಪತ್ರಿಕೆ ಅಥವಾ ಒಂದು ಜಿಲ್ಲೆಗೆ ಸೀಮಿತಗೊಳ್ಳದೆ ಕರ್ನಾಟಕದ ಎಲ್ಲಾ ಪತ್ರಕರ್ತರನ್ನು ಒಳಗೊಂಡಂತೆ ನಡೆಸಬೇಕು. ಈ ಕಾರ್ಯಕ್ರಮ ಮಕ್ಕಳ ವಿದ್ಯಾಭ್ಯಾಸ, ರಕ್ಷಣೆ, ಆರೋಗ್ಯ ಹಾಗೂ ಅಭಿವೃದ್ಧಿಯ ಉದ್ದೇಶ ಒಳಗೊಂಡಿರುವುದು ಶ್ಲಾಘನೀಯ. ಸಂವಿಧಾನಾತ್ಮಕವಾಗಿ ಇರುವ ಮಕ್ಕಳ ಹಕ್ಕುಗಳು ದಿನೇ ದಿನೆ ಬದಲಾವಣೆ ಹೊಂದುತ್ತಿವೆ ಎಂದು ತಿಳಿಸಿದರು.



ಮೈಸೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗವು ಯುನಿಸೆಫ್ ಸಹಯೋಗದೊಂದಿಗೆ ವಿಜ್ಞಾನ ಭವನದಲ್ಲಿ ಗುರುವಾರ ಆಯೋಜಿಸಿದ್ದ 'ಬದಲಾವಣೆಗಾಗಿ ಮಾಧ್ಯಮ-ಮಕ್ಕಳ ವಿಷಯಗಳು' ಕುರಿತ ಕಾರ್ಯಾಗಾರವನ್ನು ಕರ್ನಾಟಕ, ತೆಲಂಗಾಣ ಹಾಗೂ ಆಂಧ್ರಪ್ರದೇಶದ ಯುನಿಸೆಫ್ ಸಂವಹನ ವಕಾಲತ್ತು ಮತ್ತು ಪಾಲುದಾರಿಕೆ ತಜ್ಞ ಪ್ರೋಸುನ್ ಸೇನ್ ಉದ್ಘಾಟಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಪತ್ರಕರ್ತರಿಗೆ ದಿನವೂ ಕಲಿಕೆಯ ದಿನವಾಗಿರುತ್ತದೆ. ಪತ್ರಿಕೋದ್ಯಮ ಕ್ಷೇತ್ರದಲ್ಲಿ ಪುನಶ್ಚೇತನ ತರಬೇತಿ ಅಗತ್ಯ. ಪ್ರಸ್ತುತ ಸಂದರ್ಭದಲ್ಲಿ ಬಹಳಷ್ಟು ಮುಂದುವರೆದು ಮಾಹಿತಿ ಪಡೆಯಬೇಕಾಗಿದೆ. ಸಾರ್ವಜನಿಕರಿಗೆ ಸರಿಯಾದ ಮಾಹಿತಿಯನ್ನು ಕೊಡಬೇಕಾದರೆ ಅದರ ಬಗ್ಗೆ ಅರಿವಿರಬೇಕು. ಜಿಲ್ಲಾ ವರದಿಗಾರರು ಎಲ್ಲಾ ವಿಷಯಗಳಲ್ಲಿ ವರದಿ ಮಾಡಬೇಕಾಗುತ್ತದೆ. ಮಕ್ಕಳ ಅಪೌಷ್ಟಿಕತೆ, ಅಭಿವೃದ್ಧಿಯಂತಹ ಸಮಸ್ಯೆಗಳು ಗ್ರಾಮೀಣ ಪ್ರದೇಶದಲ್ಲಿರುವುದರಿಂದ ಪ್ರಾದೇಶಿಕವಾಗಿ ಹೆಚ್ಚು ಸುದ್ದಿಗಳು ದೊರೆಯುತ್ತವೆ. ಕೇವಲ ಒಂದೇ ದೃಷ್ಟಿಕೋನ ಇಟ್ಟುಕೊಂಡು ಸುದ್ದಿ ಬರೆಯುವುದು ಸರಿಯಲ್ಲ. ಪ್ರತಿಯೊಂದು ವಿಷಯದ ಬಗ್ಗೆ ತಿಳಿದಿರಬೇಕು ಎಂದರು.

ಇದಕ್ಕೂ ಮುನ್ನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಎಸ್ ಸಪ್ನಾ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಭಾಗದ ಪ್ರಾಧ್ಯಾಪಕ ಡಾ.ಸಿ.ಕೆ.ಪುಟ್ಟಸ್ವಾಮಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ವೀಕ್ಷಣಾಲಯದ ಸಂಚಾಲಕ ಡಾ.ವಾಸುದೇವ ಶರ್ಮ, ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಡಾ.ಪಾಂಡುರಂಗ ಮಾತನಾಡಿದರು. ಮಂಜುನಾಥ್ ಸುಬೇದಾರ್ ನಿರೂಪಿಸಿದರು. ಕಾರ್ಯಾಗಾರದಲ್ಲಿ ಪತ್ರಕರ್ತರು, ಸಂಶೋಧಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ.

ಕೋರ್ ಇಂಜಿನಿಯರಿಂಗ್ ಕ್ಷೇತ್ರದ ಕುರಿತು ನಾಳೆ ಚರ್ಚೆ, ಸಂವಾದ

ಮೈಸೂರು, ಜೂ.27(ಜಿಎ)- ಮೈಸೂರಿನ ಎನ್‌ಐಇ ಕಾಲೇಜು ವತಿಯಿಂದ ಕೋರ್ ಎಂಜಿನಿಯರಿಂಗ್ ಕ್ಷೇತ್ರಗಳತ್ತ ವಿದ್ಯಾರ್ಥಿಗಳ ಆಸಕ್ತಿ ಸೆಳೆಯುವ ನಿಟ್ಟಿನಲ್ಲಿ ಜೂ.29ರಂದು ಸಾಧಕರೊಂದಿಗೆ ಚರ್ಚೆ ಮತ್ತು ಸಂವಾದ ಏರ್ಪಡಿಸಲಾಗಿದೆ ಎಂದು ಕಾಲೇಜಿನ ಪ್ಲೇಸ್ಮೆಂಟ್ ವಿಭಾಗದ ಮುಖ್ಯಸ್ಥರಾದ ಹರ್ಷಿತ್ ದಿವಾಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಈ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆ ಮತ್ತು ಅಧ್ಯಯನ ಶಾಖೆ ವಿಷಯ ಕುರಿತ ಚರ್ಚಾ ಕಾರ್ಯಕ್ರಮ ಆಯೋಜಿಸಿದ್ದು, ಈ ಕ್ಷೇತ್ರದ ದಿಗ್ಗಜರೊಡನೆ ಸಂವಾದ ನಡೆಸುವ ಅವಕಾಶ ವಿದ್ಯಾರ್ಥಿಗಳಿಗೆ ಸಿಗಲಿದೆ ಎಂದರು. ಭಾರತೀಯ ಕೈಗಾರಿಕೆಗಳ ಒಕ್ಕೂಟದ ಸಹಯೋಗದಲ್ಲಿ ತಮ್ಮ ಕಾಲೇಜು ಈ ಕಾರ್ಯಕ್ರಮ ಆಯೋಜಿಸಿದ್ದು, ಇದರಲ್ಲಿ ಕೋರ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿನ ವಿಪುಲ ಉದ್ಯೋಗಾವಕಾಶ ಕುರಿತಂತೆ ಉದ್ಯಮ ಕ್ಷೇತ್ರದ ದಿಗ್ಗಜರಾದ ನಾಗಾರ್ಗರ್ಗೇಶ್ವರಿ, ಹರ್ಷ ಬಸವರಾಜು, ಎಂ.ವಿ.ಕಾರ್ತಿಕ್, ಸಂತೋಷ್ ಗುಂಡಾಪಿ ಮೊದಲಾದವರು ಪಾಲ್ಗೊಂಡು ವಿದ್ಯಾರ್ಥಿಗಳೊಡನೆ ಸಂವಾದ ನಡೆಸಿ, ಅವರ ಅನುಮಾನಗಳನ್ನು ಬಗೆಹರಿಸಲಿದ್ದಾರೆ. ಸುದ್ದಿಗೋಷ್ಠಿಯಲ್ಲಿ ವಿವೇಕ್ ಭಾರದ್ವಾಜ್, ಪ್ರೊ.ಹೇಮಂತ್ ಉಪಸ್ಥಿತರಿದ್ದರು.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಗುರುವಾರ	88.40 ಅಡಿ
ಒಳಹರಿವು	3856 ಕ್ಯೂಸೆಕ್
ಹೊರಹರಿವು	472 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಗುರುವಾರ	2269.22 ಅಡಿ
ಒಳಹರಿವು	16977 ಕ್ಯೂಸೆಕ್
ಹೊರಹರಿವು	1000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಗುರುವಾರ	2832.65 ಅಡಿ
ಒಳಹರಿವು	221 ಕ್ಯೂಸೆಕ್
ಹೊರಹರಿವು	30 ಕ್ಯೂಸೆಕ್





ದಾಖಲೆ ಕಳೆದುಹೋಗಿರುತ್ತದೆ

ಶ್ರೀ ಮಂಜುನಾಥ ಜಿ S/o Late ಜಯಪ್ಪ ಎಸ್.ಕೆ. ಜೋಡಿ ಹರಿಹರಪುರ, ಬಿಳಿಗೆರೆ ಹೋಬಳಿ, ತಾಯೂರು ಗ್ರಾಮ ಪಂಚಾಯಿತಿಯ ನಾನು ಈ ಸ್ವತ್ತು 11A ಸಂಖ್ಯೆ 152200500905300001 ಸ್ವತ್ತಿನ ಸಂಖ್ಯೆ 1/1ನ್ನು ಒಳಗೊಂಡ ಹಕ್ಕು ನಿವೃತ್ತಿ ಪತ್ರ ಸಂಖ್ಯೆ TNP-1-03992-2021-22 ನ್ನು ಕಳೆದುಕೊಂಡಿರುತ್ತೇನೆ.

ಸಿಕ್ಕಿದವರು ಸಂಪರ್ಕಿಸಿ:

9964338714

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)


ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **https://kppp.karnataka.gov.in** ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2024-25/ SE1879	ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಪ್ಯಾಟೋಮೆಟಿಕ್ ಯಂತ್ರಗಳು, ಪೆಸ್ಟ್ ಕಂಟ್ರೋಲ್ ಸೇವೆಗಳು ಹಾಗೂ ವಿವಿಧ ವಿಭಾಗಗಳಲ್ಲಿ ಅಳವಡಿಸುವ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳಿಗೆ ದ್ವೈವಾರ್ಷಿಕ ನಿರ್ವಹಣೆ ವಹಿಸಿಕೊಡುವ ಬಗ್ಗೆ.	10.07.2024 ಸಂಜೆ 5.00 ಗಂಟೆಯವರೆಗೆ
2	KMF/2024-25/ IND0811	ಒಕ್ಕೂಟಕ್ಕೆ ಅವಶ್ಯವಿರುವ 2500 MT ಉರುವಲು ಸೌದೆಯನ್ನು ಅರ್ಧ ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	10.07.2024 ಸಂಜೆ 5.00 ಗಂಟೆಯವರೆಗೆ
2	KMF/2024-25/ IND0812	ಒಕ್ಕೂಟಕ್ಕೆ ಅವಶ್ಯವಿರುವ ಪೌಡರ್ ಪ್ಯಾಕಿಂಗ್ ಯಂತ್ರ, ಮೈಸೂರ್ ಪ್ಯಾಕ್ ವ್ಯಾಟ್ ಹಾಗೂ ಮಿಡ್ ರೇಂಜ್ ಸರ್ವರ್ ಅನ್ನು ಖರೀದಿಸಿ ಅಳವಡಿಸುವ ಬಗ್ಗೆ.	12.07.2024 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು, (7411654265) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

3ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಯ॥ ಬಿ.ನಾರಾಯಣರವರು

ಮಾಲೀಕರು, ಚಂದ್ರಿಕ ಬ್ರಿಕ್ಸ್ ಇಂಡಸ್ಟ್ರಿ, ಶ್ರೀ ಲಕ್ಷ್ಮೀನಾರಾಯಣ ಫ್ಯೂಯಲ್ ಸ್ಟೇಷನ್

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಚಿರಸ್ಥಾಯಿಯಾಗಿದೆ. ನೀವು ತೋರಿದ ಪ್ರೀತಿ, ಆತ್ಮವಿಶ್ವಾಸ, ಆದರ್ಶ ಮಾರ್ಗದಲ್ಲೇ ಅನುದಿನವೂ ಸಾಗಿದ್ದೇವೆ. ನಿಮ್ಮ ಆತ್ಮಕ್ಕೆ ಸದಾ ಚಿರಶಾಂತಿ ಕೋರುವ...

ಧರ್ಮಪತ್ನಿ ಶ್ರೀಮತಿ ಲಕ್ಷಮ್ಮನಾರಾಯಣಪ್ಪ,
ಮಗ, ಸೊಸೆ, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು,
ಕುಟುಂಬವರ್ಗ ಹಾಗೂ ಹೂಟಗಳ್ಳಿ ಗ್ರಾಮಸ್ಥರು